ಮೇಲೆ ಕ್ರಮ ತೆಗೆದುಕೊಳ್ಳಬೇಕು. ದಯಮಾಡಿ third party inspection ಮತ್ತು AC inspection ಅನ್ನು ತೆಗೆದುಹಾಕಬೇಕು. ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ಮತ್ತೊಮ್ಮೆ ಧನ್ಯವಾದಗಳನ್ನು ಹೇಳಿ, ಮಾನ್ಯ ಮುಖ್ಯಮಂತ್ರಿಯವರು ಎಲ್ಲರ ಆಸೆಗಳನ್ನು, ಭರವಸೆಗಳನ್ನು ಈಡೇರಿಸುವಂಥ ರೀತಿಯಲ್ಲಿ ನಾವು ಹೇಳಿದಂಥ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಮಂಡ್ಯ Sugar Factory ವಿಚಾರದಲ್ಲಿ ದಯಮಾಡಿ ತಾವು ತನಿಖೆಗೆ ಆದೇಶ ಮಾಡಬೇಕೆಂದು ಹೇಳಿ, ಜಿಲ್ಲಾ ಜನತೆಯ ಪರವಾಗಿ ವಿನಂತಿ ಮಾಡಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

5) 1) ಪ್ರಕಟಣೆ

ಅಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 118ರ ಮೇರೆಗೆ ವಿಧಾನ ಪರಿಷತ್ತಿನಲ್ಲಿ 2013ನೇ ಸಾಲಿನ ಕರ್ನಾಟಕ ಪೊಲೀಸ್ (ತಿದ್ದುಪಡಿ) ವಿಧೇಯಕವನ್ನು, ದಿನಾಂಕ:11.06.2013ರಂದು ಯಾವ ತಿದ್ದುಪಡಿಗಳಿಲ್ಲದೇ ಅಂಗೀಕರಿಸಲಾ-ಗಿದೆಯೆಂದು ತಿಳಿಸಿರುತ್ತಾರೆ.

2) ಪ್ರಕಟಣೆ

ಅಧ್ಯಕ್ಷರು : ಕಾರ್ಕಳ ವಿಧಾನಸಭಾ ಕ್ಷೇತ್ರದ ಸದಸ್ಯರಾದ ಶ್ರೀ ವಿ.ಸುನೀಲ್‌ಕುಮಾರ್‌ರವರನ್ನು ವಿಧಾನ ಸಭೆಯ ಭಾರತೀಯ ಜನತಾ ಪಕ್ಷದ ಮುಖ್ಯ ಸಚೇತಕರನ್ನಾಗಿ ನೇಮಕ ಮಾಡಲಾಗಿದೆಯೆಂದು ಭಾರತೀಯ ಜನತಾ ಪಕ್ಷದ ಶಾಸಕಾಂಗ ಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್‌ರವರು ಪತ್ರದ ಮುಖೇನ ತಿಳಿಸಿರುತ್ತಾರೆಂದು ಈ ಮೂಲಕ ತಿಳಿಸಲಾಗಿದೆ.

6. ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಮುಂದುವರೆದ ಚರ್ಚೆ:

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಮೇಲುಕೋಟೆ) : ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ನೂತನ ಸರ್ಕಾರ ಬಂದು ಒಂದು ತಿಂಗಳು ಆಗಿದೆ. ಮಾನ್ಯ

ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾರೆ. ಅವರು ಒಳ್ಳೆಯ ಕೆಲಸವನ್ನು ಮಾಡಲಿ ಎಂದು ಶುಭವನ್ನು ಕೋರುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಬಹಳ ಮುಖ್ಯವಾದ ವಿಷಯ ಚರ್ಚೆಯಾಗಬೇಕಾಗಿದೆ. ಈ ರಾಜ್ಯದಲ್ಲಿ ರೈತರ ಆತ್ಮಹತ್ಯೆಯ ಬಗ್ಗೆ ಒಂದು ಒಳ್ಳೆಯ ಶಬ್ದ, ದುಃಖವನ್ನು ವ್ಯಕ್ತಪಡಿಸತಕ್ಕಂಥ, ಸಾಂತ್ವನ ಹೇಳತಕ್ಕಂಥ ಒಂದು ಹೊಣೆಗಾರಿಕೆ, ಜವಾಬ್ದಾರಿ ಈ ಸರ್ಕಾರಕ್ಕೆ ಇರಬೇಕಾಗುತ್ತದೆ. ಕವಿ ಕುವೆಂಪುರವರು ಒಂದು ಮಾತನ್ನು ಹೇಳುತ್ತಾರೆ, ಅದು ಏನೆಂದರೆ, " ಬಿಳಿಯರೇ ಬರಲಿ, ಕರಿಯರೇ ಬರಲಿ, ರಾಜ್ಯವಾವದಿಂ ಸುಲಿಗೆ ರೈತರಿಗೆ" ಈ ದೇಶದ ಅನ್ನದಾತನ ಆತ್ಮಕ್ಕೆ ಶಾಂತಿ ಕೊಡಬೇಕು.

ಮಾನ್ಯ ಮುಖ್ಯಮಂತ್ರಿಗಳು ಒಂದು ಒಳ್ಳೆಯ ಕೆಲಸ ಮಾಡಬೇಕು. ರೈತರೇ ಆತ್ಮಹತ್ಯೆ ಮಾಡಿಕೊಳ್ಳಬೇಡಿ, ನಿಮ್ಮ ಸಾವು ರಾಜ್ಯಕ್ಕೆ ತುಂಬಲಾರದಂಥ ನಷ್ಟ. ಆದ್ದರಿಂದ ನೀವು ಜಿಲ್ಲಾ ಆಡಳಿತ ಮತ್ತು ಸರ್ಕಾರವನ್ನು ಸಂಪರ್ಕ ಮಾಡಿ. ನಿಮ್ಮ ಸಂಕಟ, ದುಃಖ-ದುಮ್ಮಾನಗಳಿಗೆ ನಾವು ಸ್ಪಂದಿಸುವುದರ ಮೂಲಕ ನಿಮ್ಮ ಆತ್ಮಹತ್ಯೆಯನ್ನು ನಿಲ್ಲಿಸುತ್ತೇವೆ ಎಂದು ಹೇಳಿ ವಾರ್ತಾ ಇಲಾಖೆಯ ಮೂಲಕ ಒಂದು ಬೋರ್ಡ್ ಹಾಕುವಂಥ ಕೆಲಸ ಮಾಡಬೇಕು. ಇವತ್ತು ಆ ರೀತಿಯ ಆಲೋಚನೆಗಳನ್ನು ಮಾಡಬೇಕು. ಏಕೆಂದರೆ ಹಳ್ಳಿಗಳು ವೃದ್ಧಾಶ್ರಮಗಳಾಗುತ್ತಿವೆ. ಎಲ್ಲ ಯುವಕರು ಹಳ್ಳಿಗಳನ್ನು ಬಿಟ್ಟು ಗುಳೆ ಹೋಗುತ್ತಿದ್ದಾರೆ. ಆದ್ದರಿಂದ ತಾವು ಅತ್ಯಂತ ಗಂಭೀರವಾಗಿ ರೈತರ ಬಗ್ಗೆ ಆಲೋಚನೆ ಮಾಡಬೇಕು. ದುಡಿಯುವ ವರ್ಗ ನಾಶವಾದರೆ ರಾಜ್ಯದ, ರಾಷ್ಟ್ರದ ಆಹಾರ ಭದ್ರತೆ ನಾಶವಾಗುತ್ತದೆ. ಮೊನ್ನೆ, ನಾರ್ತ್ ಕೊರಿಯಾದಲ್ಲಿ ಆಹಾರ ಭದ್ರತೆ ನಾಶವಾದ್ದರಿಂದ ತನ್ನ ಎರಡು ಮಕ್ಕಳಲ್ಲಿ ಒಂದು ಮಗುವನ್ನು ಕತ್ತರಿಸಿ ಬೇಯಿಸಿ ತಿಂದಂಥ ಉದಾಹರಣೆ ಪತ್ರಿಕೆಗಳಲ್ಲಿ ಬಂತು. ಆದ್ದರಿಂದ ಈ ರಾಜ್ಯದ ಮತ್ತು ದೇಶದ ಆಹಾರ ಭದ್ರತೆಗಾಗಿ, ಸುಮಾರು 150 ಲಕ್ಷ ಟನ್ ಆಹಾರವನ್ನು ಉತ್ಪಾದನೆ ಮಾಡುವಂಥ ರೈತರನ್ನು ರಕ್ಷಣೆ ಮಾಡುವಂಥ ಕೆಲಸ ಮಾಡಬೇಕು. ಅದರ ಬಗ್ಗೆ ಬಹಳ ದೊಡ್ಡ ಆಲೋಚನೆಗಳನ್ನು ಒಳಗೊಂಡ ಚರ್ಚೆಯಾಗಬೇಕು. ಒಂದೇ ಸಾರಿ ಎಲ್ಲವನ್ನೂ ಮಾಡುವುದಕ್ಕಾಗುತ್ತದೆ ಎಂದು ನಾನು ಹೇಳುತ್ತಿಲ್ಲ. ಈಗ ಈ ಸರ್ಕಾರ ಈ ಆಲೋಚನೆಯ ದಿಕ್ಕಿನಲ್ಲಿ ಸಾಗುತ್ತಿದೆ ಎನ್ನುವ ಒಂದು preamble ಕೊಟ್ಟಿದ್ದಾರೆ. ಅದರಲ್ಲಿ ಮೊದಲನೆಯದು ಭ್ರಷ್ಟಾಚಾರ ನಿರ್ಮೂಲನೆ. ಎಲ್ಲರೂ ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತೇವೆ.

ತಾಲ್ಲೂಕು ಆಫೀಸಿನಿಂದ ಹಿಡಿದು ವಿಧಾನ ಸೌಧದವರೆಗೆ ಭ್ರಷ್ಟಾಚಾರದ ಬಗ್ಗೆ ಚರ್ಚೆ ನಡೆಯುತ್ತದೆ. ಭ್ರಷ್ಟಾಚಾರವನ್ನು ನಿಲ್ಲಿಸಬೇಕಾದರೆ ಸರ್ಕಾರದ ವ್ಯಾಪ್ತಿಯಲ್ಲಿ ಅಕ್ರಮ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವಂಥ ಕಾನೂನು ಮಾಡುವ ಶಕ್ತಿ ಇರಬೇಕು. ಅಕ್ರಮ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವಂಥ ಕಾನೂನು ಮಾಡಿದರೆ ಈ ರಾಜ್ಯದಲ್ಲಿ ಭ್ರಷ್ಟಾಚಾರವನ್ನು ನಿಯಂತ್ರಣ ಮಾಡಬಹುದು. ಈ ಸದನದಲ್ಲಿ ಒಂದು unanimous resolution ಆಗಬೇಕು. ಎರಡನೆಯದಾಗಿ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಒಟ್ಟಿಗೆ ಕುಳಿತು ಚರ್ಚೆ ಮಾಡಿ, ಇವತ್ತು ವರ್ಷಕ್ಕೆ ಒಂದು ಸಲ ಹೊಸ ನೋಟನ್ನು ಪ್ರಿಂಟ್ ಮಾಡಿದರೆ ಯಾರ್ಯಾರ ಹತ್ತಿರ ಬ್ಲ್ಯಾಕ್ ಮನಿ ಇರುತ್ತದೆ ಅದೆಲ್ಲವೂ ಹೊರಗಡೆ ಬರುವಂಥ ಕೆಲಸವಾಗುತ್ತದೆ. ನಮ್ಮ ಊರಿನಲ್ಲಿ ಒಬ್ಬ ತೆಂಗಿನಕಾಯಿ ಕಳ್ಳತನ ಮಾಡಿ ನಂತರ 'ಮರ ನಿಮ್ಮದು, ಫಲ ನಮ್ಮದು' ಎಂದು ಒಂದು ಬೋರ್ಡ್ ಹಾಕಿದ್ದ. ಹಾಗೆಯೇ ವಿಧಾನ ಸೌಧದಲ್ಲಿ, 'ತೆರಿಗೆ ನಿಮ್ಮದು, ದುಡ್ಡೆಲ್ಲ ನಮ್ಮದು' ಎಂದು ಬೋರ್ಡ್ ಹಾಕುವ ಕಾಲ ಬಂದರೂ ಬರಬಹುದು. ಆದ್ದರಿಂದ, ಭ್ರಷ್ಟಾಚಾರ ಬಗ್ಗೆ ಕೇವಲ ಭಾಷಣ ಆಗಬಾರದು. ಈ ಬಗ್ಗೆ ಒಂದು ವಿಶೇಷ ಆಲೋಚನೆ ಮಾಡಬೇಕು. ಈ ಲೋಕಾಯುಕ್ತದಲ್ಲಿ ಇಪ್ಪತಾರು ಸಾವಿರ ಕೇಸುಗಳಿವೆ. ಲೋಕಾಯುಕ್ತದಲ್ಲಿರುವ ಈ ಇಪ್ಪತ್ತಾರು ಸಾವಿರ ಕೇಸುಗಳು ಯಾರದ್ದು? ನಮ್ಮ ಊರಿನಲ್ಲಿ ಕಬ್ಬು ಕುಡಿಯುವ ಕೃಷ್ಣಣ್ಣನ ಮಗನ ಮೇಲಿದೆಯೇ? ಇಲ್ಲದಿದ್ದರೆ ನಮ್ಮ ಊರಿನಲ್ಲಿ ದುಡಿಯುತ್ತಿರುವವರು, ಕಬ್ಬು ಕಡಿಯುತ್ತಿರುವವರು, ಗಾಡಿ ಹೊಡೆಯುವವರ ಮೇಲೆ ಲೋಕಾಯುಕ್ತ ಕೇಸ್ ಇದೆಯೇ?

(ಈ ಹಂತದಲ್ಲಿ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಈ ನಾಡಿನಲ್ಲಿರುವ ಅತ್ಯಂತ ಹೆಚ್ಚು ಓದಿರುವವರು, ಆಡಳಿತದಲ್ಲಿರುವವರ ಮೇಲೆ ಇಪ್ಪತ್ತಾರು ಸಾವಿರ ಕೇಸುಗಳಿವೆ. ಈ ಇಪ್ಪತ್ತಾರು ಸಾವಿರ ಕೇಸುಗಳ ಬಗ್ಗೆ ಏನು ಮಾಡುತ್ತೀರಿ? ನಾವು ಚಿಕ್ಕವರಿದ್ದಾಗ ಹಳ್ಳಿಯಲ್ಲಿ ನ್ಯಾಯ ಮಾಡುವುದನ್ನು ನೋಡುತ್ತಿದ್ದೆವು. ಎರಡು ತೆಂಗಿನ ಕಾಯಿ ಕದ್ದರೆ ಒಂದೊಂದು ಕಾಯಿಗೆ ನೂರು ರೂಪಾಯಿಗಳ ದಂಡ ಹಾಕುತ್ತಿದ್ದರು. ಒಂದು ಕಾಯಿನ ಬೆಲೆ ಐದು ರೂಪಾಯಿಗಳಿದ್ದರೆ ಅದರ ಇಪ್ಪತ್ತುಪಟ್ಟು ದಂಡ

ಹಾಕುತ್ತಿದ್ದರು. ಹಾಗೆಯೇ, ಒಂದು ಕೋಟಿ ಕಳ್ಳತನ ಮಾಡುವವರಿಗೆ ಇಪ್ಪತ್ತು ಕೋಟಿ ದಂಡ ಹಾಕುವಂಥ ಕಾನೂನು ಇದ್ರೆ ಅದು ಪರಿಸ್ಥಿತಿಯನ್ನು ಒಂದು ಸ್ವಲ್ಪ ಬದಲಾವಣೆ ಮಾಡುತ್ತದೆ. ಇವತ್ತು ಕಾನೂನಿನಲ್ಲಿ ತಿರುಚಿಕೊಳ್ಳುವಂಥ ಶಕ್ತಿ ಇದೆ, 10–15–20 ವರ್ಷ ಪ್ರೊಲಾಂಗ್ ಮಾಡುವಂಥದ್ದು ಆಗುತ್ತಿದೆ. ನಾಡನ್ನು ರಕ್ಷಣೆ ಮಾಡಬೇಕಾದಂಥ ವರ್ಗದ ಜನರೇ ಇಷ್ಟೊಂದು ಭ್ರಷ್ಟಾಚಾರ ಮಾಡುತ್ತಿದ್ದರೆ, ಭ್ರಷ್ಟಾಚಾರದ ಬಗ್ಗೆ ಕೇವಲ ಭಾಷಣವಾಗುತ್ತದೆಯೇ ಹೊರತು ಬದಲಾವಣೆ ಸಾಧ್ಯವಿಲ್ಲ. ದಯವಿಟ್ಟು ಅದರ ಬಗ್ಗೆ ಏನಾದರೂ ಮಾಡುತ್ತೇವೆ ಎನ್ನುವ ಆಲೋಚನೆ ತಮಗಿರಬೇಕು. ಸಿದ್ದರಾಮಯ್ಯನವರ ಬಗ್ಗೆ ಕರ್ನಾಟಕದ ಜನ ಯಾವುದೋ ಒಂದು ಹೊಸ ಆಸೆಯನ್ನಿಟ್ಟುಕೊಂಡಿದ್ದಾರೆ. ಹಿಂದೆ ನೀವು ನಮ್ಮ ಜೊತೆಯಲ್ಲಿ ಇದ್ದವರು. ನಂಜುಂಡಸ್ವಾಮಿಯವರಿದ್ದಾಗ ನೀವು ಸಹ ಹಸಿರು ಟವೆಲ್ ಹಾಕಿಕೊಂಡು ರೈತಸಂಘದಲ್ಲಿದ್ದಿರಿ. ಆಗ ತಾವು ಮೈಸೂರು ಜಿಲ್ಲಾ ಕಾರ್ಯದರ್ಶಿಯಾಗಿದ್ದಿರಿ. ರೈತರ ಆತ್ಮಹತ್ಯೆ ಪ್ರಕರಣಗಳನ್ನು ನೋಡಿ. ಕ್ರೈಂ ರಿಪೋರ್ಟ್ ಪ್ರಕಾರ ಈ ವರ್ಷವೇ 200 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕರ್ನಾಟಕದಲ್ಲಿ ಒಟ್ಟು 56,000 ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಇದಕ್ಕೆ ಕಾರಣವೇನು? ಜಾಗತೀಕರಣವೇ, ಉದಾಹರಣವೇ ಅಥವಾ ಖಾಸಗೀಕರಣವೇ? ದುಡಿಯುವ ವರ್ಗವಾದ ರೈತರಿಗೆ ಸಾಂತ್ವನ ಹೇಳುವಂಥ ಯಾವುದೇ ಕೆಲಸ ಪಾರ್ಲಿಮೆಂಟಿನಲ್ಲಾಗಲೀ ಅಥವಾ ಇಲ್ಲಾಗಲೀ ಇಲ್ಲದೇ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ನಾವು 175 ಜನ ಎಂ.ಎಲ್.ಎ.ಗಳು ಹಳ್ಳಿಗಳಿಂದ, ಗ್ರಾಮಾಂತರ ಪ್ರದೇಶಗಳಿಂದ ಬಂದಿದ್ದೇವೆ. ರೈತರು ಯಾವ ಕಾರಣಕ್ಕಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎನ್ನುವ ಬಗ್ಗೆ ಒಂದು ವರದಿ ತರಿಸಿಕೊಂಡು ತಾವು ಏನಾದರೊಂದು ಕಾರ್ಯಕ್ರಮವನ್ನು ಮಾಡಬೇಕು. ಎರಡನೇ ವಿಷಯವೇನೆದರೆ, ನಾವೆಲ್ಲರೂ ಓಟು ಕೇಳಲು ಹೋಗಿದ್ದೆವು. ಆಗ ನೋಡಿದಂತೆ ಇಡೀ ಸದನದ ಮುಂದೆ ಇರುವಂಥ ಸವಾಲೆಂದರೆ, 78–80 ವರ್ಷದ ಹೆಣ್ಣುಮಕ್ಕಳ ಕಣ್ಣೀರನ್ನು ನೋಡುವುದಕ್ಕೆ ಆಗುವುದಿಲ್ಲ. ಡಿ.ಸಿ. ಸಂಬಳ ಕರೆಕ್ಟಾಗಿ 31ನೇ ತಾರೀಖು ಬರುತ್ತದೆ. ಎಂ.ಎಲ್.ಎ.ಗಳ ಸಂಬಳ 31ನೇ ತಾರೀಖು ಬರುತ್ತದೆ. ಆದರೆ ಲಕ್ಷಾಂತರ ಜನ ಅಂಗವಿಕಲರ ವೇತನ, ವೃದ್ಧಾಪ್ಯ ವೇತನ, ವಿಧಾವಾ ವೇತನ ಆರು ತಿಂಗಳುಗಳಾದರೂ ಬಂದಿಲ್ಲ. ಆ ಹೆಣ್ಣುಮಗಳು ಅದರಿಂದ ಬರುವ 400

ರೂಪಾಯಿಗಳ ಮೇಲೆ ಕನಸು ಕಟ್ಟಿಕೊಂಡಿದ್ದಾಳೆ. ನನಗೆ ಬರುವ 400 ರೂಪಾಯಿಗಳಲ್ಲಿ ನಾನು 200 ರೂಪಾಯಿಗಳಲ್ಲಿ ಊಟ ಮಾಡಿ, 200 ರೂಪಾಯಿಗಳಲ್ಲಿ ಮಾತ್ರೆ ತೆಗೆದುಕೊಳ್ಳತ್ತೇವೆ ಎಂದುಕೊಂಡಿದ್ದಾಳೆ. ಅವಳ ಹರಕಲು ಸೀರೆ, ಹರಕಲು ರವಿಕೆಯನ್ನು ನೋಡುವುದಕ್ಕಾಗುವುದಿಲ್ಲ. ಅವಳ ಕಣ್ಣಲ್ಲಿ ನೀರು, ಊಟವಿಲ್ಲ. ಹೀಗಿರುವಾಗ ಯಾರಿಗಾಗಿ ನಮ್ಮ ರಾಜಕಾರಣ? ಯಾರಿಗಾಗಿ ನಾವು ಬಡವರನ್ನು ರಕ್ಷಣೆ ಮಾಡುತ್ತೇವೆಂದು ಮಾತನಾಡುತ್ತೇವೆ? ಒಂದು ಲಕ್ಷ ರೂಪಾಯಿ ಸಂಬಳ ಬರುವವನಿಗೆ ಸಂಬಳ ಕರೆಕ್ಟಾಗಿ ಪ್ರತಿ ತಿಂಗಳೂ ಬರುತ್ತದೆ. ಆದರೆ 400 ರೂಪಾಯಿಗಳ ಬಗ್ಗೆ ಕನಸು ಕಟ್ಟಿರುವಂಥ ಆ ಹೆಣ್ಣುಮಕ್ಕಳು ಮತ್ತು ಗಂಡು ಮಕ್ಕಳ ಬಗ್ಗೆ ಯೋಚನೆ ಮಾಡಿರುವಿರಾ? ಇದು ಎಲ್ಲರ ಸಮಸ್ಯೆ. ದಯವಿಟ್ಟು ನಾವೆಲ್ಲ ಸೇರಿ ಒಂದು resolution ಮಾಡೋಣ, ಪ್ರತಿ ತಿಂಗಳೂ 30ನೇ ತಾರೀಖಿಗೆ ಕರೆಕ್ಟಾಗಿ ಅವರಿಗೆ ದುಡ್ಡು ಬರಲೇಬೇಕು. ನಾನು ಹೇಳುತ್ತಿದ್ದೇನೆ, 400 ರೂಪಾಯಿಗಳು ಇರುವುದನ್ನು ದಯವಿಟ್ಟು 600 ರೂಪಾಯಿಗಳು ಮಾಡಿ. ಒಬ್ಬ ಮಗನಿದ್ದಾನೆ ಹಾಗಾಗಿ ಅವನಿಗೆ ಕೊಡಲು ಬರುವುದಿಲ್ಲ ಎನ್ನುವ ನಿಯಮವಿದೆ. ದಯವಿಟ್ಟು ಇದು ತಿದ್ದುಪಡಿಯಾಗಬೇಕು. ಏಕೆಂದರೆ ಆ ಮಗ ಬೆಂಗಳೂರಿನಲ್ಲೋ, ಮೈಸೂರಿನಲ್ಲೋ ಕೆಲಸದಲ್ಲಿದ್ದಾನೆ. ಆದ್ದರಿಂದ ಸರ್ಕಾರ ದಯವಿಟ್ಟು ಇದನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಬೇಕು.

ಎರಡನೆಯದಾಗಿ, ಮಹಿಳಾ ಆಯೋಗಗಳು, ಮಹಿಳೆಯರ ಬಗ್ಗೆ ಸಾಂತ್ವನ, ಸ್ತ್ರೀ ಶಕ್ತಿ ಇವೆಲ್ಲವುಗಳೂ ಇವೆ. ಆದರೆ ದುಡಿಯುವ ವರ್ಗಕ್ಕೆ ಹೆಚ್ಚು ಗರ್ಭಕೋಶದ ಕಾಯಿಲೆಗಳು ಉಂಟಾಗುತ್ತಿವೆ. ಬಗ್ಗಿ ನಾಟಿ ಮಾಡುವಂಥ, ಬಗ್ಗಿ ಕಬ್ಬನ್ನು ನೆಡುವಂಥ, ಕಳೆ ಕೀಳುವಂಥ ಹೀಗೆ ದುಡಿಯುವ ದುಡಿಯುವಂಥ ಒಂದು ಕೋಟಿ ಹೆಣ್ಣುಮಕ್ಕಳಿಗೆ ಗರ್ಭಕೋಶದ ಕಾಯಿಲೆಯಿದೆ. ಅದರ ಆಪರೇಷನ್‌ಗೆ 30–35 ಸಾವಿರ ರೂಪಾಯಿಗಳು ಬೇಕು. ಯಾವ ಹೆಣ್ಣನ್ನು ಭಾರತ ಮಾತೆ, ಕರ್ನಾಟಕದ ಭುವನೇಶ್ವರಿ ಎಂದು ಕರೆಯುತ್ತೇವೆ ಆಹೆಣ್ಣುಮಗಳು ಗರ್ಭಕೋಶದ ಕಾಯಿಲೆಗೆ ತುತ್ತಾಗಿ 37–38 ವರ್ಷಕ್ಕೆ ಸಾವನ್ನಪ್ಪುತ್ತಿದ್ದಾಳೆ. ನಮಗೆ ಏನನ್ನು ಮಾಡುವುದಕ್ಕೆ ಆಗದಿದ್ದರೂ ಪರವಾಗಿಲ್ಲ. ಕನಿಷ್ಠ ದುಡಿಯುವ ಬಡ ಹೆಣ್ಣುಮಕ್ಕಳಿಗೆ ಸಂಪೂರ್ಣ ಆರೋಗ್ಯವನ್ನು ರಕ್ಷಣೆ ಮಾಡುವಂಥ ಒಂದು Health Card ಕೊಡಬೇಕು. ಮಾನವ ಕುಲಕ್ಕೆ ಜನ್ಮ

ಕೊಟ್ಟಂಥ ಆ ಗರ್ಭವನ್ನೇ ನಾವು ರಕ್ಷಣೆ ಮಾಡುತ್ತಿಲ್ಲ. ಹೀಗಿರುವಾಗ ಹೆಣ್ಣಿನ ಬಗ್ಗೆ ಮಾತನಾಡಲು ನಮಗೆ ಯಾವ ಅಧಿಕಾರವಿದೆ? ಎಷ್ಟೋಂದು ಜನ ಹೆಣ್ಣುಮಕ್ಕಳಿಗೆ ಪೌಷ್ಟಿಕಾಂಶದ ಕೊರತೆಯಿಂದ ರಕ್ತ, ಬಿಳುಪು ಎಲ್ಲವೂ ಹೋಗುತ್ತದೆ. ಅದನ್ನು ತಡೆಯುವುದಕ್ಕೆ ಆಗುವುದಿಲ್ಲ. ಉತ್ತರ ಕರ್ನಾಟಕದಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಇಂಥ ಕಾಯಿಲೆ ಇರುವವರಿದ್ದಾರೆ. ಯಾವ ಡಾಕ್ಟರುಗಳನ್ನು ಬೇಕಾದರೂ ಕೇಳಿ. ಆದ್ದರಿಂದ ದಯವಿಟ್ಟು ಆ ಬಗ್ಗೆ ಯೋಚನೆ ಮಾಡಬೇಕು.

ಮೂರನೆಯದು, ಖುಷ್ಕಿ ಪ್ರದೇಶದ ಕೃಷಿ ನೀತಿಯಾಗಬೇಕು. ಇಡೀ ದೇಶದಲ್ಲಿ ಚರ್ಚೆ ಆಗದಿರುವ ವಿಷಯವಿದು. 65% ಮಳೆಯಾಧಾರಿತ ಪ್ರದೇಶದ ರೈತರ ಕೃಷಿ ನೀತಿಯಾಗಬೇಕು. ಆ ಬಗ್ಗೆ ಇದುವರೆಗೂ ಚರ್ಚೆಯಾಗಿಲ್ಲ. ಬರಗಾಲವೆಂದರೆ ಕೇಂದ್ರ ಸರ್ಕಾರಕ್ಕೆ ಕಾಗದ ಬರೆಯುತ್ತೇವೆ ಎಂದು ಹೇಳುತ್ತಾರೆ. 6,000 ಕೋಟಿ ನಷ್ಟವಾಗಿದೆ ಎಂದರೆ ಕೇಂದ್ರ ಸರ್ಕಾರದಲ್ಲಿ ಎರಡು ತಿಂಗಳ ಮೇಲೆ ಒಂದು ಸಮಿತಿ ರಚನೆ ಮಾಡಿ ಅವರು ವರದಿ ಕೊಟ್ಟಮೇಲೆ, 6,000ದಲ್ಲಿ ಮುಂದಿನ ಒಂದು ಸೊನ್ನೆಯನ್ನು ಕಿತ್ತುಹಾಕಿ 600 ಕೋಟಿ ಕೊಡುತ್ತಾರೆ. ಹೀಗಾದರೆ ಹೇಗೆ ಬರಗಾಲದಲ್ಲಿ ರೈತರನ್ನು ರಕ್ಷಣೆ ಮಾಡುತ್ತೀರಿ? ಬರಗಾಲದಲ್ಲಿ ಎರಡು ವಿಧವಿದೆ, ಒಂದು ಹಸಿ ಬರಗಾಲ, ಇನ್ನೊಂದು ಒಣ ಬರಗಾಲ. ಬಿತ್ತನೆಯೇ ಆಗದೆ ಬೆಳೆ ಬರದೇ ಇರುವುದು ಒಣ ಬರಗಾಲ. ಭೂಮಿಯನ್ನು ಉಳುಮೆ ಮಾಡಿ, ಭೂಮಿಯ ಮೇಲೆ ಬೆಳೆ ಬಂದು ಸುಮಾರು 2–3 ತಿಂಗಳವರೆಗೆ ಮಳೆಯಿದ್ದು ನಂತರ ಅದು ನಾಶವಾಗುವಂಥ ಪರಿಸ್ಥಿತಿ ಬದರೆ ಅದು ಹಸಿ ಬರಗಾಲ. ಹಸಿ ಬರಗಾಲಕ್ಕೆ ನಿಮ್ಮ ಜಿಲ್ಲಾಧಿಕಾರಿಗಳು ಯಾವತ್ತೂ ನೀತಿಯನ್ನು ಸೃಷ್ಟಿ ಮಾಡಲಿಲ್ಲ. ಯಾವ ಸರ್ಕಾರ ಒಣ ಬರಗಾಲದ ಬಗ್ಗೆ ಯೋಚನೆ ಮಾಡಿದೆ? ಗುಳೆ ಹೋಗುತ್ತಿರುವವರು ಯಾರು? ಒಂದು ರಾಜ್ಯದ ಆಡಳಿತದಲ್ಲಿ ಗುಳೆ ಹೋಗುವುದು ಆ ರಾಜ್ಯ ಸರ್ಕಾರಕ್ಕೆ ಬಹಳ ಮಟ್ಟಿಗೆ ದೊಡ್ಡ ಅವಮಾನ. ನಾನು ಹುಟ್ಟಿದ ಮಣ್ಣನ್ನು, ತಾನು ಬದುಕಿದ ಹಳ್ಳಿಯನ್ನು, ತನ್ನ ಮನೆಯನ್ನು ಬಿಟ್ಟು ಎಂಜಲು ಲೋಟ ತೊಳೆಯುವಂಥ ಕೆಲಸಕ್ಕೆ, ವಾಚ್‌ಮನ್ ಕೆಲಸಕ್ಕೆ ಹೋಗುತ್ತಾರೆ. ಏಳು ಎಕರೆ ಜಮೀನು ಮಾಡಿರುವವನು ಒಂದು ದೊಣ್ಣೆ ಹಿಡಿದುಕೊಂಡು ವಾಚ್‌ಮನ್ ಕೆಲಸ ಮಾಡುತ್ತಾನೆ.

ನಾಯಿ ತಿನ್ನುವ ನಾಯಿ ಬಿಸ್ಕೆಟ್ ಪ್ಯಾಕೆಟ್‌ಗೆ 20 ರೂಪಾಯಿ. ಅದೇ ನಾವು ಮನುಷ್ಯರು ತಿನ್ನುವ ಬಿಸ್ಕೆಟ್ ಪ್ಯಾಕೆಟ್‌ಗೆ 3 ರೂಪಾಯಿ. ಆ ನಾಯಿ ಬದಲು ಇವರು ಮೂರು ಮೂರು ಜನರನ್ನು ನಿಲ್ಲಿಸಿಕೊಂಡು, ಆ ನಾಯಿ ಸಾಕುವುದಕ್ಕೆ 20 ಸಾವಿರ ರೂಪಾಯಿ ಬೇಕು, ಇವರಿಗೆ ತಿಂಗಳಿಗೆ 4 ಸಾವಿರ ರೂಪಾಯಿ ಕೊಟ್ಟು ಒಂದು ದೊಣ್ಣೆ ಕೊಟ್ಟು ನಿಲ್ಲಿಸಿಬಿಡುತ್ತಾರೆ. ನಾವು ಬರಗಾಲವನ್ನು ನಾಶ ಮಾಡಲಿಲ್ಲ. ಎಲ್ಲರೂ ಗುಳೆ ಹೋಗತಕ್ಕಂಥ ಪರಿಸ್ಥಿತಿಗೆ ತಂದಂಥ ನಾವು ಇವತ್ತು ರಕ್ಷಣೆ ಮಾಡುತ್ತಿದ್ದೇವೆಯೇ? ಮಾನ್ಯ ಮುಖ್ಯಮಂತ್ರಿಯವರಿಗೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಒಂದು ಹೊಸ ತೆರಿಗೆಯನ್ನು ಬೊಕ್ಕಸದಲ್ಲಿ ಹಾಕಬೇಕು. ಹೊಸ ತೆರಿಗೆ ಎಂದರೆ, ಬರಗಾಲವನ್ನು ರಕ್ಷಣೆ ಮಾಡತಕ್ಕಂಥ VAT ಮಾದರಿಯ tax ಹಾಕಿ ಕನಿಷ್ಠ 15 ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು ಸಂಗ್ರಹಣೆ ಮಾಡಿ. ಒಂದು ದೊಡ್ಡ ಬೋರ್ಡ್ ಅನ್ನು ಹಾಕಬೇಕು. ಯಾರೂ ಗುಳೆ ಹೋಗದ ಹಾಗೆ ತಡೆಯುತ್ತೇವೆ, ಸಂಪೂರ್ಣ ಹಳ್ಳಿಗಳ ಆರ್ಥಿಕ ಭದ್ರತೆಯನ್ನು ಸೃಷ್ಟಿ ಮಾಡುತ್ತೇವೆ, ಹೊಲವನ್ನು ಉತ್ತು ಒಣ ಬೇಸಾಯವನ್ನು ಮಾಡಿ ನಾಲ್ಕು ಬೆಳೆ ಹಾಕಿ, ತನ್ನ ದನಗಳನ್ನು ಸಾಕಿ, ತಾನು ಬದುಕಲಿಕ್ಕೋಸ್ಕರ ಉತ್ತಿರತಕ್ಕಂಥದ್ದು, ಮುಂಗಾರು ಹಿಂಗಾರಿನಲ್ಲಿ ಮಳೆ ಬರದಿದ್ದರೆ 10 ಸಾವಿರ ರೂ.ಗಳನ್ನು ಪರಿಹಾರ ರೂಪದಲ್ಲಿ ಕೊಡಬೇಕು. ಅಮೆರಿಕದಲ್ಲಿ ಭೂಮಿ ತಕ್ಕಲು ಬಿಟ್ಟರೆ ಹಣ ಕೊಡುತ್ತಾರೆ. ಆದರೆ, ಪ್ರಕೃತಿಯ ಮೇಲೆ ನಂಬಿಕೊಂಡು ಬದುಕುತ್ತಿರುವ ರೈತರನ್ನು ರಕ್ಷಣೆ ಮಾಡುವವರು ಯಾರು? ಸಾವಿರ ರೂಪಾಯಿಗಳನ್ನು ಕೊಡಬೇಕು. ನಷ್ಟ ಯಾರು ಬರೆದಿದ್ದೀರಿ? ಕರ್ನಾಟಕದಲ್ಲಿರುವ ಭೂಮಿಯನ್ನು ಉಳುವುದಕ್ಕೆ ಒಂದು ಸಲಕ್ಕೆ ಎರಡೂವರೆ ಸಾವಿರ ಕೋಟಿ ರೂಪಾಯಿ ಬೇಕು. 65% ಭೂಮಿಯನ್ನು ಉತ್ತು ತನ್ನ ಜಾನುವಾರುಗಳನ್ನು ಸಾಕುವುದಕ್ಕೆ ಯಾವ ಆರ್ಥಿಕ ಭದ್ರತೆಯನ್ನು ಸೃಷ್ಟಿಮಾಡಿದ್ದೀರಿ? ನೂರಾರು, ಲಕ್ಷಾಂತರ ಹೆಣ್ಣು ಮಕ್ಕಳು ಪುನಃ ವೇಶ್ಯಾವಾಟಿಕೆಗೆ ತಮ್ಮ ದೇಹವನ್ನು ಮಾರಿ ಜೀವನ ಮಾಡುವ ಪರಿಸ್ಥಿತಿಗೆ ಸೃಷ್ಟಿ ಮಾಡಿ, ನಾವು ಯಾವ ಬರಗಾಲದಿಂದ ರಕ್ಷಣೆ ಮಾಡುತ್ತೇವೆ? ಯಾವ ಸರ್ಕಾರ ಯಾರೇ ಆಗಿರಬಹುದು. ಒಂದು ದಿವಸ ಕೇಂದ್ರ ಸರ್ಕಾರದಲ್ಲಿ ಬರಗಾಲದ ಬಗ್ಗೆ ಚರ್ಚೆ ಮಾಡಿದ್ದಾರೆಯೇ? ಯಾವತ್ತಾದರೂ ಈ ಆಲೋಚನೆಗಳು ಸೃಷ್ಟಿಯಾಗಿವೆಯೇ? ಎಲ್ಲಾ ಬ್ಯಾಂಕ್‌ಗಳು package loan

fix ಮಾಡಬೇಕು. Reserve Bank ಗೂ ಇದಕ್ಕೂ ಸಂಬಂಧವಿಲ್ಲವೇ? 70% ದುಡಿಯುವ ವರ್ಗವನ್ನು ರಕ್ಷಣೆ ಮಾಡುವುದಕ್ಕೆ ಹಣಕಾಸಿನ ಸಂಸ್ಥೆಗಳಿಗೂ ಏನೂ ಸಂಬಂಧವಿಲ್ಲವೇ? Package loan ಎಲ್ಲಿದೆ ಸಾಲ? ಯಾರಿಗೆ ಸಾಲ ಕೊಡುತ್ತಿದ್ದಾರೆ? ನನಗಂತೂ ಅರ್ಥವಾಗುತ್ತಿಲ್ಲ. ಸಾಲ ಮನ್ನಾ ಮಾಡಿದ್ದೇವೆ, ನಾವು ಸಾಲ ಕೊಟ್ಟುಬಿಟ್ಟಿದ್ದೇವೆ ಎಂದರೆ ನನಗೆ ಅರ್ಥವಾಗುತ್ತಿಲ್ಲ. ರೈತರಿಗೆ ಯಾರೂ ಸಾಲ ಕೊಟ್ಟಿಲ್ಲ, ಪ್ರೋತ್ಸಾಹಧನ ಮಾತ್ರ ಕೊಟ್ಟಿರುವುದು. ವ್ಯವಸಾಯ ಮಾಡದೆ ಬಿಟ್ಟುಬಿಡುತ್ತಾನೆ, ಕಬ್ಬು ಬೆಳೆಯಲಿ, ಭತ್ತ ಬೆಳೆಯಲಿ, ರಾಗಿ ಬೆಳೆಯಲಿ, ಜೋಳ ಬೆಳೆಯಲಿ ಎಂದು ಅವನಿಗೆ ಪ್ರೋತ್ಸಾಹಧನ ಕೊಟ್ಟಿರುವುದು. ಸಾಲ ಎಂದರೆ ಯಾವುದೇ ಸಾಲ ಕೊಟ್ಟರೆ, ಈಗ ತಹಶೀಲ್ದಾರ್‌ಗೆ ಸಾಲ ಕೊಡುತ್ತಾರೆ, ಮರುಪಾವತಿ ಸಾಮರ್ಥ್ಯವನ್ನು ಕೊಟ್ಟು ತಹಶೀಲ್ದಾರ್ಗೆ ಸಾಲ ಕೊಡುವುದು. Deputy Commissioner ಗೆ ಸಾಲ ಕೊಡುತ್ತಾರೆ, ಮರುಪಾವತಿಯ ಸಾಮರ್ಥ್ಯವನ್ನು ಸೃಷ್ಟಿ ಮಾಡಿ ಸಾಲ ಕೊಡುತ್ತಾರೆ. ರೈತರಿಗೆ ಅನುತ್ಪಾದಕ ಕ್ಷೇತ್ರ ಎಂದು ಕಬ್ಬಿಗೆ 30 ಸಾವಿರ ರೂಪಾಯಿ, ಬತ್ತಕ್ಕೆ 8 ಸಾವಿರ ರೂಪಾಯಿ, ರಾಗಿಗೆ 6 ಸಾವಿರ ರೂಪಾಯಿ, ಸಾಲ ಏಕೆ ಕೊಡುತ್ತಾರೆ ಎಂದು ಗೊತ್ತೇ? ಆಹಾರ ಪದಾರ್ಥ ಬೆಳೆಯುವುದನ್ನು ಕೈಬಿಟ್ಟುಬಿಡುತ್ತಾರೆಂದು, ಮನ್ನಾ ಮಾಡುವುದು ಅದಕ್ಕಾಗಿಯೇ. ಕೇಂದ್ರ ಸರ್ಕಾರ 70 ಸಾವಿರ ಕೋಟಿ ರೂಪಾಯಿಗಳನ್ನು ಮನ್ನಾ ಮಾಡಿತು ಎಂದರೆ, ಆಹಾರ ಭದ್ರತೆ ದೇಶದಲ್ಲಿ ನಾಶವಾಗಿತ್ತದೆ, ಆದ್ದರಿಂದ ರೈತರನ್ನು ರಕ್ಷಣೆ ಮಾಡುವುದಕ್ಕೆ. ಕೇವಲ ರೈತರು, ಆಹಾರ ಭದ್ರತೆ ಮಾತ್ರ ಕಾರಣವೇ? ಹತ್ತಿ ಬೆಳೆ ಒಂದರಿಂದಲೇ 30 ಕೋಟಿಯಷ್ಟು ಉದ್ಯೋಗ ಸೃಷ್ಟಿಯಾಗುತ್ತದೆ. ಇಡೀ ಬೆಂಗಳೂರಿನ garments, ಇಡೀ ಬೆಂಗಳೂರಿನ ಬಟ್ಟೆ ಅಂಗಡಿ, ಇಡೀ tailoring ಮುಂತಾದವು ಸೇರಿದರೆ 30 ಕೋಟಿ ಉದ್ಯೋಗ ಸೃಷ್ಟಿಯಾಗುತ್ತದೆ. ಸುಮ್ಮನೆ ಕಣ್ಣುಮುಚ್ಚಿಕೊಂಡು ಯೋಚನೆ ಮಾಡಿ ನಾವೆಲ್ಲಾಮನುಷ್ಯರು. ನಮಗೆಲ್ಲರಿಗೆ ಬಟ್ಟೆ ತೊಡಿಸತಕ್ಕಂಥ ರೈತ highest ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ನಾವೆಲ್ಲ ಬಟ್ಟೆ ಇಲ್ಲದಿದ್ದರೆ ಹೇಗೆ ಕಾಣಿಸಿಕೊಳ್ಳುತ್ತಿದ್ದೆವು ಎಂದು ಸುಮ್ಮನೆ ಕಲ್ಪನೆ ಮಾಡಿಕೊಂಡು ಕಣ್ಣುಮುಚ್ಚಿಕೊಳ್ಳಿ. ನಮಗೆ ಯಾರಿಗೂ ಬಟ್ಟೆ ಇಲ್ಲದೆ ಇಲ್ಲಿ ಕುಳಿತಿದ್ದೆವು ಎಂದರೆ ಹೇಗೆ ಕಾಣಿಸುತ್ತದೆ? ಆ ರೇತನಿಗೆ ಕನಿಷ್ಠ 10 ಸಾವಿರ ರೂಪಾಯಿ ಕೊಡುವುದನ್ನು ನಿಗದಿ ಮಾಡಲಿಕ್ಕೆ ಆಗಲಿಲ್ಲ. ಇವತ್ತು ಎಲ್ಲಾ ಕಡೆ ಬಿತ್ತನೆ ಮಾಡಿದ್ದಾನೆ. ಭಾರತ

ದೇಶದಲ್ಲಿ highest ಆತ್ಮಹತ್ಯೆ ಆಗಿರತಕ್ಕಂಥದ್ದು ಹತ್ತಿ ಬೆಳೆಗಾರರು. 30 ಕೋಟಿಯಷ್ಟು ಉದ್ಯೋಗವನ್ನು ಸೃಷ್ಟಿ ಮಾಡಿ ಈ ನಾಡಿನ ಮಾನವನ್ನು ಕಾಪಾಡತಕ್ಕಂಥ ರೈತನ ಹತ್ತಿ ಬೆಳೆಗೆ ಬೆಲೆ ನಿಗದಿ ಮಾಡಲಿಕ್ಕಾಗಲಿಲ್ಲ, ಹತ್ತಿ ಮಂಡಳಿ ರಚನೆ ಮಾಡಲಿಕ್ಕೆ ಆಗಲಿಲ್ಲ, ಕೃಷಿ ನೀತಿ ಸೃಷ್ಟಿಯಾಗಲಿಲ್ಲ, ರಾಜ್ಯ ಸರ್ಕಾರದಲ್ಲಿ ಬಹುಶಃ ಇವರು 19 ನೇ ಮುಖ್ಯಮಂತ್ರಿ ಎಂದು ತೋರುತ್ತದೆ. ಕೃಷಿ ನೀತಿಯನ್ನು ಏಕೆ ಮಾಡಲಿಕ್ಕೆ ಆಗಲಿಲ್ಲ? ಇದಕ್ಕೆ ಕಾರಣವೇನು? ಕೃಷಿಯಿಂದ ಉತ್ಪಾದನೆ ಇಲ್ಲವೇ? ಈ ದೇಶದಲ್ಲಿ ಈಗ ಕಬ್ಬಿಗೆ ಯಾವ ಮಾನದಂಡದ ಮೇಲೆ ಬೆಲೆ ನಿಗದಿ ಮಾಡುತ್ತಿದ್ದಾರೆ?

ಮಾನ್ಯ ಮುಖ್ಯಮಂತ್ರಿಯವರೆ, ತಾವು SAP ಎಂದರೆ State Advisory Price ಎಂದು introduce ಮಾಡಬೇಕು ಮತ್ತು Karnataka Sugar Development Fund ಎಂದು create ಆಗಬೇಕು. ಒಂದು ಕ್ವಿಂಟಾಲ್ ಸಕ್ಕರೆಯಲ್ಲಿ 55 ಕೆ.ಜಿ. ಸಕ್ಕರೆ Sweet ಅಂಗಡಿಗೆ ಹೋಗುತ್ತದೆ. 15 ಕೆ.ಜಿ. ಸಕ್ಕರೆ chocolate company ಗೆ ಹೋಗುತ್ತದೆ, 15 ಕೆ.ಜಿ. ಸಕ್ಕರೆ Coca cola, Mirinda company ಗೆ ಹೋಗುತ್ತದೆ. ಸುಮಾರು 7 ಕೆ.ಜಿ. ಸಕ್ಕರೆ hotel ಗೆ ಸರಬರಾಜು ಆಗುತ್ತದೆ. ಇಡೀ ಭಾರತ ದೇಶದಲ್ಲಿ ಸಕ್ಕರೆ ತಿನ್ನುವವರು ಕೇವಲ 8 ರಿಂದ 9 ಕೆ.ಜಿ. ಅಷ್ಟೆ. ನಾನು ಹೇಳುವುದೇನೆಂದರೆ ಬಡವರಿಗೆ ಕೆ.ಜಿ.ಒಂದಕ್ಕೆ 5 ರೂ.ನಂತೆ ಸಕ್ಕರೆ ಕೊಡಿ. ಇದು ಜೀವನಾವಶ್ಯಕವಾದ ವಸ್ತು. Essential Commodities Act ಒಳಗಡೆ ಇದನ್ನು ಸೇರಿಸಿ. ದಯವಿಟ್ಟು ಬಡವರಿಗೆ ಫ್ರೀ ಕೊಡಿ ಅಥವಾ ಒಂದು ಕೆ.ಜಿ. ಸಕ್ಕರೆಗೆ 5 ರೂ.ನಂತೆ ಕೊಡಿ. ವ್ಯಾಪಾರಸ್ಥರಿಗೆ ಕೆ.ಜಿ. ಒಂದಕ್ಕೆ 70 ರೂ.ನಂತೆ ನಿಗದಿ ಮಾಡಿ ಸಕ್ಕರೆ ಕೊಡಿ. ಉಳಿದುಕೊಂಡಿರುವಂಥ Alcohol ಯಾವುದರ ಮೇಲೆ ನಿಂತಿದೆ, Excise lobby ಯಾವ ತರಹದಲ್ಲಿ, Medical lobby ಯಾವುದರ ಮೇಲೆ ನಿಂತಿದೆ? ಕಬ್ಬಿನ ಬೆಲೆಯನ್ನು ಅದೂ ಕೂಡ ಹೋರಾಟ ಮಾಡಿದ್ದಕ್ಕೆ ಟನ್‌ಗೆ 2400 ರೂಪಾಯಿಗಳನ್ನು ನಿಗದಿ ಮಾಡಿದ್ದಾರೆ. ಇದಕ್ಕೆ ಬಲೆ ಎಂದು ಹೇಳುತ್ತೀರೇನು? Brazil ನಲ್ಲಿ ಒಂದು ಕೆ.ಜಿ. ಸಕ್ಕರೆಗೆ 75 ರೂಪಾಯಿ ಇದೆ. ಅಮೇರಿಕದಲ್ಲಿ ಒಂದು ಕೆ.ಜಿ. ಸಕ್ಕರೆಗೆ 61 ರೂಪಾಯಿ ಬೆಲೆ ಇದೆ. ಪಾಕಿಸ್ತಾನದಲ್ಲಿ ಒಂದು ಕೆ.ಜಿ. ಸಕ್ಕರೆಗೆ 48 ರೂಪಾಯಿ ಇದೆ, ಆದರೆ, ನಮ್ಮ

ದೇಶದಲ್ಲಿ ಒಂದು ಕೆ.ಜಿ. ಸಕ್ಕರೆಗೆ 30 ರೂಪಾಯಿ ಕೊಟ್ಟುಬಿಟ್ಟರೆ, ಓ'. ಬೆಲೆ ಜಾಸ್ತಿ ಆಗಿಹೋಯಿತು ಎಂದು ಹೇಳುತ್ತಾರೆ. ಬೆಲೆ ಜಾಸ್ತಿ ಎಂದು ಯಾರು ಹೇಳಿದವರು? Cost of cultivation, Cost of living ಬಗ್ಗೆ ಯಾವತ್ತಾದರೂ ಈ ದೇಶದಲ್ಲಿ ಚರ್ಚೆ ಮಾಡಿದ್ದೇವೆಯೇ? ನಾವೆಲ್ಲ ಈ ಬಗ್ಗೆ ಆಲೋಚನೆ ಮಾಡಬೇಕು. ನಾವು ಕೇವಲ ಸಮಾಧಾನ ಮಾಡುವುದಕ್ಕೆ ರೈತರ ಸುದ್ದಿ ಮಾತನಾಡಬಾರದು. ಯಾವ ಆವರ್ತನಿಧಿ ಸೃಷ್ಟಿ ಮಾಡುತ್ತೀರಿ? ಯಾವ ಬೆಳೆಯನ್ನು ರಕ್ಷಣೆ ಮಾಡುತ್ತೀರಿ? ವಾಣಿಜ್ಯ ಬೆಳೆಗಳ ಕೃಷಿ ನೀತಿ! ತೋಟಗಾರಿಕೆ ಬೆಳೆಗಳ ಕೃಷಿ ನೀತಿ, ಒಂದು Vegetable Board, ಜಗತ್ತಿನಲ್ಲಿ ರೇಷ್ಮೆಯನ್ನು ಒಂದು ಮಾರ್ಕೆಟ್‌ನಲ್ಲಿ 10 ಪೈಸೆ ಒಂದು ಸಾರಿ, 10 ಪೈಸೆ ಎರಡು ಸಾರಿ, 10 ಪೈಸೆಗೆ ಹರಾಜು ಕೂಗುತ್ತೇವೆಂದರೆ ಯಾವ ರೈತರನ್ನು ರಕ್ಷಣೆ ಮಾಡುತ್ತೇವೆ? ಮೈಸೂರು ಮಾರ್ಕೆಟ್ನಲ್ಲಿ ಟೊಮ್ಯಾಟೋ ಹಣ್ಣಿನ ಗೋಣಿಯನ್ನು ಇಟ್ಟು 30 ರೂಪಾಯಿ ಒಂದು ಸಾರಿ, 30 ರೂಪಾಯಿ ಎರಡು ಸಾರಿ ಎಂದು ಕೂಗುತ್ತಾರೆ. ಜಗತ್ತಿನ ಯಾವುದೇ ಪದಾರ್ಥವನ್ನು ಹರಾಜು ಕೂಗುವುದಿಲ್ಲ, ಶ್ರಮ ಮತ್ತು ದುಡಿಮೆ ಮತ್ತು ಬದುಕನ್ನು ನಾವು ಹರಾಜು ಕೂಗುತ್ತೇವೆಂದರೆ ನಾವೆಲ್ಲ ತಲೆತಗ್ಗಿಸಬೇಕು. ಯಾವುದೋ ಪಕ್ಷದ ಸುದ್ದಿ ಅಲ್ಲ. ಒಬ್ಬ ಹೋರಾಟಗಾರನಾಗಿ ನಾನು ಹೇಳುತ್ತಿದ್ದೇನೆ, ಹರಾಜು ಪದ್ಧತಿಯನ್ನು ನಿಲ್ಲಿಸಿ. ಅಲ್ಲಾವುದ್ದೀನ್ ಖಿಲ್ಜಿ 900 ವರ್ಷದಲ್ಲಿ ಎಲ್ಲಾ ಬೆಳೆಗಳಿಗೆ ಇಂತಿಷ್ಟೇ ಬೆಲೆ ಎಂದು ಮಾರ್ಕೆಟ್‌ನಲ್ಲಿ ಬೋರ್ಡ್ ಹಾಕಿದ್ದ. ಒಂದು ಕಾಲದಲ್ಲಿ ಯಾರಾದರೂ ರೈತರಿಗೆ ಮೋಸ ಮಾಡಿದರೆ ಕೈ ಕತ್ತರಿಸುತ್ತಿದ್ದನಂತೆ. ಇವತ್ತು 140 ಮಾರ್ಕೆಟ್, 220 ಕ್ಕಿಂತ ಜಾಸ್ತಿ ಚಿಕ್ಕ ಮಾರ್ಕೆಟ್, ಎಲ್ಲಿದೆ ನಮ್ಮ ರೈತರ ಮಾರ್ಕೆಟ್? ನನಗೆ ಗೊತ್ತಾಗುತ್ತಿಲ್ಲ. ನಿಮಗೇನಾದರೂ ಗೊತ್ತಿದ್ದರೆ ಹೇಳಿಕೊಡಿ. ರೈತರ ಬದುಕನ್ನು ರಕ್ಷಣೆ ಮಾಡುವ ಯಾವುದೇ ಮಾರ್ಕೆಟ್ ಪದ್ಧತಿ ಇಲ್ಲ. ಮಾನ್ಯ ಮುಖ್ಯ ಮಂತ್ರಿಯವರೆ, ತಾವು ಕನಿಷ್ಠ ಇಷ್ಟಾದರೂ ಮಾಡಿ. ಎಲ್ಲಾ APMC ಯಲ್ಲಿ ರೈತರ ಮಾಲು ವ್ಯಾಪಾರ ಆದುದ್ದನ್ನು, ಆಗುವುದನ್ನು ಸರ್ಕಾರವೇ ನೇರವಾಗಿ ಆ ರೈತರಿಗೆ ಹಣ ಕೊಟ್ಟು ದಳ್ಳಾಳಿ ಕಾಟದಿಂದ ತಪ್ಪಿಸುತ್ತೇವೆನ್ನುವ ಕನಿಷ್ಠ ಆಲೋಚನೆ ಮಾಡಿ ಮತ್ತು APMC ನಲ್ಲಿ ನಾವು Perishable Act ಬಿಟ್ಟು ಜೋಳ, ಅಕ್ಕಿ, ಬತ್ತ, ರಾಗಿ ಯಾವುದಾದರೂ ಆಗಲಿ, ಅದನ್ನು ವ್ಯಾಪಾರ ಮಾಡದೆ ಮಡಗುವುದಕ್ಕೆ (ಇಟ್ಟುಕೊಳ್ಳುವುದಕ್ಕೆ) ಅವರಿಗೆ ಬಡ್ಡಿರಹಿತ ಸಾಲ ಕೊಡತಕ್ಕಂಥ ಒಂದು

APMC ಯನ್ನು ಸೃಷ್ಟಿ ಮಾಡಿ. ಇಲ್ಲಿ ಯಾವುದು ಎಲ್ಲಿ ಬರೆದಿದ್ದೇವೆ? ಈ ದೇಶದ ಯಾವ economist ಆದರೂ ನಮ್ಮ ಸುದ್ದಿ ಬರೆದಿದ್ದಾರೆಯೇ? ಯಾವ Economist ಸಹ ನಮ್ಮ ಸುದ್ದಿ ಬರೆದಿಲ್ಲ. ದಯವಿಟ್ಟು APMC ಯನ್ನು strengthen ಮಾಡಬೇಕು ಮತ್ತು ಬಹಳ ಯೋಚನೆ ಮಾಡಬೇಕು. ಇನ್ನು 3 ಲಕ್ಷ ಮನೆಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ನಿವೇಶನ ಎಲ್ಲಿದೆ? ಮಾನ್ಯ ಮುಖ್ಯಮಂತ್ರಿಯವರೆ, ತಮ್ಮಲ್ಲಿ ವಿನಂತಿ ಮಾಡುವುದಿಷ್ಟೆ, ಮೊದಲು ಸೈಟ್ ಕೊಡಿ. ಆ ಮೇಲೆ ಮನೆ ಕೊಡಿ.

(ಈ ಹಂತದಲ್ಲಿ ಶ್ರೀ ಬಿ.ಆರ್. ಯಾವಗಲ್ ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

Site ಇಲ್ಲದೆ ಮನೆ ಕೊಟ್ಟರೆ ಹೇಗೆ ಆಗುತ್ತದೆ? ದಯವಿಟ್ಟು ಎಲ್ಲಾ ಕಡೆ ಸೈಟು ಮನೆಯನ್ನು ಕೊಡತಕ್ಕಂಥ ನಿವೇಶನ ಜೊತೆಗೆ, ಒಂದಡಿ ಮುಂದಕ್ಕೆ ಕಟ್ಟಿಕೊಳ್ಳುವುದಕ್ಕಾಗುವುದಿಲ್ಲ, ಒಂದಡಿ ಹಿಂದಕ್ಕೆ ಕಟ್ಟಿಕೊಳ್ಳುವುದಕ್ಕಾಗುವುದಿಲ್ಲ. ಕಮಾನು ಬಗ್ಗಿಸಿದರೆ payment stop ಮಾಡುತ್ತಾರೆ. ದೇಶದಲ್ಲಿ ಒಂದು ಕಕ್ಕಸು ಮನೆ ಕಟ್ಟುವುದಕ್ಕೆ 6 ಲಕ್ಷ ರೂಪಾಯಿ ಖರ್ಚು ಮಾಡುತ್ತೇವೆ. ಒಬ್ಬ ಬಡವ ಅವನ ಹೆಂಡತಿಯೋ, ಅವನ ಮಾವನೋ 50 ಸಾವಿರ ಕೊಟ್ಟು ಒಂದು ಚೂರು ಜಾಸ್ತಿ ಮನೆ ಕಟ್ಟಿಕೊಂಡರೆ payment ನಿಲ್ಲಿಸುತ್ತೇವೆಂದರೆ ಹೇಗೆ? ಬಡವರ ಬಗ್ಗೆ ಗೌರವ ಬೇಡವೇ? ತಾನು ಕಟ್ಟಿದ ಮನೆಯಲ್ಲಿ ಎರಡು ಎಮ್ಮೆ, ಎರಡು ಆಡು, ಎರಡು ಕುರಿ, ಎರಡು ಮಕ್ಕಳು, ಅವನು, ಅವನ ಹೆಂಡತಿ ಮಲಗಿಕೊಳ್ಳುವುದು ಬೇಡವೇ? ಅವರು ಎಲ್ಲಿ ಮಲಗಿಕೊಳ್ಳಬೇಕು? ಎಮ್ಮೆ ದನಕರುಗಳನ್ನು ಸುತ್ತ ಕಟ್ಟಿಕೊಂಡು ಮಧ್ಯದಲ್ಲಿ ಗಂಡಹೆಂಡತಿ ಮಲಗಿಕೊಳ್ಳಬೇಕೇ? ಆದ್ದರಿಂದ ಸ್ವಲ್ಪ relax ಮಾಡಿ ಎಂದು ನಾನು ಹೇಳುತ್ತಿದ್ದದೇನೆ. ಆ ಮೇಲೆ 5 ಸಾವಿರ ಲಂಚ ಕೊಟ್ಟಮೇಲೆ automatic ಆಗಿ ಏನಾದರೂ, ಹೇಗಾದರೂ ಕಟ್ಟಿಕೊಳ್ಳಬಹುದು. ಆದ್ದರಿಂದ ಆಶ್ರಯ ಮನೆ ಉದ್ದೇಶ Constitutional Rights, ಬಡವನಿಗೆ ದುಡಿಯುವವನಿಗೆ ಮನೆ ನೆರಳು ಕೊಡಬೇಕಾದದ್ದು ನಮ್ಮೆಲ್ಲರ ಕರ್ತವ್ಯ. ಆದರೆ, ಅವನು ಹೀಗೇ ಕಟ್ಟು, ನೀನು ಹೀಗೇ ಇರು ಎನ್ನುವಂತೆ ಮಾಡಿದ್ದೇವೆ. ಬಾಕಿ ಇದ್ದವರು ನಾವು ಹೇಗೆ ಮನೆ ಕಟ್ಟಿದ್ದೇವೆ? ಬಾಕಿ ಇದ್ದ ನಾವೆಲ್ಲ ಹೀಗೆಯೇ ಕಟ್ಟಿದ್ದೇವೆ! ಆಹಾ ನಮ್ಮದೆಲ್ಲ

ಒಂದು ತರಹ. ನಮ್ಮದೇ ಒಂದು ಕಾನೂನು. ಏಕೆಂದರೆ, ನಾವು ಈ ದೇಶದಲ್ಲಿ ವಿಶೇಷರಾಗಿರುವವರು. ಅವರು waste body ಗಳು. ಅವರು ಹೀಗೀಗೇ ಕಟ್ಟಬೇಕು, ಆ area ದಲ್ಲಿಯೇ ಮಲಗಿಕೊಳ್ಳಬೇಕು, ಆದರಿಂದ ಮುಂದಕ್ಕೆ ಬರಬಾರದು.

ಆ ಏರಿಯಾದಲ್ಲಿ ಗಂಡ ಮಲಗಿಕೊಳ್ಳಬೇಕು ಈ ಏರಿಯಾದಲ್ಲಿ ಹೆಂಡತಿ ಮಲಗಿಕೊಳ್ಳಬೇಕು, ಮಧ್ಯೆ ಎರಡು ಎಮ್ಮೆ, ಒಂದು ಆಡು, ಮೂರು ಕುರಿ. ಮುಂದಕ್ಕೆ ಒಂದು ಅಡಿ ಜಾಗ ಒತ್ತರಿಸಿ ಕೂಡದು. ಏಕೆಂದರೆ, ಅವರು ಒತ್ತರಿಸಿಕೊಳ್ಳಬಾರದು. ಈ ದೇಶದಲ್ಲಿ ಯಾರು ಬೇಕಾದರೂ ಒತ್ತರಿಸಬಹುದು, ಎಷ್ಟೇ ಜಾಗ ಬೇಕಾದರೂ ಕಳ್ಳತನ ಮಾಡಬಹುದು, ಅವರಿಗೆ ವಿನಾಯಿತಿ. ಮಾನ್ಯ ಮುಖ್ಯ ಮಂತ್ರಿಗಳೆ ಇದನ್ನು ಸ್ವಲ್ಪ ರಿಲ್ಯಾಕ್ಸ್ ಮಾಡುವ ಕೆಲಸ ಮಾಡಬೇಕು ಮತ್ತು ತಮ್ಮಲ್ಲಿ ನನ್ನ ವಿನಂತಿ ಇಷ್ಟೆ, ಗುಲಾಮಗಿರಿ ಆಡಳಿತ ದಯವಿಟ್ಟು ನಾಶಮಾಡಿ. ನೀವು ಏನೂ ಮಾಡಬೇಡಿ, ಯಾರೂ ಅರ್ಜಿ ಕೊಡದೇ ಇರತಕ್ಕಂಥ ಆಡಳಿತ ಕೊಡಿ. ಎಲ್ಲರನ್ನೂ, ಸಾಹೇಬ್ರೆ, ಸಾಹೇಬ್ರೆ ಎಂದು ಕರೆದು ಸಾಕಾಗಿದೆ. ತಾವು ಒಂದು ಕೆಲಸ ಮಾಡಿ. ಎಲ್ಲಾ ಕಚೇರಿಗಳಲ್ಲಿ ಯಾರೇ ಬಂದರೂ ಅವರನ್ನೂ ಕೂರಿಸಿ ಮಾತನಾಡತಕ್ಕಂಥದ್ದು ಮಾಡಿ. ಇದು ನಾಗರಿಕ ಸಮಾಜದಲ್ಲಿ ಪ್ರತಿಯೊಬ್ಬರಿಗೆ ಕೊಡಬೇಕಾದ ಒಂದು ಕನಿಷ್ಠ ಗೌರವ. ಒಬ್ಬ ತಹಶೀಲ್ದಾರ್ ಆಗಲಿ, ಒಬ್ಬ ಡಿ.ಸಿ. ಆಗಲಿ, ಒಬ್ಬ ಪೊಲೀಸ್ ಆಗಲಿ, ಇವರ್‍ಯಾರಾದರೂ ಆಗಲಿ, ರೈತರೇನಾದರೂ ಕಚೇರಿಗೆ ಬಂದರೆ ಮೊದಲಿಗೆ ಅವರಿಗೆ ಕುಳಿತುಕೊಳ್ಳುವುದಕ್ಕೆ ಹೇಳಿ. ಬಹಳ ಮಡಿ ಬಟ್ಟೆ ಪ್ಯಾಂಟ್ ಬುಷ್ ಕೋಟ್ ಹಾಕಿಕೊಂಡಿರತಕ್ಕಂಥವರನ್ನು ಕೂಡಿಸುವುದು. ಪಾಪ ಪಂಚೆ ಉಟ್ಟುಕೊಂಡು ಬಂದರೆ, ಚಡ್ಡಿ ಹಾಕಿಕೊಂಡು ಬಂದವರನ್ನು ನಿಲ್ಲಿಸುವುದು. ಈಗ ಬಂದಿರುವ ಹೊಸ ಚೆಡ್ಡಿ ಬರ್ಮುಡಾ ಹಾಕಿಕೊಂಡು ಬಂದರೆ ನಿಲ್ಲಿಸುವುದಿಲ್ಲ. ಏಕೆಂದರೆ, he is coming from America, he is gentleman ಎಂದು ಕೂಡಿಸುತ್ತಾರೆ. ನಮ್ಮ ಹಳ್ಳಿಯ ಚೆಡ್ಡಿ ಹಾಕಿಕೊಂಡು ಬಂದರೆ ಅವರನ್ನು ನಿಲ್ಲಿಸಿ ಬಿಡುತ್ತಾರೆ. ಅಮೆರಿಕಾದ ಚೆಡ್ಡಿ ಹಾಕಿಕೊಂಡು ಬಂದರೆ ಅವರಿಗೆ ಬಹಳ ವಿಶೇಷ ಗೌರವ, ಏಕೆಂದರೆ, ನಮ್ಮ ಹಳ್ಳಿ ಚೆಡ್ಡಿ ಹಾಕಿಕೊಂಡು ಬಂದರೆ ಅವನು ಆರ್ಡಿನರಿ ಪೀಪಲ್. ಅದು ಬರ್ಮುಡಾ ಚೆಡ್ಡಿಯಂತೆ ಸರ್? ಅದು ಬನ್ನೂರು ಚೆಡ್ಡಿ. ಬನ್ನೂರು ಚೆಡ್ಡಿ ಹೋಗಿ

ಬರ್ಮುಡಾ ಆಯಿತು. ಅದರಿಂದ ತಾವು ಅಲೋಚನೆ ಮಾಡಬೇಕು. ನಿಜವಾಗಿಯೂ ನಿಮಗೆ ಏನಾದರೂ ಪಂಚಾಯಿತಿಯನ್ನು ಶಕ್ತಿಯುಕ್ತವಾಗಿ ಮಾಡಬೇಕಾದರೆ, ಪಂಚಾಯತ್ ರಾಜ್ಯ ವ್ಯವಸ್ಥೆಯನ್ನು ಕ್ರಾಂತಿಕಾರಕ ಬದಲಾವಣೆ ಮಾಡುತ್ತೇವೆಂದರೆ, ತಾವು 5600 ಪಂಚಾಯಿತಿಗಳಿಗೆ 91,000 ಜನರನ್ನು ಎಲೆಕ್ಷ್ ಮಾಡಿದ್ದೇವೆ. ಅದೇನು ಗುಲಾಮರನ್ನು ಎಲೆಕ್ಟ್ ಮಾಡಿದ್ದೇವೆಯೋ, ಇಲ್ಲಾ ಮೋರಿ ನೇರ ಮಾಡುವುದಕ್ಕೆ ಎಲೆಕ್ಟ್ ಮಾಡಿದ್ದೇವೆಯೋ, ಕಸಗಿಸದ ಬಗ್ಗೆ ನ್ಯಾಯ ಮಾಡುವುದಕ್ಕೆ ಎಲೆಕ್ಟ್ ಮಾಡಿದ್ದೇವೆಯೋ? ಗಾಂಧೀಜಿಯ ಕನಸು "ಏಕೇಕ್ ಗಾವ್ ಏಕೇಕ್ ಸರ್ಕಾರ್ ಬನಾನಾ ಹೈ ಹೇ ಹಮಾರ್ ಇಚ್ಛಾ ಹೈ, ವೈಸೆ ಗಾಂಧೀಜಿ ಬೋಲಾ ಹೈ". ಗಾಂಧೀಜಿಯ ಕನಸಿನಂತೆ ಒಂದು ಪಂಚಾಯತಿಯನ್ನೇ ಸರ್ಕಾರ ಮಾಡಬೇಕು. ದಯವಿಟ್ಟು ಇದನ್ನು ಸರ್ಕಾರ ಮಾಡಬೇಕು, ಏಕೆ ಮಾಡಬಾರದು? ಎಂಎಲ್‌ಎರವರು ಒಪ್ಪಿಕೊಳ್ಳಬೇಕು. ಅಂತರ್ಜಲ ಪಂಚಾಯಿತಿ, ಆಶ್ರಯ ಮನೆ ಪಂಚಾಯಿತಿ, ನಿವೇಶನ ಪಂಚಾಯಿತಿ, ಒಬ್ಬ ಇಂಜಿನಿಯರ್‌ನನ್ನು ಪಂಚಾಯಿತಿಗೆ ನೇಮಕ ಮಾಡಿ. ಒಂದು ಗ್ರಾಮ ಪಂಚಾಯಿತಿಗೆ ಒಂದೂವರೆಯಿಂದ ಏಳೂವರೆ ಕೋಟಿ ಕೊಟ್ಟರೆ ಅದು ಯಾವ ದೊಡ್ಡ ಸುದ್ದಿ? 9 ತರಹ ರೋಡ್ ಇದೆ, ಯಾರು ಯಾವ ರೋಡ್ ಯಾರಿಗೆ ಸೇರಿದೆ? ಒಂದು ರಸ್ತೆ ಹಳ್ಳದ ನೇರಕ್ಕೆ ಬಂದ ಕೂಡಲೇ ಮುಂದಕ್ಕೆ ನಾನು ಮಾಡುವುದಿಲ್ಲ ಏಕೆಂದರೆ, ತಾಲ್ಲೂಕು ಪಂಚಾಯಿತಿಗೆ ಬರುತ್ತದೆ ಎಂದು ಹೇಳುತ್ತಾರೆ. ಮೇಲಿನ ಸೇತುವೆ ಯಾರಿಗೆ ಸೇರುತ್ತದೆ ಎಂದರೆ, ನೀರಾವರಿ ಇಲಾಖೆಗೆ ಸೇರುತ್ತದೆ ಎನ್ನುತ್ತಾರೆ. ರುಂಡ ಒಂದು ಕಡೆ ಮುಂಡ ಒಂದು ಕಡೆ ಕೈಕಾಲು ಒಂದು ಕಡೆ ಮದುವೆಯಾಗುವುದು ಯಾವ ಕಡೆ ಎನ್ನುವ ತರಹ ಆಗಿದೆ. ಎಷ್ಟು ತರಹ ರೋಡ್ಸ್ ಇರುವುದು 9 ತರಹ irrigations track roads 20 ಸಾವಿರ ಕಿ.ಮೀ., 20 ವರ್ಷಗಳಾಗಿವೆ. ಯಾವ ರೀಪೇರಿನೂ ಇಲ್ಲ irrigations track road ನಲ್ಲಿ ದನಕರುಗಳು, ಜನ, ಜಾನುವಾರುಗಳು ಸಾಗತಕ್ಕಂಥ 20 ಸಾವಿರ ಕಿ.ಮೀ. Irrigations track roads, CADA roads, ಉದ್ಯೋಗ ಭರವಸೆ ಯೋಜನೆಯ ರಸ್ತೆ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ, ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆ, PWD, ಯಾರು ಎಲ್ಲಿಗೆ ಸೇರಿದ್ದಾರೆ, ಯಾರಿಗೆ ಎಷ್ಟು ದುಡ್ಡು ಹೋಗುತ್ತದೆ, ಯಾರು ಯಾವ

ಕೆಲಸ ಮಾಡುತ್ತಾರೆ, ಎಂಎಲ್‌ಎ ಗಳಾದ ನಮಗೆ ಗೊತ್ತಿಲ್ಲ. ನನಗಂತೂ ಗೊತ್ತಿಲ್ಲ, ಬಾಕಿಯವರಿಗೆ ಗೊತ್ತಿದೆಯೇನೋ ಆದ್ದರಿಂದ ದಯವಿಟ್ಟು ಎರಡೇ ಏಜೆನ್ಸಿ ಮಾಡಿ. ನಿಮಗೆ ಏನಾದರೂ ಗೊತ್ತಿದೆಯೇ ಸರ್? ಶ್ರೀ ಕೆ.ಆರ್. ರಮೇಶ್ ಕುಮಾರ್, ತಾವು ಕಿವಿಗೆ ಮೈಕ್ ಹಾಕಿಕೊಂಡು ಕೈಯಿಂದ ಈ ರೀತಿ ಅನ್ನುತ್ತಿದ್ದೀರಿ, ನಿಮಗೆ ಏನಾದರೂ ಗೊತ್ತಿದೆಯೇ ಸರ್? ಏಕೆಂದರೆ ತಾವು ಚಿನ್ನದ ಗಣಿಯಿಂದ ಬಂದಿರುವವರು. ಮಾನ್ಯ ಸಭಾಧ್ಯಕ್ಷರೆ, ಇಲ್ಲಿ ಮೂರು ಜನ ಮಾಜಿ ಮುಖ್ಯಮಂತ್ರಿಗಳು ಇದ್ದಾರೆ ದಯವಿಟ್ಟು ನಿಜವಾದ economic decentrali zation ಬಗ್ಗೆ ಆಲೋಚನೆ ಮಾಡಬೇಕಾಗಿದೆ. Economic de centralization, ಅಣ್ಣಾ ಹಜಾರೆಯವರು ಆರ್ಥಿಕ ವಿಕೇಂದ್ರೀಕರಣದಿಂದ ಭ್ರಷ್ಟಾಚಾರ ಕಡಿಮೆ ಮಾಡಬಹುದು, 3–4 ಜನ ತಿನ್ನುವ ಬದಲು ಪಂಚಾಯಿತಿಯಲ್ಲಿ ಒಬ್ಬನೇ ತಿಂದುಕೊಳ್ಳಲಿ ಎಂದು ಆರ್ಥಿಕ ವಿಕೇಂದ್ರೀಕರಣದ ಬಗ್ಗೆ ಆಲೋಚಿಸಿದರು. ತಿನ್ನುವುದಿಲ್ಲವೆಂದು ಹೇಳುವುದು ಸುಳ್ಳು. ಏಕೆಂದರೆ, ಈ ದೇಶದಲ್ಲಿ ಎಲ್ಲಾ machine ಕಂಡು ಹಿಡಿದಿದ್ದಾರೆ. ಹಾಲಿನಲ್ಲಿ ನೀರಿನ ಪ್ರಮಾಣ ಎಷ್ಟು ಇದೆ ಎಂಬುದನ್ನು ತೋರಿಸುವುದಕ್ಕೆ ಕ್ಷೀರ ಮಾಪನ ಎನ್ನುವ machine ಇದೆ. ಜ್ವರ ಕಂಡು ಹಿಡಿಯಲಿಕ್ಕೆ ಒಂದು ಮೀಟರ್ ಇದೆ, ಒಳ್ಳೆಯವರ್‍ಯಾರು ಕೆಟ್ಟವರ್‍ಯಾರು ಎಂದು ಕಂಡು ಹಿಡಿಯುವ machine ಅನ್ನು ವಿಧಾನ ಸೌಧದ ಎಂಟ್ರೆನ್ಸ್‌ನಲ್ಲಿ ಹಾಕಿ ಬಿಟ್ಟರೆ ಈ ಸಮಸ್ಯೆ ಇರುತ್ತಿರಲಿಲ್ಲ. ಅಧಿಕಾರಿಗಳು ಒಳಗೆ ಬರುತ್ತಿರಲಿಲ್ಲ, ನಾವು ಒಳಗೆ ಬರುತ್ತಿರಲಿಲ್ಲ, ಎಲ್ಲಾ ಹಾಗೆ ಹೋಗುತ್ತಿದ್ದೆವು ಏಕೆಂದರೆ, ನಮ್ಮ ತಪ್ಪೆಲ್ಲಾ ಗೊತ್ತಾಗಿ ಬಿಡುತ್ತದೆ ಅಲ್ಲಿ machine ಇಟ್ಟವರೆ ಎಂದು ಎಲ್ಲಾ ವಾಪಸ್ ಹಾಗೆ ಹೋಗಿ ಬಿಡುತ್ತಿದ್ದೆವು. ಅದ್ದರಿಂದ ತಾವು ಆಲೋಚನೆ ಮಾಡಬೇಕು. ಪಂಚಾಯಿತಿಯನ್ನು ಗುಲಾಮಗಿರಿಯ ಫಂಚಾಯಿತಿಯನ್ನಾಗಿ ಮಾಡದೇ 91 ಸಾವಿರ ಜನರನ್ನು ಗೆಲ್ಲಿಸಿ ಎಲ್ಲಾ ಜಾತಿಯವರಿಗೆ ಅಧ್ಯಕ್ಷರನ್ನು ಕೊಟ್ಟು ಅವನಿಗೆ ಆಂಜನೇಯನ ಪಾರ್ಟಿ ಮಾಡುವುದಕ್ಕೆ ಅವನಿಗೆ ಒಂದು ಚೇರ್ ಕೊಟ್ಟು ಅಲ್ಲಿ ಕೂರಿಸಿ, ಅವನಿಗೇನು ಅಧಿಕಾರ ಕೊಡದೇ ಇದ್ದರೆ ಹೇಗೆ? ನೀವು ಕೊಡುವ ಒಂದು ಲಕ್ಷದಲ್ಲಿ ಐದ್ವೆದು ಸಾವಿರ ಮೋರಿಗೆ ಹಂಚಿ ಅದರಲ್ಲಿ 75% ಕರೆಂಟ್ ಚಾರ್ಜ್ ಕಟ್ಟಿ ಏನು ಮಾಡಲಿಕ್ಕೆ ಸಾಧ್ಯ? ಹೇಳಿ ಸ್ವಾಮಿ. ಸುವರ್ಣಗ್ರಾಮ ಎಂದು

ಮಾಡಿದ್ದೀರಿ. ಸುವರ್ಣ ಗ್ರಾಮ ಎಂದು ಮಾಡಿದ ಮೇಲೆ ಪೂರ್ತಿ ಆ ಗ್ರಾಮಕ್ಕೆ ಸಂಪೂರ್ಣವಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ಅದು ಬಿಟ್ಟು ಅರ್ಧ ಸುವರ್ಣ ಗ್ರಾಮ ಇನ್ನರ್ಧ ಹಾಗೆ ಇರುವುದು. ಇನ್ನರ್ಧಕ್ಕೆ ನಾವು ಜನರಿಂದ ಬಯ್ಯಿಸಿಕೊಳ್ಳುತ್ತಲೇ ಇರುತ್ತೇವೆ. ಈ ಏರಿಯಾಕ್ಕೆ ಮಾಡಿದರೆ ನಿಮ್ಮ ಕಡೆಯವನು ಅದಕ್ಕೆ ಮಾಡಿದ್ದೀರಿ, ಆ ಏರಿಯಾಕ್ಕೆ ಮಾಡಿದರೆ ನಮ್ಮ ಕಡೆಯವನು ನಿಮಗೆ ಓಟು ಕೊಟ್ಟಿಲ್ಲ ಅದಕ್ಕೆ ಮಾಡಿಲ್ಲ ಎನ್ನುತ್ತಾರೆ. ದಯವಿಟ್ಟು ಸುವರ್ಣ ಗ್ರಾಮದ ಒಂದು ಕಲ್ಪನೆಯನ್ನು ಬದಲಾವಣೆ ಮಾಡಿ.

ಶ್ರೀ ಎನ್.ಚೆಲುವರಾಯಸ್ವಾಮಿ : ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಒಂದು ವಿಷಯ ತರುವುದೇನೆಂದರೆ, ನಾವು ಮಾಡುವಾಗ ಅದೇ ಉದ್ದೇಶದಿಂದ ಮಾಡಿದ್ದು ಮತ್ತೆ. ಆ ಗ್ರಾಮದೊಳಗಡೆ ಯಾವುದೇ ತರಹ ಸರ್ಕಾರದ ಅಭಿವೃದ್ಧಿ ಕೆಲಸಕ್ಕೆ ಹೋಗಬಾರದು. ಎಲ್ಲಾ ಇಲಾಖೆಯಿಂದ ನೂರಕ್ಕೆ ನೂರರಷ್ಟು ಅಭಿವೃದ್ಧಿ ಆ ಊರಿನಲ್ಲಿ ಅಭಿವೃದ್ಧಿಯಾಗಬೇಕು. ಕುಡಿಯುವ ನೀರು, ಸ್ಕೂಲ್ ಇಲ್ಲದಿದ್ದರೆ ಅಂಗನವಾಡಿ ಕಟ್ಟಡ ಇಲ್ಲದೇ ಇದ್ದರೆ, ಆಸ್ಪತ್ರೆ ಸೌಲಭ್ಯ ಇದ್ದರೆ, ಅವರಿಗೆ ಕಡ ಬೇಕಾದರೆ, ತಿಪ್ಪೆಗುಂಡಿ ಬೇಕಾದರೆ, ಡ್ರೈನೇಜ್, ರಸ್ತೆ, ಆಟದ ಮೈದಾನ, ಪ್ರತಿಯೊಂದು ಮೂಲ ಸೌಕರ್ಯ ಅಲ್ಲಿರಬೇಕು. ಅದು ಏನಾಯಿತು ಎಂದರೆ ಮೊದಲಿನಿಂದಲೂ ದಿಕ್ಕು ತಪ್ಪಿ ಹೋಗುತ್ತಿದೆ. ಮೊದಲನೇ ಸಲ ಒಂದೂವರೆ ಕೋಟಿ ಇಟ್ಟು ನಾವು ಕೆಲಸ ಮಾಡುತ್ತಿದ್ದೆವು. ದಯಮಾಡಿ ಪುಟ್ಟಣಯ್ಯನವರು ಕರೆಕ್ಟ್ ಟೈಂನಲ್ಲಿ ಹೇಳಿದ್ದಾರೆ, ಇಂಜಿನಿಯರ್ ಅಪಾಯಿಂಟ್‌ಮೆಂಟ್ ಕೂಡ ಅಷ್ಟೆ. ಸರ್ಕಾರದಿಂದ ನೇಮಕಾತಿ ಮಾಡುವುದು ಬಿಟ್ಟುಬಿಡಿ. ನೇಮಕವಾದರೆ, ಅವರಿಗೆಲ್ಲಾ ಖಂಡಿತವಾಗಿಯೂ MUDA Corporation, BDA, ಇಂಥ ಕಡೆಗೆ ಬೇಕು, ಏಕೆಂದರೆ, ಅವರ ಮಕ್ಕಳು ಓದಿಸುವುದಕ್ಕೆ ಮನೆ ಕಟ್ಟಿಸುವುದಕ್ಕಾಗಿ ಅಲ್ಲಿಗೆ ಹೋಗುತ್ತಾರೆ. ಕಂಟ್ರಾಕ್ಟ್ ಬೇಸಿಸ್‌ನಲ್ಲಿ ತೆಗೆದುಕೊಂಡು ಅಲ್ಲಿ ಕೆಲಸ ಮಾಡಿ ಅಲ್ಲಿಯೇ ಅವರು ಮನೆಗೆ ಹೋಗುವ ತರಹ ಆದರೆ ಅದು ಆಗುತ್ತದೆ. ದಯಮಾಡಿ ಈ ಸುವರ್ಣಗ್ರಾಮ ಯೋಜನೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ವಲ್ಪ ವಿಸ್ತೀರ್ಣ ಮಾಡಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಕೆ.ಎಸ್.ಪುಟ್ಟಣಯ್ಯ : ಸುವರ್ಣ ಗ್ರಾಮದ ಬಗ್ಗೆ ಬಹಳ ಗಂಭೀರವಾಗಿ ಯೋಚಿಸಿ ತಿದ್ದುಪಡಿ ಮಾಡಿ. ಅರ್ಧ ಮಾಡಬಾರದು ಮಾಡುವ

ಹಾಗೆ ಇದ್ದರೆ, ಸಂಪೂರ್ಣವಾಗಿ ಆ ಗ್ರಾಮವನ್ನು ಮಾಡಿ. ಜಿಲ್ಲಾ ಪಂಚಾಯತಿಗೆ ಒಂದು ಕೋಟಿ ಅನುದಾನ ಕೊಟ್ಟು ಈ ರಾಜ್ಯದಲ್ಲಿ ಹೊಸ ದಾಖಲೆ ಸೃಷ್ಟಿ ಮಾಡಿ ಆರ್ಥಿಕ ವಿಕೇಂದ್ರೀಕರಣದ ಮೂಲಕ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಗ್ರಾಮೀಣ ಪ್ರದೇಶಗಳಿಗೆ ಕೊಡಿ. ಏಕೆ ಸ್ವಾಮಿ ಸದಾಶಿವ ನಗರದಲ್ಲಿ ರೋಡು ಚೆನ್ನಾಗಿವೆ, ಡ್ರೈನೇಜ್ ಫಸ್ಟ್‌ಕ್ಲಾಸ್, 24 ಗಂಟೆ ಕರೆಂಟ್, ಕುಡಿಯುವ ನೀರಿಗೆ ತೊಂದರೆಯಿಲ್ಲ, ಗುಡಿಸುವುದಕ್ಕೆ ಐದೈದು ಜನ ಕೆಲಸಗಾರರು, ಅವರಿಗೂ ಒಂದೇ ಓಟು ನಮ್ಮ ಊರಿನಲ್ಲಿರುವ ನನಗೆ ಒಂದು ಓಟು. ಅದ್ಯಾಕೆ ಅವರಿಗೆ ಹೀಗೆ ನಮಗೆ ಏಕೆ ಹೀಗೆ? ಸದಾಶಿವ ಅಲ್ಲಿಯೇ ಇರಬೇಕು? ಶಿವ ನಮ್ಮ ಕಡೆಗೆ ಬರುವುದಕ್ಕೆ ಏನು ತೊಂದರೆ? ಶಿವನಿಗೆ ಯಾರಾದರೂ ಬುಕ್ ಮಾಡಿದ್ದಾರೋ ಏನೋ ನಾನು ಕಾಣೆ. ಏಕೆ ಬರಬಾರದು? ತಾವು ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿರುವವರು, ಕಡು ಬಡತನದಲ್ಲಿ ಜೀವನದ ಕನಸನ್ನು ಕಂಡಿರುವವರು. ಇವತ್ತು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದೀರಿ. ಕರ್ನಾ, ಕೊಯಿ ಕರ್ನಾ ಹೈ. ಆದ್ದರಿಂದ ತಾವು ದಯವಿಟ್ಟು ಈ ಬಗ್ಗೆ ಆಲೋಚನೆ ಮಾಡಬೇಕು. ಪಂಚಾಯಿತಿಯನ್ನು ಗುಲಾಮಗಿರಿಯಿಂದ ಹೊರಗಡೆ ತರತಕ್ಕಂಥ ಆಲೋಚನೆ ಮಾಡಿ. ಮತ್ತೊಂದು ವಿಷಯ ಏನೆಂದರೆ, 9 ತಿಂಗಳಾದರೂ ಸ್ಕೆಚ್ ಆಗಿಲ್ಲ. 9 ತಿಂಗಳಿಗೆ ಒಂದು ಮಗು ಹುಟ್ಟುತ್ತದೆ ಇನ್ನೂ ಒಂದು ಸ್ಕೆಚ್ ಆಗಿಲ್ಲ. ಒಂದು ಸ್ಕೆಚ್ 9 ತಿಂಗಳಾದರೂ ಆಗಿಲ್ಲವೆಂದರೆ ನಮ್ಮ ರೆವಿನ್ಯೂ ಡಿಪಾರ್ಟ್‌ಮೆಂಟ್, ತಹಶೀಲ್ದಾರ್, ಉಪ ತಹಶೀಲ್ದಾರ್, ವಿಲೇಜ್ ಅಕೌಂಟೆಂಟ್, ರೆವಿನ್ಯೂ ಇನ್ಸ್‌ಪೆಕ್ಟರ್, ಗ್ರಾಮ ಸಹಾಯಕ, ಏನು ವಸಿ ಜನ ಇದ್ದಾರೆಯೆ? ಭೂಮಿ ಇದ್ದ ಹಾಗೆ ಇದೆ, ಭೂಮಿ 6 ಎಕರೆ ಇದ್ದದ್ದು 12 ಎಕರೆ ಆಗಿಲ್ಲ. 6 ಎಕರೆ ಇರುವಂಥ ಭೂಮಿ 3 ಎಕರೆ ಭಾಗವಾಗಿದೆ, ಇನ್ನೊಂದು 20 ವರ್ಷಗಳು ಕಳೆದರೆ 10–10 ಗುಂಟೆಗೊಬ್ಬರು ಉಳಿದುಕೊಳ್ಳುತ್ತೇವೆ. 9 ತಿಂಗಳಾದರೂ ಸ್ಕೆಚ್ ಆಗಿಲ್ಲವೆಂದರೆ ಹೇಗೆ? ತನ್ನ ಮಗಳಿಗೆ ಮದುವೆ ಮಾಡಬೇಕು ಆ ಕಾರಣಕ್ಕಾಗಿ ತನ್ನ ಜಮೀನು ಮಾರಬೇಕೆಂದರೆ 9 ತಿಂಗಳಾದರೂ ಸ್ಕೆಚ್ ಆಗಿಲ್ಲವೆಂದರೆ ಏನು ಮಾಡಬೇಕು? ಕಾಲಮಿತಿಯೊಳಗೆ 9 ದಿವಸದೊಳಗೆ ಸ್ಕೆಚ್ ಆಗತಕ್ಕಂಥ ಇಲ್ಲಾ ಒಂದು ಅದಾಲತ್‌ನ್ನು ತಯಾರು ಮಾಡಿ ಎರಡರ ಮಧ್ಯೆ ಇರತಕ್ಕಂಥ ಸಮಸ್ಯೆ ಬಗೆಹರಿಸಿ. ರೆವಿನ್ಯೂ ಸ್ಕೆಚ್ ಮಾಡಿ ಎಂದರೆ ಆ ಏರಿಯಾದಲ್ಲಿರುವ 18 ಸರ್ವೇ

ನಂಬರ್‌ಗಳದ್ದು ದುಡ್ಡು ಕಟ್ಟಬೇಕು. 18 ಸರ್ವೇ ನಂಬರ್‌ಗಳದ್ದು ದುಡ್ಡು ಕಟ್ಟಬೇಕೆಂದರೆ ಎಷ್ಟಾಯಿತು? ರೂ.12,800/- ಆಗುತ್ತದೆ. ನಾನು ನನ್ನ ಭೂಮಿ ಅಳೆಸುವುದಕ್ಕೆ 12,800/- ರೂಪಾಯಿ ಖರ್ಚು ಮಾಡಬೇಕು. ಭೂಮಿಯೇ ಆದಾಯ ಇಲ್ಲದಿರುವ ಭೂಮಿ. ನನ್ನ ಭೂಮಿಯನ್ನು ಒಂದು ಸ್ಕೆಚ್ ಮಾಡುವುದಕ್ಕೆ ನಾನು ಅರ್ಜಿ ಕೊಟ್ಟರೆ 9 ತಿಂಗಳಾದರೂ ಕೆಲಸ ಆಗುವುದಿಲ್ಲ. ಏಕೆಂದರೆ, ತಹಶೀಲ್ದಾರ್‌ರವರು ಸರ್ವೇಯರ್ಸ್ ಇಲ್ಲ ಎಂದು ಹೇಳುತ್ತಾರೆ, ಇರುವವರು ಇಬ್ಬರು ಆ ಕಡೆಗೆ ಕಳುಹಿಸಿ ಬಿಟ್ಟೆ ಎಂದು ಹೇಳುತ್ತಾರೆ. ದಯವಿಟ್ಟು ಆಡಳಿತ ಸುಧಾರಣೆಮಾಡಿ. ನಾನೊಂದು ಉದಾಹರಣೆಯನ್ನು ತಮ್ಮ ಗಮನಕ್ಕೆ ತರುತ್ತೇನೆ. ಪಾಂಡವಪುರ ಸಕ್ಕರೆ ಕಾರ್ಖಾನೆಯಲ್ಲಿ 159 ಕಾರ್ಮಿಕರನ್ನು ತೆಗೆದುಕೊಂಡರು. ಮೊದಲು ಇವರಿಗೆ ರೂ.4,500/- ಇತ್ತು, 25-30 ವರ್ಷಗಳಾದ ಮೇಲೆ 2 ಸಾವಿರ ರೂಪಾಯಿಗಳಿಗೆ ಏರಿಸಿದರು. ಆಗ ಇದ್ದಂಥ ನಾಗರಾಜಪ್ಪ ಎನ್ನುವ ಛೇರ್ಮನ್‌ರವರು ತೆಗೆದುಕೊಂಡರು. ಅವರು ಇಳಿದಾಕ್ಷಣ ಶುಗರ್ ಡೈರೆಕ್ಟರ್, ಇವರನ್ನು ತೆಗೆದುಕೊಳ್ಳಲಿಕ್ಕೆ ಆಗಿಲ್ಲ ಇದಕ್ಕೆ ತಡೆಯಾಜ್ಞೆ ಕೊಟ್ಟಿದೆ ಎನ್ನುವ ಆದೇಶ ಹೊರಡಿಸುತ್ತಾರೆ. ನಂತರ ನಾನು ಏನು ಮಾಡಿದೆ, ಮಾನ್ಯ ಜಗದೀಶ್ ಶೆಟ್ಟರ್ ಮುಖ್ಯ ಮಂತ್ರಿಗಳಾಗಿದ್ದಾಗ ಒಂದು ಅರ್ಜಿ ಕೊಟ್ಟು, ಆ ಬಡವರಿಗೆ ಸಹಾಯ ಮಾಡಿ ಫ್ಯಾಕ್ಟರಿ ನಿಂತು ಹೋಗಿದೆ ಅದನ್ನು ಕನಿಷ್ಠ ಶುದ್ಧೀಕರಣ ಮಾಡಿ ಎಂದು ಮನವಿ ಕೊಟ್ಟೆವು. ಸರಿ ಅವರು ಜಾಯಿಂಟ್ ರಿಜಿಸ್ಟ್ರಾರ್‌ಗೆ ಬರೆದರು, ಅವರು ಒಂದು ವರದಿ ಕೊಟ್ಟರು. ನಂತರ ಅದು ಮುಖ್ಯಮಂತ್ರಿಗಳಿಂದ ಪ್ರಧಾನಿ ಕಾರ್ಯದರ್ಶಿಗಳಿಗೆ ಕೊಟ್ಟರು, ಅವರು ಅದನ್ನು ಇಂಡ್‌ಸ್ಟ್ರೀಸ್ ಅಂಡ್ ಕಾಮರ್ಸ್ ಇಲಾಖೆಗೆ ಕಳುಹಿಸಿದರು, ಅವರು 4-5 ದಿವಸ ಇಟ್ಟುಕೊಂಡು ಪುನಃ ಶುಗರ್ ಡೈರೆಕ್ಟ್‌ರಗೆ ಕಳುಹಿಸಿದರು.

ಶುಗರ್ ಡೈರೆಕ್ಟರ್‌ರವರು 7 objection ಹಾಕಿ ಮತ್ತೆ ಲೀಗಲ್ ಸೆಕ್ಷನ್‌ಗೆ ಕಳುಹಿಸಿದರು. ಅದು ಲೀಗಲ್ ಸೆಕ್ಷನ್‌ನಿಂದ ಬರುವ ಹೊತ್ತಿಗೆ ಚುನಾವಣೆ ಬಂತು. ತಾವು ಬಂದು ಒಂದು ತಿಂಗಳಾಗಿದೆ. ತಮ್ಮ ಹತ್ತಿರ ಮತ್ತು ಮಾನ್ಯ ಜಿಲ್ಲಾ ಉಸ್ತುವಾರಿ ಮಂತ್ರಿಯವರ ಹತ್ತಿರ ಹೇಳಿದ್ದೇನೆ. ಆದರೆ, ಶುಗರ್ ಫ್ಯಾಕ್ಟರಿ ಮಾತ್ರ ಹಾಗೆ ನಿಂತಿದೆ. ಆ ಅರ್ಜಿ ಮಾತ್ರ ಹಾಗೆಯೇ ಇದೆ. ಇದು ನಮ್ಮ ಆಡಳಿತ. ಶುಗರ್ ಡೈರೆಕ್ಟರ್ ಹೆಸರು ಸತ್ಯಮೂರ್ತಿ, ಸತ್ಯ ಒಂದು ಬಿಟ್ಟು ಬಾಕಿ ಎಲ್ಲವೂ ಅವರ ಹತ್ತಿರ ಇದೆ. ನಮ್ಮ ಊರಿನಲ್ಲಿನ ಒಂದು ಉದಾಹರಣೆ

ಹೇಳುತ್ತೇನೆ. ನಮ್ಮ ಊರಿನಲ್ಲಿ ಹರಿಶ್ಚಂದ್ರ ಪಾತ್ರವನ್ನು Revenue Inspector ಒಬ್ಬರು ಮಾಡಿದ್ದರು. ಹರಿಶ್ಚಂದ್ರನ ಪಾತ್ರವನ್ನು ಜನ ನೋಡಿಗೊಳೋ ಎಂದು ಅಳುವುದಕ್ಕೆ ಪ್ರಾರಂಭ ಮಾಡಿದರು. ಸತ್ಯಕ್ಕೋಸ್ಕರ ಈತ ಏನು ಫೈಟಿಂಗ್ ಮಾಡಿದ್ದಾನೆಂದು ಮಾತನಾಡಿಕೊಂಡರು. ಬೆಳಿಗ್ಗೆ ಆಫೀಸ್‌ಗೆ ಹೋದಾಗ 50 ರೂಪಾಯಿ ತೆಗಿ ಎಂದು ಹರಿಶ್ಚಂದ್ರ ಪಾರ್ಟ್ ಮಾಡಿದವನು ಕೇಳುತ್ತಾನೆ. ನಮ್ಮ ಆಡಳಿತ, ನಮ್ಮ ವಿಧಾನ ಸೌಧ ಎಂಬ ಬಗ್ಗೆ ತಾವು ಒಂದು ಸಾರಿ ಯೋಚನೆ ಮಾಡಬೇಕು. ಇದು ವಿಧಾನ ಸೌಧವೇ ಅಥವಾ ನಿದಾನ ಸೌಧವೇ ಎಂದು ನನಗೆ ಅರ್ಥವಾಗುತ್ತಿಲ್ಲ. ಸುಮಾರು 100 ಕೋಟಿ ರೂಪಾಯಿ ಆಸ್ತಿಯ ಕಾರ್ಖಾನೆಯನ್ನು ಖಾಸಗಿಯವರಿಗೆ ಮಾರಾಟ ಮಾಡುವುದಕ್ಕೋಸ್ಕರ ಒಬ್ಬ ಶುಗರ್ ಡೈರೆಕ್ಟರ್ ಇದನ್ನು ಸಂಪೂರ್ಣವಾಗಿ..

ಛೇರ್ಮನ್ :– ಮಾನ್ಯ ಪುಟ್ಟಣಯ್ಯನವರೆ, ಒಂದು ನಿಮಿಷ, ತಾವು ಬಹಳ ಚೆನ್ನಾಗಿ ಮಾತನಾಡುತ್ತಿದ್ದೀರಿ ಅದು ಬೇರೆ ಪ್ರಶ್ನೆ. ನಿಮಗೆ ಇನ್ನು ಎಷ್ಟು ಸಮಯ ಬೇಕಾಗುತ್ತದೆ?

ಶ್ರೀ ಕೆ.ಎಸ್.ಪುಟ್ಟಣಯ್ಯ :– ಮಾನ್ಯ ಛೇರ್ಮನ್‌ರವರೆ, ನಾನು ಒಬ್ಬನೇ ಇದ್ದೇನೆ. ಇವರು 6 ಜನ, 30 ಜನ, 40 ಜನ ಇದ್ದಾರೆ. ತಮ್ಮಲ್ಲಿ ವಿನಂತಿ ಏನೆಂದರೆ, ಅವರು 90 ಕೆ.ಜಿ. ಇದ್ದಾರೆ. ನಾನು 60 ಕೆ.ಜಿ. ಇದ್ದೇನೆ. ನಾವಿಬ್ಬರು ಬಸ್‌ನಲ್ಲಿ ಕುಳಿತುಕೊಂಡರೆ ನಮ್ಮಿಬ್ಬರಿಗೂ same charge ಇರತ್ತೆ ಅಲ್ವಾ?

ಛೇರ್ಮನ್ :– ಆದಷ್ಟು ಬೇಗ ಮುಗಿಸಿ, ಮಾತನಾಡುವವರು ಬೇರೆಯವರು ಇದ್ದಾರೆ.

ಶ್ರೀ ಕೆ.ಎಸ್.ಪುಟ್ಟಣಯ್ಯ :– ಬೇರೆಯವರು ಮಾತನಾಡುವುದು ಬೇಡವೆಂದು ನಾನು ಹೇಳುತ್ತಿಲ್ಲ. ಇಡೀ ರಾಜ್ಯಕ್ಕೆ ನಾನೊಬ್ಬನೇ ಗೆದ್ದು ಬಂದಿದದ್ದೇನೆ. ಆದ್ದರಿಂದ, ದಯವಿಟ್ಟು ನನಗೆ ಅವಕಾಶ ಕೊಡಿ. ನನ್ನ ಹೃದಯಾಂತರಾಳದ ವಿಷಯವಾಗಿದೆ. ಯಾರನ್ನೋ ವಿರೋಧ ಮಾಡುವುದಕ್ಕೆ ಅಥವಾ ಯಾರದೋ ಪರವಾಗಿ ನಾನು ಮಾತನಾಡುತ್ತಿಲ್ಲ. ತಮ್ಮಲ್ಲಿ ದಯವಿಟ್ಟು ವಿನಂತಿ ಮಾಡುವುದೇನೆಂದರೆ, ಯಾವುದೇ ಒಂದು ಅರ್ಜಿ ಕೊಟ್ಟರೆ 9 ದಿವಸ ಅಥವಾ 12 ದಿವಸದೊಳಗೆ ಆ ಕೆಲಸ ಇಲವೆಂದಾದರೂ ಆಗಬೇಕು. ಅಥವಾ ಹೌದು ಎಂದಾದರೂ ಆಗಬೇಕು. ಅಂದರೆ, ಒಂದು ಕಾಲಮಿತಿಯೊಳಗೆ ಆಗುವಂತಾಗಬೇಕು. Administration reforms ಆಗದೇ ಇದ್ದರೆ ನಾವು

ಜನಪ್ರತಿನಿಧಿ ಅಲ್ಲದೆ ನಾವೂ ಸಹಾ ಕೇವಲ ಗುಲಾಮರು ಎನ್ನತಕ್ಕಂಥ ಪರಿಸ್ಥಿತಿ ಬರುತ್ತದೆ. ಒಬ್ಬ ಶುಗರ್ ಡೈರೆಕ್ಟರ್ ಸ್ಥಳಕ್ಕೆ ಭೇಟಿ ನೀಡಿ ಅಲ್ಲಿರು.ವವರ ಬದುಕಿನ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳಬೇಕಾಗಿತ್ತು. ಪಾಂಡವಪುರ ಮತ್ತು ಮಂಡ್ಯ ಸಕ್ಕರೆ ಕಾರ್ಖಾನೆ ಬಗ್ಗೆ ನಮ್ಮ ಸ್ನೇಹಿತರು ಮಾತನಾಡಿದ್ದಾರೆ. ಯಾವುದೇ ಒಂದು ಕಾರ್ಖಾನೆಯನ್ನು ಸಂಪೂರ್ಣವಾಗಿ ಸರಿ ಮಾಡಬೇಕಾದರೆ ಒಂದು ಪ್ಯಾಕೇಜ್‌ಅನ್ನು ಘೋಷಣೆ ಮಾಡಬೇಕು. ಈ ಕಾರ್ಖಾನೆ ಸಂಪೂರ್ಣವಾಗಿ ಆರ್ಥಿಕ ಭದ್ರತೆಗೆ ಹೋಗುವುದಕ್ಕೆ ಎಲ್ಲ ತರಹದ ಪ್ಯಾಕೇಜ್ ಮಾಡದರೆ ಮಾತ್ರ ಸಾಧ್ಯ. ಒಬ್ಬ ಪೊಲೀಸ್ ಆಫೀಸರ್ ಅನ್ನು ನಾವು ಎಂ.ಡಿ. ಮಾಡಿದ್ದೇವೆ. ಆತ 144 ಸೆಕ್ಷನ್ ಅನ್ನು ಜಾರಿಗೆ ತಂದು ಫ್ಯಾಕ್ಟರಿಯನ್ನು ನಿಲ್ಲಿಸಿ ಬಿಟ್ಟಿದ್ದಾನೆ. ಫ್ಯಾಕ್ಟರಿ ನಡೆಯದಂತೆ ಮತ್ತು ಜನರು ಹೋಗದಂತೆ 144 ಸೆಕ್ಷನ್ ಅನ್ನು ಡಿಕ್ಲೇರ್ ಮಾಡಿದ್ದಾನೆ. ಫ್ಯಾಕ್ಟರಿಗೆ ಯಾರೂ ಬರುವಂತಿಲ್ಲ ಮತ್ತು ಯಾರೂ ಸಹ ಬಂದು ಪೇಮೆಂಟ್ ಕೇಳುವಂತಿಲ್ಲ. ಏಕೆಂದರೆ, 5 ಜನ ಒಟ್ಟಿಗೆ ಬಂದು ಪೇಮೆಂಟ್ ಕೇಳಿದರೆ ತಾನೆ ಎಂದು 144 ಸೆಕ್ಷನ್ ಜಾರಿಗೆ ತಂದು ಇಟ್ಟರು. ನಾವು ಯಾವದಂತದ ಎಂ.ಡಿ.ಯನ್ನು ಹಾಕಿದ್ದೇವೆಂದರೆ, ಸಹಕಾರಿ ಕ್ಷೇತ್ರದಲ್ಲಿ ತಿದ್ದುಪಡಿ ಆಗಬೇಕು, ಶುಗರ್ ಟೆಕ್ನಾಲಜಿ ಬಗ್ಗೆ knowledge ಇರುವಂತಹವರನ್ನು ಮತ್ತು co-operative movement ಬಗ್ಗೆ ಬುದ್ಧಿ ಇರುವಂಥ ಒಬ್ಬ ಎಂ.ಡಿ.ಯನ್ನು ನೇಮಕಾತಿ ಮಾಡಿಕೊಳ್ಳುವುದಕ್ಕೆ ಅವರಿಗೆ ಆದೇಶ ಕೊಡಬೇಕು. ಸಣ್ಣ ನೀರಾವರಿಯಲ್ಲಿ 3 ವರ್ಷ, ದೊಡ್ಡ ನೀರಾವರಿಯಲ್ಲಿ ಮೂರೂವರೆ ವರ್ಷ, ಜವಳಿಯಲ್ಲಿ ಎರಡು ವರ್ಷ, ಪಾಂಡವಪುರ ಸಕ್ಕರೆ ಕಾರ್ಖಾನೆಯಲ್ಲಿ 2 ವರ್ಷ. ಈಗ ಒಬ್ಬ ಎಂ.ಡಿ.ಯನ್ನು ನೇಮಕ ಮಾಡಿ ನಾಲ್ಕೂವರೆ ತಿಂಗಳಾಗಿದ್ದು, ಎಂ.ಡಿ. ಎಲ್ಲಿದ್ದಾನೆಂಬುದು ಗೊತ್ತಿಲ್ಲ. ಎಂ.ಡಿ. ಕಾಣೆಯಾಗಿದ್ದಾರೆ, ಅವರನ್ನು ಹಿಡಿದುಕೊಟ್ಟುವರಿಗೆ ರೈತರೆಲ್ಲರೂ ಸೇರಿ 5 ಸಾವಿರ ರೂಪಾಯಿ ಕೊಡುತ್ತೇವೆಂದು ಜಾಹೀರಾತನ್ನು ಕೊಡಬೇಕಾಗಿದೆ. ಏಕೆಂದರೆ, ಅಲ್ಲಿ ಎಂ.ಡಿ.ನೇ ಇಲ್ಲ. ನಾನು ಬಂದ ತಕ್ಷಣವೇ ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಏನು ಹೇಳಿದೆ ಎಂದರೆ, ನಮ್ಮ ಗೃಹ ಮಂತ್ರಿಯವರು ಇಲ್ಲಿದ್ದಾರೆ, ಅವರಿಗೆ ಈ ಬಗ್ಗೆ ದೂರು ಕೊಡುತ್ತೇವೆ. ಅಲ್ಲಿನ ಎಂ.ಡಿ.ಯವರನ್ನು ಹಿಡಿದುಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆಂದು ಹೇಳಿದೆ. ಯಾವ ಕಾರಣಕ್ಕಾಗಿ ಅಲ್ಲಿರುವ ಎರಡು ಫ್ಯಾಕ್ಟರಿ ನಡೆಯುವುದಿಲ್ಲವೆಂದರೆ, ಈ ಎರಡು ಫ್ಯಾಕ್ಟರಿಗಳು

ನಡೆದರೆ ಖಾಸಗಿ ಕಾರ್ಖಾನೆಗಳಿಗೆ ತೊಂದರೆ ಆಗುತ್ತದೆಂದು ನಿರಂತರವಾಗಿ ಈ ಎರಡು ಕಾರ್ಖಾನೆಗಳನ್ನು ನಡೆಯದ ಹಾಗೆ ನೋಡಿಕೊಳ್ಳುತ್ತಿದ್ದಾರೆ. ಖಾಸಗಿಯವರಿಗೆ ಅನುಕೂಲ ಮಾಡಿಕೊಡಬೇಕೆಂಬ ಉದ್ದೇಶದಿಂದ ಇವರು ಮೇಲಕ್ಕೆ ಬಾರದ ಹಾಗೆ ಮಾಡಿದ್ದಾರೆ. ಇವತ್ತಿನ ದಿವಸ ಆ ಕಾರ್ಖಾನೆಗಳಿಗೆ ಯಾವುದೇ ಆರ್ಥಿಕ ಭದ್ರತೆ ಇಲ್ಲ. ಫ್ಯಾಕ್ಟರಿಯನ್ನು ನಡೆಸುವುದು ಯಾವ ದೊಡ್ಡ ಸುದ್ದಿ ಹೇಳಿ Karnataka sugar development fund ಎಂದು working capital ಅನ್ನು ಸೃಷ್ಟಿಮಾಡಿ. ಒಂದು ಟನ್‌ಗೆ ಮೂರೂವರೆ ಸಾವಿರದಿಂದ ನಾಲ್ಕು ಸಾವಿರ ರೂಪಾಯಿ ಏಕೆ ಕೊಡುವುದಕ್ಕೆ ಅಗುವುದಿಲ್ಲ? ಉಪ ಉತ್ಪನ್ನಗಳ ಘಟಕಗಳನ್ನು ಪ್ರಾರಂಭ ಮಾಡುವುದರ ಮೂಲಕ ಕೊಡುವುದಕ್ಕೆ ಸಾಧ್ಯವಾಗಿದೆ. ಉತ್ತರ ಕರ್ನಾಟಕದಲ್ಲಿ ಮೂರರಿಂದ ಮೂರೂವರೆ ಸಾವಿರ ರೂಪಾಯಿ ಕೊಡುತ್ತಿದ್ದಾರೆ. ನಮ್ಮಲ್ಲಿ ಏಕೆ ಕೊಡುವುದಕ್ಕೆ ಆಗುತ್ತಿಲ್ಲ? ಕಾರಣ ಏನೆಂದರೆ, ಸಹಕಾರ ಕ್ಷೇತ್ರ ಮತ್ತು ಸರ್ಕಾರಿ ಕ್ಷೇತ್ರದಲ್ಲಿರುವುದನ್ನು ನಡೆಸತಕ್ಕಂಥ ಶಕ್ತಿ ಮತ್ತು ಸಾಮರ್ಥ್ಯ ಬೆಳೆಸದೇ ಇರುವುದೇ ಮುಖ್ಯ ಕಾರಣವಾಗಿದೆ. ಮೂರನೆಯದಾಗಿ land acquisition ಅಂದರೆ 4(1), 6(1), section 17 ಮಾಡಿ ನೀನು ಭೂಮಿಯನ್ನು ಕೊಡದಿದ್ದರೆ ನಾನು ಕಿತ್ತುಕೊಳ್ಳುತ್ತೇನೆಂದು ಹೇಳುತ್ತಾರೆ. ಭೂಮಿಯನ್ನು ನನ್ನ ತಾಯಿ ಎಂದು ನಾನು ಕರೆಯುತ್ತೇನೆ. ಅಮೆರಿಕಾ ಭೂಮಿ ಇಲ್ಲಿ ಇಲ್ಲ. ಭಾರತದ ಭೂಮಿಯಲ್ಲಿ 6 ಬೆಳೆ ರೇಷ್ಮೆಯನ್ನು, ನಾಲ್ಕು ಬೆಳೆ ತರಕಾರಿ, 2 ಬೆಳೆ ಕಬ್ಬು , 3 ಬೆಳೆ ರಾಗಿ ಬೆಳೆಯುತ್ತೇವೆ. ನಮ್ಮ ಭೂಮಿ ಅಕ್ಷಯ ಪಾತ್ರೆ ಇದ್ದ ಹಾಗೆ. ಕರ್ನಾಟಕದಲ್ಲಿ ತಲಾವಾರು ಹಂಚಿಕೊಂಡರೆ 16 ಗುಂಟೆ ಬರುತ್ತದೆ. 16 ಗುಂಟೆಯಲ್ಲಿ 150 ಲಕ್ಷ ಟನ್ ಆಹಾರವನ್ನು ಉತ್ಪಾದನೆ ಮಾಡಿ ಈ ದೇಶಕ್ಕೆ ಅನ್ನವನ್ನು ಕೊಡುತ್ತಿದ್ದೇವೆ. ಆ ಭೂಮಿಯನ್ನು ತಾವು ಪಡೆಯುತ್ತಿದ್ದೀರಿ. ನನ್ನ ಭೂಮಿ ನನಗೆ ಬಂದು ಎಷ್ಟು ವರ್ಷ ಆಯಿತೆಂದರೆ, ಸುಮಾರು 400 ವರ್ಷಗಳ ಹಿಂದೆ ಬಂದಿದ್ದು, ಅದು ನನ್ನ ಮುತ್ತಾತನ ಕಾಲದ ಭೂಮಿ. ನನ್ನ ಭೂಮಿಯನ್ನು ಕಿತ್ತುಕೊಳ್ಳುತ್ತೇನೆಂದು ಕಾನೂನು ಮಾಡಿರುವುದು ಸರಿಯೇ? ನಾವು ಯಾವತ್ತಾದರೂ ಯಾರದನ್ನಾದರೂ ಕಿತ್ತುಕೊಳ್ಳುತ್ತೇವೆಂದು ಹೇಳಿರುವ ಶಬ್ದವನ್ನು ಕೇಳಿದ್ದೀರಾ? Land is a requisition, land is not an acquisition. ಲ್ಯಾಂಡ್ ಅನ್ನುವುದು Requisition ಆಗಿದೆ. ಇಂಥ ಒಂದು ಅಭಿವೃದ್ಧಿಗೋಸ್ಕರ

ಭೂಮಿಯನ್ನು ಕೇಳುತ್ತಿದ್ದೇವೆ ದಯವಿಟ್ಟು ರೈತರೆ, ಭೂಮಿಯನ್ನು ಕೊಡಿ ಎಂದು ಕೇಳಬೇಕು. ಕಿತ್ತುಕೊಳ್ಳುತ್ತೇನೆಂದರೆ ಏನರ್ಥ? ರೇಪ್ ಮಾಡುವುದಕ್ಕೂ ಮತ್ತು ಕಿತ್ತುಕೊಳ್ಳುತ್ತೇನೆಂಬುದಕ್ಕೆ ಏನು ವ್ಯತ್ಯಾಸ ಇದೆ? ಯಾವ ವ್ಯತ್ಯಾಸ ಇದೆ ಸ್ವಾಮಿ? ನಾನು accident ಆಗಿ ಸತ್ತರೆ insurance company ಯಲ್ಲಿ ಏನು ಹೇಳುತ್ತಾರೆಂದರೆ, ಪುಟ್ಟಣ್ಣಯ್ಯ ಇನ್ನು 10 ರಿಂದ 12 ವರ್ಷ ಬದುಕುತ್ತಿದ್ದ ಈತನಿಗೆ 6 ಲಕ್ಷ ರೂಪಾಯಿ ಪರಿಹಾರ ಕೊಡಿ ಎಂದು insurance company ಯವರು ಹೇಳುವುದು. 10 ರಿಂದ 15 ವರ್ಷಕ್ಕೆ 6 ಲಕ್ಷ ರೂಪಾಯಿ ಕೊಡುವುದಾದರೆ, 400 ವರ್ಷಗಳ ಹಿಂದಿನಿಂದ ಬಂದಿರತಕ್ಕಂಥ ಭೂಮಿಯಲ್ಲಿ ನಾವು ಆರು ಜನ ಜೀವನದ ಕನಸನ್ನು ಇಟ್ಟುಕೊಂಡು ನನ್ನ ತಾಯಿಯಂತೆ ಇರುವ ಆ ಭೂಮಿಯಲ್ಲಿ ನಾನು ಬದುಕುತ್ತಿರುವಾಗ ಆ ಭೂಮಿಯನ್ನು ಕಿತ್ತುಕೊಳ್ಳುವುದಕ್ಕೆ ಬೆಲೆ ಕಟ್ಟುವುದು ಮತ್ತು ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ valuation ಅನ್ನು ಮೂರು ಪಟ್ಟು ಮಾಡುವುದು. ಕಿಸ್ನೆ ಲಿಬಾಯಿ ಹೇ ಕಾನೂನ್, ಕಿಸ್ನೆ ಬನಾಯ? ಎ ಬ್ರಟಿಷ್ ಬನಾಯ ಕ್ಯಾ? ಇದು ಬ್ರಿಟಿಷ್‌ನವರು ಬರೆದಿರುವ ಕಾನೂನೆ? ಒಬ್ಬನ ಸಾವಿಗೆ 6 ಲಕ್ಷ ರೂಪಾಯಿ ಪರಿಹಾರ, ಆರು ಜನ ಬೆಳೆದಿರುವಂಥ ನನ್ನ ಕುಟುಂಬವನ್ನು ಮತ್ತು ನನ್ನನ್ನು ರಕ್ಷಣೆ ಮಾಡುವುದಕ್ಕೆ ಭೂಮಿಯ ರಿಜಿಸ್ಟೇಷನ್‌ನ ಮೂರು ಪಟ್ಟು valuation ಮಾಡುವುದು ಯಾವ ನೀತಿ ? ಯಾರಿಗಾಗಿ ಈ ನೀತಿ? ದಯವಿಟ್ಟು ಭೂಮಿಯನ್ನು ಕಿತ್ತುಕೊಳ್ಳುವ ಕೆಲಸ ಮಾಡಬೇಡಿ. ಏಕೆ ಭೂಮಿಯನ್ನು ಕಿತ್ತುಕೊಳ್ಳುತ್ತೀರಿ? ಪುಟ್ಟಣ್ಣಯ್ಯ ಮತ್ತು ಆತನ ಹೆಂಡತಿ ಮಕ್ಕಳು ಜೀವನ ಮಾಡುವುದಕ್ಕೆ ಮೂಡಾದಲ್ಲಿ ಒಂದು ಸೈಟ್ ಕೇಳಿದರೆ Sq.ft. 400 ರಿಂದ 600 ರೂ. ತೆಗೆದುಕೊಳ್ಳುತ್ತಾರೆ. ನಾನು ಮನೆಯನ್ನು ಕಟ್ಟಿಕೊಂಡರೆ ಆ ಮನೆಯ ಮೇಲೆ ಯಾವುದೇ ಬೆಳೆಯನ್ನು ಬೆಳೆಯುವುದಕ್ಕೆ ಆಗುವುದಿಲ್ಲ. ನಾನು ಮತ್ತು ನನ್ನ ಹೆಂಡತಿ ಮಕ್ಕಳು ಬದುಕುತ್ತೇವೆ. ಆಸ್ಪತ್ರೆಗೆ, ರೈಲ್ವೆಗೆ, ರೋಡ್‌ಗೆ ನಾನೇನಾದಾರು ಭೂಮಿ ಬಿಟ್ಟುಕೊಟ್ಟರೆ ಈ ಭೂಮಿ ಇರುವತನಕ ಅಭಿವೃದ್ಧಿಗೆ ಭೂಮಿ ಬಿಟ್ಟುಕೊಟ್ಟ ಕೀರ್ತಿ ನನಗೆ ಇರುತ್ತದೆ. ಆದ್ದರಿಂದ, ಅದಕ್ಕೆ ಏಕೆ Sq.ft. ಇಷ್ಟೆಂದು ಫಿಕ್ಸ್ ಮಾಡಬಾರದು. ಈ ಕಾನೂನನ್ನು ಯಾರು ಬರೆದಿರುವುದು? 4(1), 6(1) ಆದಮೇಲೆ ಅದನ್ನು ವಾಪಸ್ಸು ಪಡೆಯುವುದಕ್ಕೆ ಆಗುವುದಿಲ್ಲ. ಅದು

ಎಂಥ ಭಯಂಕರವಾದ ಕಾನೂನು ಎಂಬುದು ನನಗೆ ಗೊತ್ತಿಲ್ಲ. 4(1), 6(1) ಮಾಡುವವರು ಯಾರು? ನೆನ್ನೆದಿವಸ ನಾನು ಹಾವೇರಿಗಡ ಹೋಗಿದ್ದೆ, ಬಸ್‌ಸ್ಟ್ಯಾಂಡ್‌ಗೆ ಹೈವೇ ರೋಡ್‌ನಲ್ಲಿ 12 ಎಕರೆ ಜಮೀನನ್ನು ಬಿಟ್ಟು ಕೊಟ್ಟಿದ್ದಾರೆ. ಅಲ್ಲಿನ ರೈತನ ಮನೆಯವರು 12 ಎಕರೆ ಭೂಮಿಯನ್ನು ಇದಕ್ಕಾಗಿ ಬಿಟ್ಟುಕೊಟ್ಟಿದ್ದಾರೆ. ಆದರೆ, ಮತ್ತೆ ಅವರಲ್ಲಿದ್ದ 6 ಎಕರೆ ಭೂಮಿಯನ್ನು 4(1), 6(1) ಮಾಡಿದ್ದಾರೆ. ಒಂದು ರಸ್ತೆಯ ಅಭಿವೃದ್ಧಿಗೆ ತನ್ನ ಮನೆತನದ, ತನ್ನ ವಂಶದ 12 ಎಕರೆ ಭೂಮಿಯನ್ನು ಬಿಟ್ಟಿರತಕ್ಕಂತಹ ರೈತನಿಗೆ ಸಂಬಂಧಪಟ್ಟ 6 ಎಕರೆ ಜಮೀನನ್ನು ಸರ್ಕಾರಿ ಅಧಿಕಾರಿಗಳಾದ ನಾವು ಮತ್ತೆ ಸ್ವಾಧೀನ ಮಾಡಿಕೊಂಡಿದ್ದೇವೆ ಭಯಂಕರವಾದ ಕಾನೂನು, ಭೂತದ ಕಾನೂನು 4(1), 6(1) ಮಾಡಿದ್ದೇವೆ. ನೀವುಗಳು ಏನಾದರೂ ಗಲಾಟೆ ಮಾಡಿದರೆ ಸೆಕ್ಷನ್ 17ರ ಪ್ರಕಾರ ನಿಮ್ಮನ್ನು ಜೈಲಿಗೆ ಹಾಕುತ್ತೇವೆಂದು ಹೇಳುತ್ತಾರೆ. ಯಾವ ಕಾನೂನು ಮಾಡಿದ್ದೇವೆ? ಭೂಮಿಯನ್ನು ಅಭಿವೃದ್ಧಿಗೆ ಕೊಟ್ಟಿರತಕ್ಕಂಥ ವಂಶವನ್ನೇ ನಿರ್ವಂಶ ಮಾಡತಕ್ಕಂಥ ಕಾನೂನು ಇದೆ. ಈ ಕಾನೂನು ಯಾರಿಗೋಸ್ಕರ? ಇವತ್ತಿನದಿವಸ ರೈತರು ಭೂಮಿಯನ್ನು ಕಳೆದುಕೊಂಡು ವಾಚ್‌ಮೆನ್ ಕೆಲಸಕ್ಕೆ ಹೋಗುತ್ತಿದ್ದಾರೆ. ಆದ್ದರಿಂದ, ಭೂಮಿಯ ಬಗ್ಗೆ ನಾವೆಲ್ಲ ಸರ್ವಾನುಮತದಿಂದ ಅತ್ಯಂತ ಗಂಭೀರವಾಗಿ ಅಲೋಚನೆ ಮಾಡಬೇಕು. ನಾವೆಲ್ಲ ಸರ್ವಾನುಮತದಿಂದ ಯೋಚನೆ ಮಾಡದಿದ್ದರೆ ರೈತರಿಗೆ ಬಹಳ ದ್ರೋಹ ಮಾಡಿದಂಥ ಕೆಲಸ ಆಗುತ್ತದೆ. ಇದೇನು ಯಾವುದೇ ಪಕ್ಷದ ವಿಚಾರವಲ್ಲ. ದಯವಿಟ್ಟು ಇದರ ಬಗ್ಗೆ ಆಲೋಚನೆ ಮಾಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. ಹಿಂದೆ, ಕಾನೂನು ವಿಷಯವಾಗಿ ಎಲ್ಲ ಹಳ್ಳಿಗಳಲ್ಲಿ ಚರ್ಚೆ ಆಗುತ್ತಿತ್ತು. ಅಂದರೆ, ಪೊಲೀಸ್ ಇಲಾಖೆಯ IPC, CPC, Cr.PC ಯ ಬಗ್ಗೆ ಚರ್ಚೆ ಮಾಡುತ್ತಿದ್ದಾಗ ಗ್ರಾಮೀಣ ಪ್ರದೇಶದಲ್ಲಿ ಕ್ರಿಮಿನಲ್ ಕೇಸ್‌ಗಳು ಕಡಿಮೆ ಆಗುತ್ತಿದ್ದವು. ಈಗ ಅದೆಲ್ಲವನ್ನೂ ಕೈಬಿಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರಲ್ಲಿ ಒಂದು ವಿನಂತಿ, ತಾವು ಒಂದು ಕೆಲಸವನ್ನು ಮಾಡಬೇಕಾಗುತ್ತದೆ. ಅದೇನೆಂದರೆ, 5600 ಗ್ರಾಮ ಪಂಚಾಯಿತಿ ಇದೆ. ಇದಕ್ಕಾಗಿ ಒಂದು ನ್ಯಾಯ ಪಂಚಾಯಿತಿಯನ್ನು constitute ಮಾಡೋಣ. ಒಂದು ರಾಜ್ಯದ ನ್ಯಾಯ ಪಂಚಾಯತ್ ಅನ್ನು ಮಾಡಿ ಸಿವಿಲ್ ಡಿಸ್‌ಪ್ಯೂಟ್

ಅನ್ನು ನಾವು ಹಳ್ಳಿಯಲ್ಲಿ ಕುಳಿತು ಬಗೆ ಹರಿಸಿಕೊಳ್ಳುವುದಕ್ಕೆ ಆಗದೇ ಇದ್ದಲ್ಲಿ ಕೋರ್ಟ್‌ಗೆ ಹೋಗಲಿ. 50% ಸಮಸ್ಯೆ ಇದರಿಂದ ಕಡಿಮೆ ಆಗುತ್ತದೆ.

ಶ್ರೀ ವೈ.ಎಸ್.ವಿ.ದತ್ತ ಮಾನ್ಯ ಅಧ್ಯಕ್ಷರೆ, ಮಾನ್ಯ ಪುಟ್ಟಣ್ಣಯ್ಯನವರು ಹೇಳುತ್ತಿರುವುದು ಬಹಳ ಒಳ್ಳೆಯ ಸಲಹೆ. ಆದರೆ ಅದು ಇದೆ. ನಾವು ಅನುಷ್ಠಾನ ಮಾಡಿಲ್ಲ. ಮಾನ್ಯ ನಜೀರ್ ಸಾಹೇಬರು ತಂದಂಥ ಜಿಲ್ಲೆ ಪಂಚಾಯಿತಿಯ ಮತ್ತು ಮಂಡಲ ಪಂಚಾಯಿತಿ ಒಳಗಡೆ ಒಂದು ನ್ಯಾಯ ಪಂಚಾಯಿತಿ ಎಂದು ಇತ್ತು, ಆದರೆ ಅದು ಅನುಷ್ಠಾನಕ್ಕೆ ಬಂದಿಲ್ಲ, ಆದರೆ ನ್ಯಾಯ ಪಂಚಾಯಿತಿಯ ಒಂದು concept ಮೊದಲಿನಿಂದಲೂ ಇದೆ. ಅದನ್ನು ಕಂಪ್ಲೀಟಾಗಿ ಮಾಡಬೇಕು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೆ, ನ್ಯಾಯ ಪಂಚಾಯಿತಿ ಮಾಡಬೇಕು, ಅದು ಯಾವುದೂ ಅನಿಷ್ಠಾನಕ್ಕೆ ಬಂದಿಲ್ಲ. ಒಂದು ಅಡಿ ಜಾಗದ ಸಲುವಾಗಿ ಜನರು ಕೋರ್ಟಿಗೆ ಹೋಗುತ್ತಾರೆ. ಅದಕ್ಕಾಗಿ ಒಂದು ನ್ಯಾಯ ಪಂಚಾಯಿತಿಯ ಸಮಿತಿ ರಚನೆ ಆಗಬೇಕು. ಸಿದ್ದರಾಮಯ್ಯನವರು ತಾವು ಅಲ್ಪಸಂಖ್ಯಾತರ ಬಗ್ಗೆ ಹಿಂದುಳಿದ ಜನರ ಬಗ್ಗೆ ಆಲೋಚನೆ ಮಾಡತಕ್ಕಂಥ ಒಂದು ನ್ಯಾಯ ಪಂಚಾಯಿತಿಯನ್ನು ಪ್ರಾಯೋಗಿಕವಾಗಿ start ಮಾಡಿ ಏನೂ ಆಗುವುದಿಲ್ಲ ಬಹಳ ದೊಡ್ಡ ಸುದ್ದಿ. Medical college ಕಟ್ಟುವುದು, hospital ಗಳನ್ನು ಕಟ್ಟುವುದು, doctor ಗಳನ್ನು ನೇಮಕ ಮಾಡುವುದು ಮೊದಲು ಕಡಿಮೆ ಮಾಡಿ. ಒಂದು ಕೆಲಸ ಮಾಡಿ. 7ನೇ ತರಗತಿಯಿಂದ 12ನೇ ತರಗತಿಯವರೆಗೆ ದೇಹವನ್ನು ಚೆನ್ನಾಗಿ ಇಟ್ಟುಕೊಳ್ಳುವುದಕ್ಕೆ ಒಳ್ಳೆಯ ವ್ಯಾಯಾಮ ಮಾಡಿ. ಒಳ್ಳೆಯ sportsmen ಮಾಡಿ. 10 marks grace ಎಂದು ಹೇಳಿ. 10ವರ್ಷದಲ್ಲಿ ಕರ್ನಾಟಕದ ಆರೋಗ್ಯ 75% ಸುಧಾರಣೆ ಆಗುತ್ತದೆ. ಚೈನಾದಲ್ಲಿ ಸೈಕ್ಲಿಂಗ್ ಪ್ರಯೋಗ ಮಾಡಿದ ಮೇಲೆ 25% ಇದ್ದ ಹೆಲ್ತ್ 75% ಕ್ಕೆ ಸರಿ ಹೋಯಿತು. ಮೊದಲು 75% ಹೆಲ್ತ್ ನಾಶವಾಗಿತ್ತಿ. ಬರೀ 25% ಮಾತ್ರ ಸರಿ ಇತ್ತು. ತಾವು ದಯವಿಟ್ಟು ಆಲೋಚನೆ ಮಾಡಬೇಕು. ಆ ತರಹ ಏಕೆ ಸಾಂಸ್ಕೃತಿಕ ಬದಲಾವಣೆ ಮಾಡಬಾರದು? ನೀವು ಎಲ್ಲಕ್ಕೂ ಎಲ್ಲಿಂದ ದುಡ್ಡು ತರುತ್ತೀರಿ? ಕ್ರೀಡೆ ಎಂದರೆ ಕ್ರಿಕೆಟ್ ರಂಗ ಒಂದೆ, ಇನ್ನು ಬೇರೆ ಯಾವುದೂ ಇಲ್ಲ ಎಂಬ ಭಾವನೆ ಇದೆ. ಕ್ರಿಕೆಟ್ ಎಂದರೆ ಆ ಮೂರು ತುಂಡುಗಳು ಇನ್ನೊಂದು ಬ್ಯಾಟ್. ಅವನು ಹಿಡಿದುಕೊಂಡ ದುಡ್ಡಿಗೆ ಹೊಂದಾಣಿಕೆ

ಮಾಡಿಕೊಂಡು ಅಲ್ಲಿ ಬರೀ ದುಡ್ಡು ದುಡ್ಡು. ಮ್ಯಾಚ್ ಫಿಕ್ಸಿಂಗ್ ಮೊದಲು ಇದೊಂದು ಸುಮಾರಾಗಿತ್ತು ಎಂದು ತಿಳಿದುಕೊಂಡಿದ್ದೆವು. ಅದು fixing. ಈ ದೇಶದಲ್ಲಿ ಎಲ್ಲವೂ mixing ಆಗಿ ಹೋಯಿತು. Mixing ಇಲ್ಲಾ fixing. ಇದೇ ಆಗಿ ಹೋಗಿ ಬಿಟ್ಟಿತು. ಆದ್ದರಿಂದ ಕ್ರೀಡಾ ಚಟುವಟಿಕೆಗಳಿಗೆ ಯುವಜನ ಸೇವಾ ಕ್ರೀಡಾ ಮಂತ್ರಿ ಜಾಸ್ತಿ ದುಡ್ಡು ತೆಗೆದುಕೊಂಡು ಬನ್ನಿ ಯುವಶಕ್ತಿಯನ್ನು ದಯವಿಟ್ಟು ಉಳಿಸಿ. ನೀವು ಚೆನ್ನಾಗಿ ಕುಸ್ತಿಯನ್ನು ಕಲಿಸಿ, ಖೋ ಖೋ ಕಲಿಸಿ, ಪೋಲೀಸ್ ಇಲಾಖೆಗೆ ತೆಗೆದುಕೊಂಡರೆ ಅವರು ಕಳ್ಳರನ್ನು ಹಿಡಿದು ಹಾಕುತ್ತಾರೆ. ಅವರು ಖೋ ಎನ್ನುವುದರಲ್ಲಿ ಹಿಡಿದು ಹಾಕುತ್ತಾರೆ. ದಯವಿಟ್ಟು ಪೋಲೀಸ್‌ರನ್ನು ನೇಮಕ ಮಾಡಿಕೊಳ್ಳುವಾಗ ಖೋ ಖೋ ಆಟಗಾರರನ್ನು ನೇಮಕ ಮಾಡಿಕೊಳ್ಳಿ. ಖೋ ಖೋ anticipation ಏನೆಂದರೆ, ಪ್ರಪಂಚದಲ್ಲಿ ದೇಹವನ್ನು ಅತ್ಯಂತ ಚೆನ್ನಾಗಿ active ಮಾಡುವ ಯಾವುದಾದರೂ ಆಟವೆಂದರೆ ಖೋ ಖೋ. ಕಬಡ್ಡಿ ಎರಡನೆಯದು, ಆದರೆ ಖೋ ಖೋ ಆಟವೆಂದರೆ ಬಹಳ ಮುಖ್ಯವಾದುದು. ಎಂತಹ ಕಳ್ಳರನ್ನೂ ಹಿಡಿದು ಹಾಕಿ ಬಿಡಬಹುದು. ಆದರೆ ಬೇರೆ ಬೇರೆ ಕಳ್ಳರನ್ನು ಹಿಡಿಯುವುದಕ್ಕಾಗುವುದಿಲ್ಲ. ಕೊನೆಯದಾಗಿ ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಹಾವು ಕಡಿದವರಿಗೆ, ಅಡಿಗೆ ಸೊಪ್ಪು ಕಡಿಯುವುದಕ್ಕೆ ಹೋಗಿ ಮರದಿಂದ ಬಿದ್ದವರಿಗೆ, ಕರೆಂಟ್ ಹೊಡೆದವರಿಗೆ, ಕಾಲು ಜಾರಿ ನೀರಿಗೆ ಬಿದ್ದವರಿಗೆ, ಜೇನು ನೊಣ ಕಡಿದು ಸತ್ತವರಿಗೆ ಈಗ ಒಂದು ಲಕ್ಷ ರೂ.ಗಳನ್ನು ಕೊಡುತ್ತಿದ್ದೀರಿ. Aeroplane ದಿಂದ ಬಿದ್ದು ಸತ್ತರಿಗೆ 7 ಲಕ್ಷ ರೂ.ಗಳು ಸಿಗುತ್ತದೆ. ಅದಕ್ಕೆ ದಯವಿಟ್ಟು ಇನ್ನೊಂದು ಎರಡು ಲಕ್ಷ ರೂ.ಗಳನ್ನು ಸೇರಿಸಿ. ಇಲ್ಲವೆಂದರೆ Aeroplane ದಿಂದ ಬೀಳುವ ಅವಕಾಶ ಮಾಡಿಕೊಡಿ. ಹತ್ತುವುದಕ್ಕೆ ಆಗುವುದಿಲ್ಲ, ಬಿದ್ದ ಏಟಿಗೆ 7 ಲಕ್ಷ ರೂ.ಗಳನ್ನು ಕೊಡಿ. ಹಾವು ಸಿಕ್ಕಿತ್ತು ನಾನು ಅದರ ಜೊತೆಯಲ್ಲಿ ಮಾತನಾಡಿದೆ, ಬರೀ ಹಳ್ಳಿಯವರನ್ನು ಕಡಿಯುತ್ತೀಯಾ. ವಿಧಾನ ಸೌಧಕ್ಕೆ ಹೋಗು. ಒಂದಿಷ್ಟು ಜನ ಸಿಗುತ್ತಾರೆ. ಅವರನ್ನು ಕಡಿ ಎಂದು ಹೇಳಿದೆ. ಅದಕ್ಕೆ ಹಾವು ಏನು ಎಂದಿತು ಗೊತ್ತೆ, ಇನ್ನು ಎಲ್ಲಿಗಾದರೂ ಹೇಳಿ ಹೋಗುತ್ತೇನೆ, ಆದರೆ ವಿಧಾನ ಸೌಧಕ್ಕೆ ಮಾತ್ರ ಹೋಗುವುದಿಲ್ಲ ಎಂದಿತ್ತು. ಏಕೆಂದರೆ, ನನಗಿಂತ ದೊಡ್ಡ ದೊಡ್ಡ ಹಾವುಗಳು ಅಲ್ಲಿಯೇ ಇವೆ ಅದಕ್ಕೆ ಹೋಗುವುದಿಲ್ಲ ಎಂದಿತ್ತು. ಆದ್ದರಿಂದ ತಾವು ಆಲೋಚನೆ ಮಾಡಬೇಕು.

ಕನಿಷ್ಠ 2 ಲಕ್ಷ ರೂ.ಗಳನ್ನಾದರೂ ಮಾಡಿ. ಹುಲ್ಲು ಮೆದೆ, ರಾಗಿ ಕಡ್ಡಿ, ಜೋಳದ ದಂಟಿಗೆ ಬೆಂಕಿ ಬಿದ್ದು ನಂದಿ ಹೋದರೆ ಡಿ.ಸಿ.ಯವರು ರೂ.1500 –,500 ರೂ.ಗಳನ್ನು ಕೊಡುತ್ತಾರೆ. ಆಮೇಲೆ ಅನಾಹುತಗಳು ಆದರೆ ಏಕೆ ಪರಿಹಾರ ಕೊಡುತ್ತಿಲ್ಲ? ಒಂದು ಎಕರೆ ನೆಲ್ಲಿನ ಹುಲ್ಲಿಗೆ 16,000 ರೂ.ಗಳು. ಇವತ್ತು ಕರ್ನಾಟಕದಲ್ಲಿ ದನವನ್ನು ಸಾಕಬೇಕಾದರೆ ಸ್ವಾಮಿ 80,000 ಕೋಟಿ ರೂ.ಗಳು ಬೇಕು. ನಮಗೆ ಹಾಲಿನ ದುಡ್ಡು ಬರುವುದು 8,000 ಕೋಟಿ ರೂ.ಗಳು ಅಷ್ಟೆ. ಹಾಳಿನ ದುಡ್ಡು ಬಹಳ ಜಾಸ್ತಿ ಆಗಿ ಹೋಯಿತು ಎಂದು ಬಹಳ ಜನ ಹೇಳಿದರು. ನಾವೇನು consumers ಅಲ್ಲವೆ? ಯಾರು ಸ್ವಾಮಿ ಎಮ್ಮೆಯನ್ನು ಸಾಕುವವರು? ಎಮ್ಮೆ ಸಾಕುವುದಕ್ಕೆ ಯಾರಿಗೆ ಸಾಲವನ್ನು ಕೊಟ್ಟಿದ್ದೀರಿ. ನಾವೆಲ್ಲಾ MLA ಗಳು ಎಮ್ಮೆ ಸಾಲವನ್ನು ತೆಗೆದುಕೊಂಡಿದ್ದೇವಾ? ಹರಕಲು ಚಡ್ಡಿಯವರಿಗೆ ಎಮ್ಮೆ ಸಾಲವನ್ನು ಕೊಟ್ಟು, ಹರಕಲು ಸೀರೆಯವರಿಗೆ ಹಸುವಿನ ಸಾಲ ಕೊಟ್ಟು 2 ರೂ.ಗಳ ಸಹಾಯಧನವನ್ನು ಏಕೆ ಹೆಚ್ಚಿಗೆ ಮಾಡುತ್ತೀರಿ, ಅದನ್ನು 10 ರೂ.ಗಳಿಗೆ ಮಾಡಿ. ಕೃಷಿ ಪ್ರದೇಶದ ರೈತರು 90% ಹೈನುಗಾರಿಕೆ ಮೇಲೆ ಬಂದಿರುವುದು. ಹೈನುಗಾರಿಕೆ ಇಲ್ಲದೆ ಇರುವ ದಿವಸ ನೀವು ಶವಸಂಸ್ಕಾರಕ್ಕೆ ದುಡ್ಡು ಕೊಡಬೇಕಾಗಿತ್ತು. 10 ರೂ.ಗಳ ಸಹಾಯಧನ ಮಾಡಿ ಸರ್. ಏನೂ ಆಗುವುದಿಲ್ಲ. 10 ರೂ.ಗಳು ಎಂದರೆ ಎಷ್ಟಾಯಿತು? ಒಂದು ವರ್ಷಕ್ಕೆ 3600 ಕೋಟಿ ರೂ.ಗಳು ಆಯಿತು. ಏಕೆ ಆಗುವುದಿಲ್ಲ? ಅಷ್ಟು ಹಣವನ್ನು ನೀವು ಸಬ್ಸಿಡಿ ಕೊಡಿ. Marketing problem ಏಕೆ? ಎಷ್ಟು ಬೇಕಾದರೂ Exicise Department ನಲ್ಲಿ whisky, brandy ತೆಗೆದರೂ market problem ಇಲ್ಲ. ಈ ಹಾಲಿಗೆ ಏಕೆ ಸ್ವಾಮಿ market problem ಇದು market problem ಅಲ್ಲ. ಮಾತು ಎತ್ತಿದರೆ consumer ಎಂದು ಹೇಳುತ್ತಾರೆ. ನಾವು ಏನು ಗಾಳಿಯ ಮೇಲೆ ಬದುಕಿದ್ದೇವಾ ಸ್ವಾಮಿ? ದಯವಿಟ್ಟು ತಮ್ಮ ಅಧ್ಯಕ್ಷತೆಯಲ್ಲಿ consumer Forum ಇರಲಿ, Producer Forum ಮಾಡಿಸಿ. ಅವರು ಬದುಕುವಂತೆ ನೋಡಿಕೊಳ್ಳಿ. ಏಕೆ ಇರಬಾರದು Producer Forum? ಉತ್ಪಾದಕರ forum ಏಕೆ ಬೇಡ? ನಾವು ಏನು ಊಟ ಮಾಡುವುದಿಲ್ಲವಾ? ನಮ್ಮದು consumer 70%. ಆದ್ದರಿಂದ ತಾವು ಆಲೋಚನೆಯನ್ನು ಮಾಡಬೇಕು. ಜಾಗತಿಕ ಬಂಡವಾಳ, ಜಾಗತಿಕ ಬಂಡವಾಳ

ಎಂದು ಹೇಳುತ್ತೀರಿ, ದಯವಿಟ್ಟು ಆಲೋಚನೆಯನ್ನು ಮಾಡಬೇಕು. ಅಮೆರಿಕದ ಜೊತೆಯಲ್ಲಿ ನಾವು challenge ಮಾಡುವುದಕ್ಕಾಗುವುದಿಲ್ಲ, ಅದು ಅಮೆರಿಕ. ಅಮೆರಿಕದಲ್ಲಿ economy ಬಿದ್ದ ತಕ್ಷಣ ಅಮೆರಿಕದವರು ಬಿದ್ದು ಎಲ್ಲರೂ ಸುಸ್ತಾಗಿ ಹೋಗಿ ಬಿಟ್ಟರು. ಆರ್ಥಿಕ ಕುಸಿತದಿಂದಾಗಿ ಇಡೀ ಅಮೆರಿಕ ಅಲ್ಲೋಲ ಕಲ್ಲೋಲ. India ದೇಶ ಅಲ್ಲಾಡಲಿಲ್ಲ. ಏಕೆ? Economy ಎಂದರೆ ನಮಗೇನು ಅಂತನೇ ಗೊತ್ತಿಲ್ಲ. ಏಕೆಂದರೆ ನಾವು 25 ರೂಪಾಯಿಯಲ್ಲೂ ಜೀವನವನ್ನು ಮಾಡುತ್ತೇವೆ. ನಮಗೆ economy ಎಂದರೆ ಏನು ಎಂದು ಗೊತ್ತಿಲ್ಲ. ದಯವಿಟ್ಟು ಮಾಣ್ಯ ಮುಖ್ಯಮಂತ್ರಿಗಳು FDI ಗೆ ಅವಕಾಶವನ್ನು ಕೊಡಬಾರದು Foreign direct investment ಅನ್ನು ನಿಲ್ಲಿಸಬೇಕು. ಬೆಂಗಳೂರಿನ ಬೀದಿಯಲ್ಲಿ ಮಾರುವವರು 10–15 ಸಾವಿರ ರೂ.ಗಳ ಬಂಡವಾಳವನ್ನು ಹಾಕಿ ಸಣ್ಣ ಸಣ್ಣ ಉದ್ಯೋಗವನ್ನು ಮಾಡುವವರು. ಮಾಲ್‌ಗಳನ್ನು ಕಟ್ಟಿಕೊಂಡವರ ಬಗ್ಗೆ ಅಲ್ಲ ನಾವು ಹೇಳುವುದು. ನಾವು FDI ಅನ್ನು ವಿರೋಧ ಮಾಡಬೇಕು. ಯಾವುದು ಕೊತ್ತಂಬರಿ ಸೊಪ್ಪು fresh ಇರುವುದು? ಅಲ್ಲಿಯೇ ಕಿತ್ತು ಅಲ್ಲಿಯೇ ಮಾರುವುದು ಫ್ರೆಶಾ? ಮಾಲ್‌ಗಳಲ್ಲಿ 15 ದಿವಸ ಇಟ್ಟು ಕೊಡುತ್ತಾರಲ್ಲಾ ತಂಗಳ ಪೆಟ್ಟಿಗೆಯಲ್ಲಿ ಇಟ್ಟು ಅದು ಫ್ರೆಶಾ? ಯಾವುದು fresh? ನನಗಂತೂ ಗೊತ್ತಾಗುತ್ತಿಲ್ಲ. ಅಮೆರಿಕ ಜೀವನದ ಶೈಲಿಯೇ ಬೇರೆ. ನಾನು ಹೋಗಿದ್ದೆ. ಅಲ್ಲಿ 50 ದಿವಸ ಇದ್ದೆ. ಒಂದು ತಿಂಗಳವರೆಗೆ ಸಾಂಬಾರ್ ಇಟ್ಟುಕೊಂಡು ಊಟ ಮಾಡುತ್ತಾರೆ. ಒಂದು ಸಲ ಸಾರು ಮಾಡಿದರೆ ಒಂದು ತಿಂಗಳು ಅಲ್ಲಿಯೇ ಇಟ್ಟಿರುತ್ತಾರೆ. Fridge ನಲ್ಲಿ ಇಡುವುದು defreezeನಲ್ಲಿ ಬಿಸಿ ಮಾಡಿಕೊಂಡು ತಿನ್ನುವುದು. ಆದರೆ ನಾವು ಹಾಗೆ ಆಗುವುದಕ್ಕೆ ಆಗುವುದಿಲ್ಲ. ಏಕೆಂದರೆ ನಮ್ಮ food culture ಬೇರೆ. ನಮ್ಮ ಜೀವನ ಶೈಲಿಯೇ ಬೇರೆ. ಸುಮಾರು ಕಾಲ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿರುತ್ತೀರಿ, ಆದ್ದರಿಂದ ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುವುದು ಇಷ್ಟೆ. ಮಾನ್ಯ ದತ್ತಾರವರು ಕಾವೇರಿ ವಿಷಯದ ಬಗ್ಗೆ 1857ನೇ ಇಸವಿಯಿಂದ ಹಿಡಿದು 2013ನೇ ಇಸವಿಯವರೆಗೆ ಮಾತನಾಡಿದರು. ಮುಂದಕ್ಕೆ ಏನು ಎಂದು ನಮಗೆ ಯಾರಿಗೂ ಅರ್ಥವಾಗುತ್ತಿಲ್ಲ. ನಾನು ತಮಿಳುನಾಡಿಗೆ ಹೋಗಿ 9 meeting ಮಾಡಿದೆ. ನನಗೂ ಮೂರು ಕಾಸಿನ

ತಮಿಳು ಬರುತ್ತಿತ್ತು. ಸುಮಾರು ತಮಿಳಿನಲ್ಲಿ ಹೇಳಿದೆ. ಅವರಿಗೆ ತಮಿಳಿನಲ್ಲಿ ಹೇಳಿ ಅವರು ರಾಮಸ್ವಾಮಿ ಆರ್.ಐಯ್ಯರ್ ಎಂದು ಹೇಳಿದರಲ್ಲಾ ಅವರು ನಮ್ಮ ಜೊತೆಯಲ್ಲಿ ಬಂದಿದ್ದರು. ಅವರು ಮಾತುಕತೆಗೆ ಸಿದ್ಧ ಇದ್ದೇವೆಂದು ಒಪ್ಪಿಗೆಯನ್ನು ಕೊಟ್ಟರು. ಆದರೆ ಮಾತುಕತೆಗೆ ಒಪ್ಪಿಕೊಳ್ಳುತ್ತೇನೆಂದು ಹೇಳಿದರು. ಆದರೆ ಆ ಮುಖ್ಯಮಂತ್ರಿಗಳು ಈ ಮುಖ್ಯಮಂತ್ರಿಗಳು ಜೊತೆಯಲ್ಲಿ ಕಾವೇರಿ ವಿಷಯದ ಬಗ್ಗೆ ಏಕೆ ಮಾತನಾಡುತ್ತಿಲ್ಲ? (ಈ ಹಂತದಲ್ಲಿ ಮಾನ್ಯ ಸದಸ್ಯರು ತಮಿಳಿನಲ್ಲಿ ಹೇಳಿದರು) ಅಮೆರಿಕದ ಮೂಗ ತಮಿಳುನಾಡಿನ ಮೂಗನ ಜೊತೆಯಲ್ಲಿ ಆತನಾಡುತ್ತಾನೆ. ತಮಿಳುನಾಡಿನ ಮೂಗ ಅಮೆರಿಕದ ಮೂಗನ ಜೊತೆಯಲ್ಲಿ ಮಾತನಾಡುತ್ತಾನೆ. ನಾವು ನೀವು ಮಾತನಾಡುವುದಕ್ಕೆ ಅಹಂಕಾರವೋ ಅಥವಾ ಬೇಜವಾಬ್ದಾರಿಯವೋ ಎಂದು ಹೇಳಿದೆ. ನಾನು ಟಿ.ವಿ.ಯಲ್ಲಿ ಹೇಳಿದಾಗ ಎಕ್ಕಮಾ ಸೌಖ್ಯಮಾ ಎಂದು ಹೇಳಿದಾಗ. ತಮಿಳುನಾಡಿನ 13 ಟಿ.ವಿ.ಯವರು interview ಮಾಡಿಬಿಟ್ಟರು. ನಾನು ಬಹಳ ತಮಿಳು ಬರುವವರ ಹಾಗೆ style ಆಗಿ ಬಿಟ್ಟು ಬಿಟ್ಟೆ ಎತ್ತಾಗಾದರೂ adjust ಆಗಲಿ ಎಂದು 9 meeting ಗಳನ್ನು ಮಾಡಿದೆವು. ಕಾವೇರಿ ವಿಷಯದ ಬಗ್ಗೆ ಮಾತನಾಡುವುದಕ್ಕೆ ತಯಾರಿಲ್ಲ. ನಮ್ಮ ಎರಡು ರಾಜ್ಯದಿಂದ ಸುಮಾರು 40 ಟಿ.ಎಂ.ಸಿ. ನೀರು ಬಳಕೆ ಮಾಡುವುದರಲ್ಲಿ waste ಮಾಡುತ್ತೇವೆ. ನಮ್ಮ ಅವರ ಜಗಳ ನಡೆದಿರುವುದು 1991 ರಿಂದ ಇಲ್ಲಿಯವರೆಗೆ. 5 ವರ್ಷದಲ್ಲಿ ನಮಗೆ ಅವರಿಗೆ ಜಗಳ ಆಗಿರುವುದು 120 ಟಿ.ಎಂ.ಸಿ. ನೀರಿಗೆ. ನಾವು ಈ ಸಾರಿ ಅಲ್ಲ. ಹಿಂದಿನ ಸಾರಿ 5 ವರ್ಷದಲ್ಲಿ ನೀರನ್ನು ಹಿಡಿದಿಟ್ಟುಕೊಳ್ಳುವುದಕ್ಕೆ ಆಗದೆ ಬಿಟ್ಟಿರುವುದು 321 ಟಿ.ಎಂ.ಸಿ. ನೀರು. ಕಾವೇರಿ ವಿಷಯದ ಬಗ್ಗೆ ಇಷ್ಟೊಂದು ಮಾತನಾಡತಕ್ಕಂಥದ್ದು. Supreme Conrt ಕೊಟ್ಟಿರುವುದು 270 TMC ಯಲ್ಲಿ 177 TMC ನೀರು ಇನ್ನು ಕಬಿನಿ second stage, ಇನ್ನೊಂದು 77 TMC ಕೃಷ್ಣಾದಲ್ಲಿ 177 TMC ಇಲ್ಲಿ 77 TMC ಮಾನ್ಯ ಸಿದ್ದರಾಮಯ್ಯನವರು ಇದರ ಬಗ್ಗೆ alternative ಏನು ಎಂದು ಯೋಚನೆ ಮಾಡಬೇಕು. Hard ಆಗಿ ಆಲೋಚನೆಯಸ್ನು ಮಾಡಬೇಕು. ಈಗ ಮಂಡ್ಯ ಮತ್ತು ಮೈಸೂರು ಜಿಲ್ಲೆಗೆ ಹಸಿ ಬರ ಬಂದಿದೆ. 9000 ಕೋಟಿ ರೂ.ಗಳ ನಷ್ಟ, 1200 ಕೋಟಿ ರೂ.ಗಳ ಸಾಲ ಒಂದು ವರ್ಷಕ್ಕೆ ಭತ್ತದ ಬೆಳೆ ಕಬ್ಬು ಹಾಕಿದರೆ

18 ತಿಂಗಳು ಬೇಕು. ನಮ್ಮ ಬದುಕನ್ನು ಯಾವ ರೀತಿ ರಕ್ಷಣೆ ಮಾಡಬೇಕು? ಹಸಿ ಬರವನ್ನು ಯಾವ ರೀತಿ ರಕ್ಷಣೆ ಮಾಡಬೇಕು? 1200 ಕೋಟಿ ರೂ.ಗಳ ಸಾಲ, 9000 ಕೋಟಿ ರೂ.ಗಳು ನಮ್ಮ ಆರ್ಥಿಕ ಭದ್ರತೆಯ ನಾಶ. ಏಕೆಂದರೆ ನೀರಾವರಿ economy style, ಒಂದು ಸಲ failure ಆದರೆ reorganize ಆಗಬೇಕಾದರೆ 7–8 ವರ್ಷ ಬೇಕು. ತಾವು ಅತ್ಯಂತ ಗಂಭೀರವಾಗಿ ಆಲೋಚನೆ ಮಾಡಬೇಕು. 30 ಕೆ.ಜಿ. ಅಕ್ಕಿಯನ್ನು 30 ರೂ.ಗಳಿಗೆ ಕೊಡುತ್ತೇನೆಂದು ಹೇಳಿದ್ದೀರಿ, ಅದನ್ನು ನಾನು ತುಂಬಾ ಸ್ವಾಗತವನ್ನು ಮಾಡುತ್ತೇನೆ.

ಭಾಗ್ಯಜ್ಯೋತಿ ಯೋಜನೆ ಮಾಡಿರುವುದಕ್ಕೆ ಸ್ವಾಗತ. ಪರಿಶಿಷ್ಟ ಜಾತಿ ಎಲ್ಲರಿಗೂ ಸಾಲ ಮನ್ನಾ ಮಾಡಿದ್ದೀರಿ. ಆದರೆ ಭಾಗ್ಯಜ್ಯೋತಿ ಒಂದು ಬಾರಿ ಮನ್ನಾ ಮಾಡುವುದಕ್ಕಿಂಥ ಎಲ್ಲರ ಮನೆಗೆ ಸೋಲಾರ್ ಕರೆದುಕೊಂಡು ಹೋಗಬೇಕು. ಎಲ್ಲಾ ಬಡವರ ಮನೆಗೆ ಸೋಲಾರ್ ಕರೆದುಕೊಂಡು ಹೋದರೆ, ಸುಮಾರು 9 ತಿಂಗಳು ಸಮಸ್ಯೆ ಇಲ್ಲದೇ 3 ಲೈಟ್ ಇಲ್ಲದೇ ಹೋದರೆ 4 ಲೈಟ್ ಹಾಕಿಕೊಳ್ಳಿ. ಅದರ ಬಗ್ಗೆ ಯೋಚನೆ ಮಾಡಬೇಕು. 5,600 ಪಂಚಾಯಿತಿಯಲ್ಲಿ ತೆಂಗು ಮಂಡಳಿಯಲ್ಲಿ ಎಷ್ಟು waste ಸಿಗುತ್ತದೆ? 19 ಜಿಲ್ಲೆಯಲ್ಲಿ ತೆಂಗು ಸಿಗುತ್ತದೆಯಲ್ಲಾ, ಚಿಕ್ಕ ಚಿಕ್ಕ ಒಂದು ಮೆಗಾ ವ್ಯಾಟ್, ಅರ್ಧ ಮೆಗಾ ವ್ಯಾಟ್ ಕರೆಂಟ್ ಅನ್ನು ಉತ್ಪಾದನೆ ಮಾಡತಕ್ಕಂಥ small unit, co-generation. ತಾವು ಯೋಚನೆ ಮಾಡಿ. ನಮಗೆ 1,200 ಮೆಗಾ ವ್ಯಾಟ್ ಕರೆಂಟ್ shortage ಇದೆ. ಅದರ ಬೆಲೆ 6,500 ಕೋಟಿ ರೂ. 6,500 ಕೋಟಿ ರೂ.ಗಳು ಕರೆಂಟ್ ಇಲ್ಲದೇ agriculture ಎಷ್ಟು ನಾಶವಾಯಿತು, industry ಎಷ್ಟು ನಾಶವಾಯಿತು, ವ್ಯಾಪಾರ ಎಷ್ಟು ನಾಶವಾಯಿತು? ಸ್ವಲ್ಪ ಅಂಕಿ–ಅಂಶಗಳನ್ನು ತರಿಸಿಕೊಳ್ಳಿ. 70 ಟನ್ ಬೆಳೆಯತಕ್ಕಂಥ ಕಬ್ಬು 35 ಟನ್ ಆಗಿದೆ. ಇನ್ನು 35 ಟನ್ ನಷ್ಟಕ್ಕೆ ಯಾರು ಹೊಣೆಗಾರರು? ಆದ್ದರಿಂದ ವಿದ್ಯುಚ್ಛಕ್ತಿಯನ್ನು ಆದ್ಯತಾ ವಲಯವನ್ನಾಗಿ ಪರಿಗಣಿಸಬೇಕು. Underground water recharge ಆಗಬೇಕು. ನಮಗೆ ಕುಡಿಯುವುದಕ್ಕೆ 100 ಟಿ.ಎಂ.ಸಿ ನೀರು ಬೇಕು. ಬೆಂಗಳೂರಿಗೆ 15 ಟಿ.ಎಂ.ಸಿ. ನೀರು ಬೇಕು. ಒಂದು ಕೋಟಿ ಜನರಿಗೆ ಆ ರೀತಿ ಲೆಕ್ಕ ಹಾಕಿದರೆ 100 ಟಿ.ಎಂ.ಸಿ. ನೀರು ಬೇಕು. ಡಾಕ್ಟರ್‌ರವರನ್ನು ಕರೆಸಿ ಕೇಳಿ. ಸಂಪೂರ್ಣ ಆರೋಗ್ಯ ನಾಶವಾಗಿರುವುದು, 75 ಭಾಗ ಕಾಯಿಲೆ

ಬಂದಿರುವುದು, ಕೈ ಕಾಲುಗಳನ್ನು ಅಂಗವಿಕಲರನ್ನಾಗಿ ಮಾಡಿರುವುದು ಈ ಫ್ಲೋರೈಡ್ ನೀರು. ಇನ್ನು ಮುಂದೆ ಕೈ ಕಾಲು ಚೆನ್ನಾಗಿರುವವರು ಎಷ್ಟು ಜನ ಎಂದು ಉಳಿದುಕೊಳ್ಳಬೇಕಾಗುತ್ತದೆ. ಅಂಗವಿಕಲರ ಸಂಘ ಮಾಡುತ್ತೇವೆ, ಅಂಗವಿಕಲರಿಗೆ ಪರಿಹಾರ ಮಾಡುತ್ತೇವೆ, ವೈದ್ಯಕೀಯ ಮಂತ್ರಿಗಳು ಎಲ್ಲಿದ್ದಾರೆ ಎನ್ನುವುದು ಗೊತ್ತಿಲ್ಲ, ಅಂಗವಿಕಲತೆ ಏಕೆ ಜಾಸ್ತಿಯಾಗುತ್ತದೆ? ಎಮ್ಮೆಗಳಲ್ಲಿ ಅಂಗವಿಕಲತೆ ಕಡಿಮೆ, ನಾಯಿಗಳಲ್ಲಿ ಅಂಗವಿಕಲತೆ ಕಡಿಮೆ, ಮನುಷ್ಯರಲ್ಲಿ ಏಕೆ ಇಷ್ಟೊಂದು ಅಂಗವಿಕಲತೆ? ವೈಜ್ಞಾನಿಕವಾಗಿ ಕಾರಣವನ್ನು ಹುಡುಕಬೇಕು. ಒಂದೊಂದು ತಾಲ್ಲೂಕಿನಲ್ಲಿ 3,500 ಅಂಗವಿಕಲರು ಇದ್ದಾರೆ, ಆದರಿಂದ ಇದು ಆರೋಗ್ಯ ಕ್ಷೇತ್ರಕ್ಕೆ ಸವಾಲು. ಅಂಗವಿಕಲತೆ ಬಹಳ ದೊಡ್ಡ ಪಾಪದ ಕೆಲಸ. ದಯವಿಟ್ಟು ತಾವು ಆಲೋಚನೆ ಮಾಡಬೇಕು. ವಾಣಿಜ್ಯ ಬೆಳೆಗಳು, ಖುಷ್ಕಿ ಪ್ರದೇಶದ ರೈತರಿಗೆ ರಕ್ಷಣೆ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತಾ, ತಮ್ಮ ಭಾಷಣದಲ್ಲಿ ಅತ್ಯಂತ ಪ್ರಮುಖವಾದ್ದದ್ದು, 30 ನೇ ತಾರೀಖು ದಯವಿಟ್ಟು ಇಡೀ ಸದನದಲ್ಲಿ ಒಕ್ಕೊರಲಿನಿಂದ ನಾವೆಲ್ಲಾ ಹೇಳುತ್ತಿದ್ದೇವೆ. ಆ ಬಡ ಹೆಣ್ಣು ಮಕ್ಕಳಿಗೆ, ಆ ಬಡವ ಯಜಮಾನನಿಗೆ ಮಾತ್ರ 600 ರೂಪಾಯಿ. ಸರ್ ಎಂತಹ ಆಳು ಅತ್ತಿದರು ಎಂದರೆ, ಮೊನ್ನೆ ನಾವು ಮತ್ತು ರಮೇಶ್ ಕುಮಾರ್‌ರವರು ಮಹಾಪರ್ವ ಉದ್ಘಾಟನೆ ಮಾಡುವಾಗ ನೆನೆದುಕೊಂಡಾಗ, ನನ್ನ ಜೀವನದಲ್ಲಿ ಕಣ್ಣೀರು ಹಾಕಿಲ್ಲ. ಅಷ್ಟೊಂದು ಕಣ್ಣೀರು. ಜೊಲ್ಲು ಸುರಿಸಿ, ಊಟ ಮಾಡಿ ಎರಡೂವರೆ ದಿವಸ ಆಗಿದೆ. ಯಾರನ್ನು ಕೇಳಲಪ್ಪಾ ಎಂದು ಆವಕ್ಕ ಹೇಳಿದರೆ ನಾವೇನು ಉತ್ತರ ಕೊಡುವುದು ಸರ್? ಬೇಕಾದರೆ, ಡಿ.ಸಿ.ಸಂಬಳ, ಎಂ.ಎಲ್.ಎ. ಸಂಬಳ 15 ದಿವಸ ಲೇಟ್ ಮಾಡಿ. ದಯವಿಟ್ಟು ಅವರಿಗೆ ಮಾತ್ರ ಇದೊಂದು ನಿರ್ಣಯವನ್ನು ತಮ್ಮ ಭಾಷಣದಲ್ಲಿ ಹೇಳಬೇಕೆಂದು ವಿನಂತಿ ಮಾಡುತ್ತಾ ಇಷ್ಟು ಕಾಲ ಮಾತನಾಡುವುದಕ್ಕೆ ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಛೇರ್ಮೆನ್ : ಮಾನ್ಯ ಶಿವಲಿಂಗೇಗೌಡರು ಮಾತನಾಡುವುದು. ಇನ್ನೂ ಬಹಳಷ್ಟು ಸದಸ್ಯರು ಮಾತನಾಡುವವರು ಇದ್ದಾರೆ. ಸ್ವಲ್ಪ ತಮ್ಮ ಅವಧಿಯಲ್ಲಿ ಮಾತನಾಡಿ ಮುಗಿಸಬೇಕು.

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ (ಅರಸೀಕೆರೆ) : ಮಾನ್ಯ ಪುಟ್ಟಣ್ಣಯ್ಯನವರೂ ಎರಡು ಬಾರಿ ಗೆದ್ದು ಬಂದಿದ್ದಾರೆ. ನಾನೂ ಎರಡು ಬಾರಿ ಗೆದ್ದು ಬಂದಿದ್ದೇನೆ.

(ಗೊಂದಲ)

ಛೇರ್ಮೆನ್ : ಪ್ರಶ್ನೆ ಅದಲ್ಲ.

(7ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ : ಅವರೂ ಟವೆಲ್ ಹಾಕಿದ್ದಾರೆ. ನಾನೂ ಟವೆಲ್ ಹಾಕಿದ್ದೇನೆ. ಅವರು ಹಸಿರು ಬಣ್ಣದ್ದು ಹಾಕಿದ್ದಾರೆ. ನಾನು ಬಿಳಿ ಬಣ್ಣದ್ದು ಹಾಕಿದ್ದೇನೆ.

(ಗೊಂದಲ)

ಛೇರ್ಮೆನ್ : ನಿಮ್ಮ ಪರವಾಗಿ ಬಹಳಷ್ಟು ಜನರು ಮಾತನಾಡಿದ್ದಾರೆ. ಅವರು ನಮ್ಮೆಲ್ಲರ ಧ್ವನಿಯಾಗಿ ಮಾತನಾಡಿದ್ದಕ್ಕೆ ಎಲ್ಲರೂ ಅವರನ್ನು ಮಾತನಾಡುವುದಕ್ಕೆ ಬಿಟ್ಟರು.

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ : ಅದನ್ನು ನಾನು ಒಪ್ಪಿಕೊಂಡೆ. ನಾನೂ ಅದೇ ರೀತಿ ಮಾತನಾಡಿದರೆ ಅವಕಾಶ ಕೊಡಿ. ಆ ರೀತಿ ಮಾತನಾಡಲಿಲ್ಲವೆಂದರೆ ಕೂರಿಸಿ.

(ಗೊಂದಲ)

ಛೇರ್ಮೆನ್ : ಅವರು ಮಾತನಾಡಿದ್ದೇ ಮಾತನಾಡುವುದು ಬೇಡ.

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ : ಸರ್, ಅವರು ಮಾತನಾಡಿದ್ದೇ ಮಾತನಾಡುವುದಿಲ್ಲ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಮಾನ್ಯ ಛೇರ್ಮನ್‌ರವರೆ, ಅರ್ಧ ನಿಮಿಷ. ಮಾನ್ಯ ಮುಖ್ಯಮಂತ್ರಿಯವರಲ್ಲಿ ಒಂದು ವಿನಂತಿ ಸರ್. ಕ್ಯಾನ್ಸರ್, ಹಾರ್ಟ್ ಪೇಷೆಂಟ್‌ಗಳಿಗೆ ಮೆಡಿಕಲ್‌ನಲ್ಲಿ ನಾವು APL, BPL ಎಂದು ಏನೇನು ಕೊಡುತ್ತೇವೆ ಸಂಪೂರ್ಣ ಪರಿಹಾರ 75–80 ರಷ್ಟು ಭಾಗ ಪರಿಹಾರ ಕೊಡಬೇಕು. ಎಲ್ಲಾ ಬಡವರು, ಕ್ಯಾನ್ಸರ್ ರೋಗದಲ್ಲಿರುವ, ಡೆಂಗ್ಯೂ ಜ್ವರದಿಂದ ಬಳಲುತ್ತಿರುವವರು, heart attack, ಇನ್ನಿತರೆ ರೋಗಗಳಿಗೆ ಗುರಿಯಾಗುವವರಿಗೆ ಯಾವ ರೀತಿ ದುಡ್ಡು ಮಾಡುತ್ತೀರೋ, kidney failure

ಆದವರಿಗೆ 2 ಲಕ್ಷ ರೂಪಾಯಿ ಮಾಡಿದ್ದೀರಿ. ದಯವಿಟ್ಟು 4 ಲಕ್ಷ ರೂಪಾಯಿ ಮಾಡಿ. ಹಳ್ಳಿಯಿಂದ ಇಲ್ಲಿಗೆ ಬಂದಿದ್ದಾರೆ. ಮಜ್ಜಿಗೆ ಕುಡಿಯದೇ ಹಾಲನ್ನು ಬಿಟ್ಟು ಕಿಡ್ನಿ ಕಳೆದುಕೊಂಡು ಬಂದಿದ್ದಾರೆ. ದಯವಿಟ್ಟು ಬಡವರಿಗೆ health facilities ನಲ್ಲಿ APL, BPL ಎಂದು ಬರೆಯಬೇಡಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ (ಅರಸಿಕೆರೆ) : ಮಾನ್ಯ ಛೇರ್ಮನ್‌ನವರೆ, ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿರತಕ್ಕಂಥ ತಮಗೆ ಧನ್ಯವಾದಗಳನ್ನು ಈ ಸಂದರ್ಭದಲ್ಲಿ ಸಲ್ಲಿಸುತ್ತಿದ್ದೇನೆ. ಬಹಳ ವರ್ಷಗಳ ಮೇಲೆ ಬಹು ದಿನಗಳಿಂದ ಏನು ಮಾನ್ಯ ಸಿದ್ದರಾಮಣ್ಣನವರು ಇನ್ನು ರಾಜ್ಯದ ಮುಖ್ಯಮಂತ್ರಿಗಳು ಆಗುತ್ತಾರೋ ಇಲ್ಲವೋ ಎನ್ನುವ ಭಾವನೆ ಇದ್ದಂತಹ ಕಾಲದಲ್ಲಿ ಬಹಳ ಹೋರಾಟ ಮಾಡಿ ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದಾರೆ ಮತ್ತು ನಮ್ಮೆಲ್ಲರ ಆಸೆ ಕೂಡ ಆಗಿತ್ತು. ನಾನು ಒಂದು ಬಾರಿ 14 ವೋಟ್‌ಗಳಿಂದ ಪರಾಜಿತನಾದಂತಹ ಸಂದರ್ಭದಲ್ಲಿ ಸಿದ್ದರಾಮಣ್ಣನವರ ಹೆಸರಿನಲ್ಲಿಯೇ ನಾನು ವೋಟ್ ಕೇಳಿದ್ದು. ಆಗ ಅವರು ನಮ್ಮ ಜೊತೆಯಲ್ಲಿದ್ದರು. ಅವತ್ತೇ ಮುಖ್ಯಮಂತ್ರಿಗಳು ಎಂದು ಪಕ್ಷದ ವರಿಷ್ಠರೆಲ್ಲಾ ಘೋಷಣೆ ಮಾಡಿದ್ದರು. ಆದರೆ ಸುದೈವ ಆಗಲಿಕ್ಕೆ ಸಾಧ್ಯವಾಗಲಿಲ್ಲ. ಅದೃಷ್ಟ ಆ ಭಾಗದಲ್ಲಿತ್ತು. ಮುಖ್ಯಮಂತ್ರಿಗಳಾಗಿದ್ದಾರೆ. ಬಹಳ ಸಂತೋಷ. ಬಹಳ ಸ್ವಾಗತ ಮಾಡುತ್ತೇನೆ. ಅದರ ಜೊತೆಯಲ್ಲಿ ನನ್ನದೊಂದು ಆಸೆ ಇತ್ತು. ಈ ಬಾರಿ ಏನಾದರೂ ಮಾಡಿ ಕಾಗ್ರೆಸ್ ಪಕ್ಷಕ್ಕೆ 80 ಸೀಟ್ ಬಂದು, ನಮ್ಮ ಪಕ್ಷದ್ದು ಸ್ವಲ್ಪ ಸೀಟ್ ಬಂದು ಸಮ್ಮಿಶ್ರ ಸರ್ಕಾರದಲ್ಲಿ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಬೇಕೆನ್ನುವ ಆಸೆ ಇತ್ತು. ಆದರೆ ಅದು ಈಡೇರಲಿಲ್ಲ. ಅದನ್ನು ನಾನು open ಆಗಿ ಹೇಳುತ್ತೇನೆ. ಕುಮಾರಣ್ಣನವರು ಅರ್ಧ ಅವದಿಗೆ ಸಿದ್ದರಾಮಣ್ಣನವರು ಅರ್ಧ ಅವಧಿಗೆ ಮುಖ್ಯಮಂತ್ರಿಗಳಾಗಬೇಕೆನ್ನುವುದು ನಮ್ಮೆಲ್ಲರ ಆಸೆ ಇತ್ತು. ಅರ್ಧ ಅವಧಿ ಎಂದರೆ, ಎರಡೂವರೆ ವರ್ಷ, ಎರಡೂವರೆ ವರ್ಷ ಎಂದು ಇತ್ತು. ನಾನು ವೋಟಿಂಗ್ ಕೇಳಿದ್ದೆ. ಸಿದ್ದರಾಮಣ್ಣನವರು ನಮ್ಮ ಕ್ಷೇತ್ರಕ್ಕೆ canvassಗೆ ಬಂದಿದ್ದಾಗ, ನಮ್ಮ ವಿರೋಧ ಪಕ್ಷದವರು ಬಂದು ಸಿದ್ದರಾಮಣ್ಣನವರ ಹೆಸರು ಹೇಳಿಕೊಂಡು ವೋಟ್ ಕೇಳುತ್ತಾರೆ ಎಂದರೆ ಹೇಗೆ ಎಂದು ಅವರಿಗೆ complaint ಮಾಡಿದರು. ನಾನು ಆ ರೀತಿ ಹೇಳಿರಲಿಲ್ಲ. ಕಾಂಗ್ರೆಸ್ full majority ಬಂದರೆ, ಅವರ ಅದೃಷ್ಟ

ಆದರೆ 50-50 ಗೆ ಏನಾದರೂ shortage ಬಂದರೆ ಸಿದ್ದರಾಮಣ್ಣನವರ ಪರವಾಗಿ ನಮಗೆ ನಮ್ಮ ಕುಮಾರಣ್ಣನವರಿಗೆ ಇಬ್ಬರಿಗೂ ಅರ್ಧರ್ಧ ಮಾಡುತ್ತೇವೆ ಎಂದು ವೋಟ್ ತೆಗೆದುಕೊಂಡಿರುವುದು ನಿಜ. ನಾನು ಇಲ್ಲವೆಂದು ಹೇಳುವುದಿಲ್ಲ. ಆ ರೀತಿ ಅಭಿಯಾಸ ಇತ್ತು. ಅವರು ಒಂದು ಬಾರಿ ಈ ರಾಜ್ಯದ ಮುಖ್ಯಮಂತ್ರಿಗಳಾಗಬೇಕೆಂದು ಇತ್ತು. ಎಲ್ಲಾ ಆಗಿದ್ದಾರೆ. ಅವರು ಮುಖ್ಯಮಂತ್ರಿಗಳಾಗಬೇಕೆನ್ನುವ ಆಸೆ ಇತ್ತು. ಈಡೇರಿದೆ. ಆ ಭಾಗದಲ್ಲಿ ಅವರು ಕುಳಿತುಕೊಂಡು ನಿಜವಾಗಿಯೂ ಮುಖ್ಯಮಂತ್ರಿಗಳಾಗಿರುವುದನ್ನು ನೋಡಿರು-ವುದು ನನಗೆ ಸಂತೋಷವಾಗುತ್ತದೆ. ಅದಕ್ಕೆ ನಾನು ಈ ಸಂದಭದಲ್ಲಿ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಅವರ ಸರ್ಕಾರದಲ್ಲಿ ಅವರು ಯಾವ ರೀತಿಯಲ್ಲಿ ವಿರೋಧ ಪಕ್ಷದಲ್ಲಿ ಮತ್ತು ಆಡಳಿತ ಪಕ್ಷದಲ್ಲಿ ಎಲ್ಲಾ ಕೆಲಸ-ಕಾರ್ಯಗಳನ್ನು ಮಾಡುತ್ತಿದ್ದರೋ ಅದೇ ರೀತಿ ಒಂದು ದಿಟ್ಟತನದಿಂದ ರಾಜ್ಯಪಾಲರ ಭಾಷಣದಲ್ಲಿ ಸ್ವಲ್ಪ ಒಕ್ಕಣಿಕೆಗಳನ್ನು ಬಹಳ ಸುಭದ್ರವಾಗಿ, ಅರ್ಥಗರ್ಭಿತವಾಗಿ ಮಂಡಿಸಿದ್ದಾರೆ. ಮಂಡಿಸಿರತಕ್ಕಂಥ ವಿಚಾರಗಳನ್ನು ಸ್ವಲ್ಪಮಟ್ಟಿಗೆ ನಾವು ಪ್ರಾರಂಭಿಕವಾಗಿ ಪ್ರಸ್ತಾಪ ಮಾಡಿದಾಗ, ಸಾಮಾಜಿಕ ಸೇವೆಗಳಲ್ಲಿ ನಾನು ಸಾಮಾಜಿಕ ಸೇವೆಗಳನ್ನು ಈ ರಾಜಕೀಯ ರಂಗದಲ್ಲಿ ಕಾಣುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ನಿಜವಾಗಿಯೂ ಮೆಚ್ಚಬೇಕಾದಂತಹ ವಿಚಾರ. ರಾಜಕೀಯ ರಂಗದಲ್ಲಿ ಸಾಮಾಜಿಕವಾಗಿರತಕ್ಕಂಥ ಎಲ್ಲಾ ವರ್ಗಕ್ಕೆ ಎಲ್ಲರಿಗೆ ಸಾಮಾಜಿಕ ಸೇವೆಯನ್ನು ಒದಗಿಸಿಕೊಡತಕ್ಕಂಥದ್ದು ಅಷ್ಟು ಸುಲಭದ ಕೆಲಸವಾಗುತ್ತದೆ ಎಂದು ನಾನಾದರೂ ಭಾವಿಸಿಲ್ಲ. ಇವತ್ತು ಆ ಸಾಮಾಜಿಕ ಸೇವೆಯೊಳಗೆ ಬರತಕ್ಕಂಥವರು ನೊಂದಿರತಕ್ಕಂಥ ಬಹಳ ಶತಶತಮಾನಗಳಿಂದ ಶೋಷಿತ ವರ್ಗಕ್ಕೆ ಗುರಿಯಾಗಿರತಕ್ಕಂಥ ಮತ್ತು ಸರ್ಕಾರದಿಂದ ದೊರೆಯಬೇಕಾಗಿರತಕ್ಕಂಥ ಎಲ್ಲಾ ಸವಲತ್ತುಗಳಿಂದ ವಂಚಿತರಾಗಿರತಕ್ಕಂಥ ವರ್ಗದ ಜನರಿಗೆ ನ್ಯಾಯವನ್ನು ದೊರಕಿಸಿಕೊಟ್ಟಾಗ ಮಾತ್ರ ಅದು ಸಾಮಾಜಿಕ ಸೇವೆಯಾಗುತ್ತದೆ. ಆ ನಿಟ್ಟಿನಲ್ಲಿ ಇವತ್ತು ಅವರು ನನ್ನ ರಾಜಕೀಯದೊಳಗೆ ಸಾಮಾಜಿಕ ಸೇವೆಯನ್ನು ಕೊಡುತ್ತೇನೆ ಎನ್ನುವ ದೃಢ ನಿರ್ಧಾರವನ್ನು ಮಾಡಿ ಏನು ಹೇಳಿದ್ದಾರೆ ನಿಜವಾಗಿಯೂ ಅದನ್ನು ಮೆಚ್ಚಬೇಕಾಯಿತು. ಅದಕ್ಕೆ ತಕ್ಕಂತೆ ಮುಖ್ಯಮಂತ್ರಿಗಳು ಆದ ತಕ್ಷಣ ಅವರು ಸಾಮಾಜಿಕವಾಗಿ ನೊಂದಿರತಕ್ಕಂಥ ಜನರಿಗೆ ಕೆಲವು ರಿಯಾಯಿತಿಗಳನ್ನು ಮತ್ತು

ಸಾಮಾಜಿಕವಾಗಿ ನೊಂದಿರತಕ್ಕಂಥವರಿಗೆ ಪರಿಹಾರಗಳನ್ನು ಘೋಷಣೆ ಮಾಡಿದರು. ಆ ಘೋಷಣೆ ಮಾಡಿರುವುದು ಸ್ವಾಗತಾರ್ಹ. 5 ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಈ ರಾಜ್ಯದ ಜನತೆಗೆ ಸದೃಢವಾದ ಸರ್ಕಾರದವನ್ನು ನೀಡಿ, ಪ್ರಾಮಾಣಿಕವಾದಂಥ ಸರ್ಕಾರವನ್ನು ನೀಡಿ, ಎಲ್ಲಾ ವರ್ಗದ ಜನರಿಗೆ ಪ್ರಾಮಾಣಿಕವಾದ ಸೇವೆಯನ್ನು ಮಾಡುವ ಭಾವನೆ ಏನು ವ್ಯಕ್ತಪಡಿಸಿದ್ದೀರಿ, ಅದರ ಬಗ್ಗೆ ನಮ್ಮ ಚಕಾರ ಇಲ್ಲ. ನೀವು ಮಾಡುತ್ತೀರಿ ಎನ್ನುವ ಆಶಾಗೋಪುರ ನಮ್ಮಲ್ಲಿದೆ. ನಾವು ಈಗಲೇ ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಸಾಮಾಜಿಕವಾಗಿ ನಿಮ್ಮಲ್ಲರತಕ್ಕಂಥ ಕಳಕಳಿಯ ವ್ಯಾಖ್ಯಾನವನ್ನು ಏನು ಕೊಟ್ಟಿದ್ದೀರಿ, ಒಂದು ವರ್ಷ ಕಳೆದ ಮೇಲೆ ಅದು ಯಾವ ರೀತಿ ಜನತೆಗೆ ತಲಪುತ್ತದೆ, ಸಾಮಾಜಿಕ ಸೇವೆಯಾಗಿ ಮಾರ್ಪಾಡು ಆಗುತ್ತದೆ ಎನ್ನುವ ವಿಚಾರ ಪರಿವರ್ತನೆ ಆದಮೇಲೆ ನಿಮ್ಮ ಸರ್ಕಾರದ ಬಗ್ಗೆ ನಾವು ಮಾತನಾಡುವ ವ್ಯವಸ್ಥೆಗೆ ಹೋಗಬೇಕೇ ಹೊರತು ಅಲ್ಲಿಯವರೆಗೆ ನಾವಾಗಲಿ, ನಮ್ಮ ವಿರೋಧ ಪಕ್ಷದ ನಾಯಕರಾಗಲಿ, ನಾವು ಯಾರೇ ಆಗಲಿ ಅದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ನೀವು 4 ವರ್ಷಗಳ ಕಾಲ ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತು ಸರ್ಕಾರದ ಎಲ್ಲಾರೀತಿಯ ಲೋಪದೋಷಗಳನ್ನು ಪ್ರಾಮಾಣಿಕವಾಗಿ ಎತ್ತಿಹಿಡಿಯುವುದರಲ್ಲಿ ನೀವು ಏನು ಸಮರ್ಥರಾಗಿದ್ದಿರಿ, ಅದೇ ರೀತಿ ಇವತ್ತು ಆ ಆಡಳಿತ ಭಾಗದಲ್ಲಿ ಕುಳಿತು ಈ ರಾಜ್ಯದ ಜನತೆಗೆ ಅದರಲ್ಲೂ ಅಹಿಂದ ಹಿನ್ನೆಲೆಯಲ್ಲಿ ನೀವು ಬಂದು, ಆ ವರ್ಗದ ಜನತೆಗೆ ನೀವು ಪ್ರಾಮಾಣಿಕವಾಗಿ ನ್ಯಾಯವನ್ನು ಕೊಡುತ್ತೀರಿ ಎನ್ನುವುದು ನಮ್ಮೆಲ್ಲರ ಆಶಯವಾಗಿದೆ. ಅದನ್ನು ನಾವು ಸ್ವಾಗತ ಮಾಡುತ್ತೇವೆ. ಅದರ ಜೊತೆಯಲ್ಲಿ ದಿವಂಗತ ದೇವರಾಜ ಅರಸುರವರನ್ನು ಇಲ್ಲಿ ಜ್ಞಾಪಕ ಮಾಡಿಕೊಳ್ಳಬೇಕಾಗುತ್ತದೆ. ಹಿದುಳಿದ ವರ್ಗಕ್ಕೆ ತಮ್ಮದೇ ಆದಂಥ ಒಂದು ದೂರದೃಷ್ಟಿಯನ್ನಿಟ್ಟುಕೊಂಡು ಅವತ್ತು ದೇವರಾಜ ಅರಸು ರವರು ಹಿಂದುಳಿದ ವರ್ಗದ ನಿಗಮವನ್ನು ಏನು ಸ್ಥಾಪನೆ ಮಾಡಿದ್ದರು, ಅದರ ಸ್ಥಾಪನೆ ಮಾಡಿದಂಥ ಸಂದರ್ಭದಲ್ಲಿ ಅಲ್ಲಿಗೆ ಕೊಟ್ಟಂಥ ಸಾಲ, ಅಲ್ಲಿಗೆ ಕೊಟ್ಟಂಥ ಸಾಲಸೌಲಭ್ಯಗಳು ಏನಿದ್ದವು, ಅವತ್ತು ದೇವರಾಜ ಅರಸುರವರು ಹಿಂದುಳಿದ ವರ್ಗಕ್ಕೆ ಒಬ್ಬ ಆದರ್ಶಪ್ರಿಯರಾಗಿ, ದಾತರಾಗಿ ಹೊರಹೊಮ್ಮಿದಂಥ ಸಂದರ್ಭದಲ್ಲಿ ಇವತ್ತು ನೀವು, ಅವತ್ತು ದೇವರಾಜ ಅರಸು ನಿಗಮ ಪ್ರಾರಂಭವಾದಾಗ ಸಾಲ ಕೊಟ್ಟಿದ್ದನ್ನು, ಬಹುಶಃ

ಇಲ್ಲಿಯವರೆಗೆ ಇದ್ದಂಥ ಎಲ್ಲಾ ಬಾಕಿಯನ್ನು ನೀವು ಮನ್ನಾ ಮಾಡಿದ್ದೀರಿ ಎಂದು ತೋರುತ್ತದೆ. ಆ ರೀತಿ ಆ ಸಾಲವನ್ನು ಮನ್ನಾ ಮಾಡುವ ದೃಷ್ಟಿಯಲ್ಲಿ ತಮ್ಮ ಹೃದಯ ಶ್ರೀಮಂತಿಕೆಯನ್ನು ತೋರಿಸಿದ್ದೀರಿ. ಒಳ್ಳೆಯ ಕೆಲಸವನ್ನು ಮಾಡಿದ್ದೀರಿ. ಅದೇ ರೀತಿ ದೇವರಾಜ ಅರಸುರವರ ಬಗ್ಗೆ ಕೆಲವು ಸಂದರ್ಭದಲ್ಲಿ ಹೇಳುತ್ತಿರುತ್ತೇನೆ. ಹಿಂದುಳಿದ ವರ್ಗಕ್ಕೆ ಒಬ್ಬ ಯುಗಪುರುಷ ಇದ್ದ ಹಾಗೆ, ಆಶ್ರಯದಾತರು, ನಿಜವಾಗಿಯೂ ಅವರನ್ನು ನಾವು ಜ್ಞಾಪಕ ಮಾಡಿಕೊಳ್ಳಬೇಕು ಎನ್ನುವುದನ್ನು ನಾನು ಏನು ಹೇಳುತ್ತಿದ್ದೆನೋ, ಅದೇ ರೀತಿ ದೇವೇಗೌಡರು ರಾಜಕೀಯವಾದ ಮೀಸಲಾತಿಯನ್ನು ಹಿಂದುಳಿದ ವರ್ಗಕ್ಕೆ ಕೊಟ್ಟು, ಯಾರು ಏನೇ ಹೇಳಲಿ, ಅವತ್ತು ನೀವು ಆ ಸಂದರ್ಭದಲ್ಲಿ ಇದಿರಿ. ಆದರೆ, ನೀವೆಲ್ಲ ಸೇರಿ ಅವತ್ತು ರಾಜಕೀಯ ಮೀಸಲಾತಿ ಏನು ಈ ರಾಜ್ಯಕ್ಕೆ ಕೊಟ್ಟಿರಿ, ರಾಜಕೀಯ ಮೀಸಲಾತಿಯನ್ನು ಏನು ಹಿಂದುಳಿದ ವರ್ಗಕ್ಕೆ ಕೊಟ್ಟಿರಿ, ನಾವು ಇವತ್ತು ಶ್ರೀಮಾನ್ ದೇವೇಗೌಡರನ್ನೂ ಸಹ ಈ ರಾಜಕೀಯ ಮೀಸಲಾತಿ ವಿಚಾರದಲ್ಲಿ ಅವರೂ ಕೂಡ ಒಬ್ಬ ಯುಗಪುರುಷರು ಎಂದು ಹೇಳಬಹುದು. ಅವತ್ತು ಅವರು ಮಾಡಿದ ದಿಟ್ಟತನದ ಹೋರಾಟ ನಿಜವಾಗಿಯೂ ಅವರು ಮುಖ್ಯಮಂತ್ರಿಯಾಗಿದ್ದಂಥ ಕಾಲದಲ್ಲಿ ಮಾಡಿರತಕ್ಕಂಥ ಶ್ಲಾಘನೀಯ ಕೆಲಸವನ್ನು ನಾವು ಇವತ್ತು ಜ್ಞಾಪಕ ಮಾಡಿಕೊಳ್ಳಲೇಬೇಕಾಗುತ್ತದೆ. ಅಂಥ ಹೋರಾಟ ಮಾಡಿರತಕ್ಕಂಥವರನ್ನು ನಾವು ಯುಗಪುರುಷರೆಂದು ಕರೆಯಲೇಬೇಕಾಗುತ್ತದೆ. ಅದೇ ರೀತಿ ವಿ.ಪಿ. ಸಿಂಗ್‌ರವರು ಉದ್ಯೋಗದಲ್ಲಿ ಮೀಸಲಾತಿ ಕೊಡುವ ನಿಟ್ಟಿನಲ್ಲಿ ಏನು ದಿಟ್ಟತನ ನಿಲುವನ್ನು ತೆಗೆದುಕೊಂಡರು, ಅವರ ಹೋರಾಟದ ಹಿನ್ನೆಲೆ ಏನಿತ್ತು, ನಿಜವಾಗಿಯೂ ಅವರನ್ನೂ ಸಹ ನಾವು ಯುಗಪುರುಷರೆಂದು ಕರೆಯುಬೇಕಾಗುತ್ತದೆ. ಈ ರೀತಿ ಹೋರಾಟ ಮಾಡಿಕೊಂಡು ಬಂದಿರುವ ಎಲ್ಲರನ್ನೂ ನಾವು ಯಾವ ಸಾಲಿನಲ್ಲಿ ಗುರುತಿಸುತ್ತಿದ್ದೇವೋ, ನೀವು ತೆಗೆದುಕೊಂಡಿರುವ ದಿಟ್ಟತನದ ಹೋರಾಟದ ಹಿನ್ನೆಲೆಯಲ್ಲಿ ನೀವೂ ಸಹ ಒಬ್ಬರು ಆ ಮಟ್ಟದ ರಾಜಕಾರಣಿಗಳ ಆ ಸ್ಥಾನ ಉಳಿಸಲಿಕ್ಕೆ ಸಮರ್ಥರಾಗಬಹುದು.

ಛೇರ್ಮನ್ : ಮಾನ್ಯ ಸದಸ್ಯರುಗಳು ಯಾರೂ ಸದನದೊಳಗೆ ದಿನಪತ್ರಿಕೆಯನ್ನು ಓಪನ್ ಆಗಿ ಬಿಡಿಸಿ ಓದಬಾರದು. ವಂದನೆಗಳು. ಈ

ಮಾತನ್ನು ಅಲ್ಲಿ ಒಬ್ಬರು ಸದಸ್ಯರು ಪತ್ರಿಕೆ ಓದುತ್ತಿದ್ದರು ಅವರಿಗೆ ಹೇಳಿದೆ. ಸದನದ ನಿಯಮದ ಪ್ರಕಾರ ಇಲ್ಲಿ ಪೇಪರ್ ಓದುವ ಹಾಗಿಲ್ಲ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಇವತ್ತು ಹೋರಾಟ ಮಾಡಬೇಕೆನ್ನುವ ಹಿನ್ನೆಲೆಯಲ್ಲಿ ನೀವೇನು ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದ್ದೀರಿ, ಅದು ಬಹಳ ಸಂತೋಷ. ನೀವು ಪ್ರಥಮವಾಗಿ ಘೋಷಣೆ ಮಾಡಿದ ಹಾಗೆ 1 ರೂ.ಗೆ ಒಂದು ಕೆ.ಜಿ.ಯಂತೆ 30 ಕೆ.ಜಿ. ಅಕ್ಕಿಯನ್ನು ಕೊಡುತ್ತೇವೆಂದು ಘೋಷಣೆ ಮಾಡಿದ್ದೀರಿ. ನಿಜ. ಇದುವರೆಗೂ ಸಾಮಾಜಿಕ ನ್ಯಾಯವನ್ನು ಹೇಗೆ ಕೊಡುತ್ತಿದ್ದರು ಎನ್ನುವುದನ್ನು ನೀವು ತಿಳಿದುಕೊಳ್ಳಿ. 20 ಕೆ.ಜಿ. ಅಕ್ಕಿಗೆ 10 ರೂಪಾಯಿ subsidy ಕೊಟ್ಟರೆ ಒಂದು ಕುಟುಂಬಕ್ಕೆ 200 ರೂ. ಕೊಟ್ಟಹಾಗೆ ಆಗುತ್ತದೆ. ಆದರೆ ಆ ಕುಟುಂಬದಲ್ಲಿ ಯಾರಾದರೊಬ್ಬ ಕುಡಿಯುವವನಿದ್ದಾರೆ ಒಂದು quarter ರಾಜಾ ವಿಸ್ಕಿಗೆ 37 ರೂಪಾಯಿ tax ಬೀಳುತ್ತದೆ. ಅವನು ಪ್ರತಿ ದಿವಸ ಒಂದು quarter ವಿಸ್ಕಿ ಕುಡಿದರೆ 37 ರೂಪಾಯಿಯಂತೆ ಒಂದು ತಿಂಗಳಿಗೆ ಸುಮಾರು ಒಂದು ಸಾವಿರ ರೂಪಾಯಿ ಆಗುತ್ತಿತ್ತು. ಆದರೆ, ನಾವು ಕೊಡುತ್ತಿರುವ ಸಹಾಯಧನ ಅಕ್ಕಿ ರೂಪದಲ್ಲಿ ಹಿಂದೆ ಕೇವಲ 200 ರೂಪಾಯಿ ಮಾತ್ರ. ಆದರೆ, ವನು ಸರ್ಕಾರಕ್ಕೆ ತುಂಬುವುದು ಒಂದು ಸಾವಿರ ರೂಪಾಯಿ. ಅವನೇನಾದರೂ 2 quarter ಕುಡಿಯುವವನಾದರೆ 2000 ರೂಪಾಯಿ ಆಗುತ್ತದೆ. 3 quarter ಕುಡಿಯುವುದಾದರೆ 3000 ರೂಪಾಯಿ ಆಗುತ್ತದೆ. ಆದರೆ, ನೀವು 30 ಕೆ.ಜಿ.ಅಕ್ಕಿ ಏನು ಕೊಡುತ್ತೇವೆಂದು ಪ್ರಸ್ತಾಪ ಮಾಡಿದ್ದೀರಿ, ಅದನ್ನು ಕೊಟ್ಟಾಗ 24 ರೂಪಾಯಿ, 25 ರೂಪಾಯಿ ಏನೋ ಅಕ್ಕಿ ತೆಗೆದುಕೊಂಡು subsidy ಲೆಕ್ಕದಲ್ಲಿ ಕೊಡುತ್ತೀರಿ, ಇನ್ನು 1 ರೂಪಾಯಿ ಲೆಕ್ಕಕ್ಕಿಲ್ಲ, ಅದು ಖರ್ಚಿಗೆ ಆಗುತ್ತದೆ. 20 ರೂಪಾಯಿ ಅನ್ನು subsidy ರೂಪದಲ್ಲಿ ಕೊಡುವುದಾದರೆ, 30 ಕೆ.ಜಿ. ಎಂದರೆ ಒಂದು ಕುಟುಂಬಕ್ಕೆ 900 ರೂಪಾಯಿ ಆಗಬಹುದು. ಆ ಕುಟುಂಬದಲ್ಲಿ ಏನಾದರೂ 3 ಜನ ಕುಡಿಯುವವರಿದ್ರೆ ಅಲ್ಲೂ 3 ಸಾವಿರ ರೂ. ಖರ್ಚಾಗುತ್ತದೆ. ಇದಕ್ಕೆ ಯಾರು tax ಕಟ್ಟುವವರು? ನಾವು ಇಲ್ಲಿ ಈ ಸದನಕ್ಕೆ ಬಂದಾಗ ಆಯವ್ಯಯದಲ್ಲಿ ಮೊದಲನೇ ಸಾರಿ ಮಂಡನೆ ಮಾಡಿದಾಗ ಅಬಕಾರಿಯಲ್ಲಿ ನಾಲ್ಕೂವರೆ ಸಾವಿರ ರೂಪಾಯಿ tax ಇತ್ತು. ಅದು 5ನೇ ವರ್ಷಕ್ಕೆ 11200 ಕೋಟಿ ರೂಪಾಯಿ, 12

ಸಾವಿರ ಕೋಟಿ ರೂಪಾಯಿ ಆಯಿತು. ಇನ್ನು ಯಾವುದರಲ್ಲಾದರೂ ಈ ತರಹ ಏರಿಕೆ ಇದಯೇ? ಆ ವಿಸ್ಕಿಯನ್ನು ಯಾರು ಕುಡಿಯುವವರು? ಯೋಚನೆ ಮಾಡಿ. ನಾವು ಬಡವರ ರಕ್ತವನ್ನು ಎಷ್ಟು ಹೀರುತ್ತಿದ್ದೇವೆಂದರೆ, ನಾವು ಸ್ವಲ್ಪ ಯೋಚನೆ ಮಾಡಬೇಕು. ಮೊನ್ನೆ ಎಲ್ಲ ಚರ್ಚೆ ನಡೆಯುತ್ತಿತ್ತು. ಅದರ ಮೂಲ ಎಲ್ಲಿದೆ? 27 ಸಾವಿರ ಕೇಸಸ್ ಅರಸೀಕೆರೆ ತಾಲ್ಲೂಕಿನಲ್ಲಿ ಮಾರಬೇಕು, ಇಲ್ಲವೆಂದರೆ ನಿನ್ನನ್ನು suspend ಮಾಡುತ್ತೇನೆಂದು ಆ ಅಧಿಕಾರಿಯನ್ನು ಅಬಕಾರಿ ಮಂತ್ರಿಗಳು ಹೆದರಿಸಿದರೆ, ಈಗಿರುವ ಮಂತ್ರಿಗಳು ಅಲ್ಲ, ಏನು ಮಾಡಬೇಕು? ಹಿಂದಿದ್ದ ಅಬಕಾರಿ ಮಂತ್ರಿಯವರು ಚುನಾವಣೆಯಲ್ಲಿ ಸೋತರು. ಆ 27ಸಾವಿರ ಕೇಸಸ್ ಅನ್ನು ಮಾರಬೇಕೆಂದರೆ ಅವರು railway station ನಲ್ಲಿ ಮಾರಿಸಬೇಕು, ಅದೆಲ್ಲಕ್ಕಿಂತ ಹೆಚ್ಚಾಗಿ ಊರೂರುಗಳಲ್ಲಿ ಐದೈದು ಆರಾರು ಅಂಗಡಿಗಳಲ್ಲಿ ಮಾರಿಸಬೇಕು, ಆಮೇಲೆ ಕಡ ಕೊಡಬೇಕು. ಉದ್ದರಿ ಕೊಡದಿದ್ದರೆ 27 ಸಾವಿರ ಕೇಸಸ್ ಮಾರಾಟವಾಗುವುದಿಲ್ಲ. ಅವನು ಏನು ಮಾಡುತ್ತಾನೆಂದರೆ, first ಒಂದು quarter ಗೆ ಒಬ್ಬನ ಮನೆಗೆ ಹೋಗುವುದು, ಅಲ್ಲಿ ಕುಡಿಯುವುದು, ಅಲ್ಲಿ ಸಾರಾಯಿ 2ನೇ quarter ಕೊಡುವುದಿಲ್ಲ, 3ನೇ ಮನೆಗೆ ಹೋಗುವುದು, ಆಮೇಲೆ ತೋಟದ ಮನೆಗೆ ಹೋಗುವುದು, ಆಮೇಲೆ ಪಕ್ಕದಲ್ಲಿ ಯಾವುದಾದರೂ ಕೊಪ್ಪಲು ಇದ್ದರೆ ಅಲ್ಲಿಗೆ ಹೋಗುವುದು, ಎಷ್ಟು ಮನೆಯಲ್ಲಿ ಮಾರುತ್ತಾರೋ ಆ ಮನೆಯಲ್ಲೆಲ್ಲ ಒಂದೊಂದು quarter ಕುಡಿಯವುದು, ಇದರಿಂದ 3 ರಿಂದ 4, 5 ಸಾವಿರ ರೂಪಾಯಿಗಳ ಸಾಲ ತಿಂಗಳಿಗೆ ಆಗುವುದು. ಹಾಗಾಗಿ 27 ಸಾವಿರ ಕೇಸಸ್ ಖರ್ಚಾಗದೆ ಏನು ಆಗುತ್ತದೆ? ನಾನು ಆವಿಚಾರವಾಗಿ ಸರಿಯಾದ ರೀತಿಯಲ್ಲಿ Excise Inspector ಅನ್ನು enquiry ಮಾಡಿದ್ದೇನೆ. correct ಆಗಿ ಮಾರಿದರೆ ಎಷ್ಟು ಖರ್ಚಾಗುತ್ತದೆ ಎಂದು ಕೇಳಿದರೆ, 14 ರಿಂದ 15 ಸಾವಿರ ಕೇಸ್ ಹೋಗುತ್ತದೆ ಸರ್, ಹೆಚ್ಚಿಗೆ ಹೋಗುವುದಿಲ್ಲ, ಈ ರೀತಿ ಕಡ ಕೊಟ್ಟು ಅಂಗಡಿಗಳಲ್ಲೆಲ್ಲ ಇಟ್ಟು, railway station ನಲ್ಲಿ ಇಟ್ಟು, ಪಾನ್ ಬೀಡಾ ಅಂಗಡಿಯಲ್ಲಿಟ್ಟು ಮಾರಿದರೆ 24 ಸಾವಿರ, 25 ಸಾವಿರ ಕೇಸ್ ಮಾರಬಹುದು ಸರ್ ಎಂದು ಮಾಹಿತಿ ಕೊಡುತ್ತಾರೆ. ಒಂದು ಕಡೆ ಈ ಕಡೆಯಿಂದ ಅವರಿಗೆ ಸಹಾಯಧನ ಕೊಟ್ಟ ಹಾಗೆ ಮಾಡುವುದು, ಆ ಕಡೆಯಿಂದ ಅವರ ಹಣವನ್ನು

ಕಿತ್ತುಕೊಳ್ಳುವ ವ್ಯವಸ್ಥೆ ಮಾಡುವುದು ಇದು ಸರಿಯಲ್ಲ. ಆದ್ದರಿಂದ, ದಯವಿಟ್ಟು ಮಾನ್ಯ ಮುಖ್ಯಮಂತ್ರಿಯವರೆ, ತಾವು ಗ್ರಾಮೀಣ ಪ್ರದೇಶದಿಂದ ಬಂದಿರುವವರು, ನಾವೂ ಸಹ ಗ್ರಾಮೀಣ ಪ್ರದೇಶದಿಂದ ಬಂದಿರತಕ್ಕಂಥವರು, ಬಹುಶಃ ಅವನಿಗೆ ಏನಾದರೂ ಹಳ್ಳಿಯಲ್ಲಿ ಮಾರಾಟ ಮಾಡಿ ಸಿಗದೇ ಹೋದರೆ, ಅವನು ಎಲ್ಲಿಯಾದರೂ town ಗೆ ಹೋಗಿ ಒಂದು quarter ಕುಡಿದುಕೊಂಡು ಬಂದರೆ ಅದರಲ್ಲಿಯೇ ಹೋಗಿ ಸುಮ್ಮನೆ ಮಲಗಿಕೊಳ್ಳುತ್ತಾನೆ. ಅವನಿಗೆ ಹಳ್ಳಿಯಲ್ಲಿ ಮಾತ್ರ ಸಾರಾಯಿ ಸಿಕ್ಕಿದರೆ, ಬ್ರಾಂಡಿ ಸಿಕ್ಕಿದರೆ ಮತ್ತೆ ಪುನಃ 4–5 quarter ಕುಡಿಯುವುದು ತೆವಲು, ಕುಡಿಯುತ್ತಾನೆ. ಹಳ್ಳಿಯಲ್ಲಿ, ಗ್ರಾಮೀಣ ಪ್ರದೇಶದಲ್ಲಿ ಸಂಪೂರ್ಣವಾಗಿ ಮಾರತಕ್ಕಂಥದ್ದನ್ನು ನಿಷೇಧ ಮಾಡಬೇಕು.

ನಮ್ಮ ಬಡವರು ಮತ್ತು ಹಿಂದುಳಿದ ವರ್ಗದ ಜನ ಏನಾದರೂ ಈ ರಾಜ್ಯದಲ್ಲಿ ನೆಮ್ಮದಿಯಿಂದ ಬಾಳಬೇಕಾದರೆ ನಿಜವಾಗಲೂ ಈ ಕೆಲಸ ಆಗಬೇಕು. ಇದರಿಂದ ನಾಲ್ಕು ಸಾವಿರ ಕೋಟಿ ರೂಪಾಯಿಗಳು ಹೆಚ್ಚಿಗೆ ಆದಾಯವನ್ನು ತೆಗೆದುಕೊಂಡು ಈ ಕೆಲಸವನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಈಗ ಸಾಮಾಜಿಕ ಸೇವೆಯ ಬಗ್ಗೆ ನೀವು ತೆಗೆದುಕೊಂಡಿರುವ ನಿರ್ಣಯಗಳು ಬಹಳ ಬೆನ್ನಾಗಿವೆ. ಒಳ್ಳೆಯ ಕೆಲಸಗಳನ್ನು ಮಾಡಿದ್ದೀರಿ. ಈ ಸಾಮಾಜಿಕೆ ನ್ಯಾಯ ದೊರಕಿಸಿ ಕೊಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅಲ್ಪಸಂಖ್ಯಾತರ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ ಬಹಳ ಸಂತೋಷ. ಯಾರೂ ಈ ವಿಷಯವನ್ನು ಪ್ರಸ್ತಾಪ ಮಾಡಿಲ್ಲ. ಈಗ ಈ ಅಲ್ಪಸಂಖ್ಯಾತರ ಕಛೇರಿಗೆ ನಾನು ಹೋಗಿ ನೋಡುತ್ತೇನೆ. ಅವರಿಗೆ ಶಾದಿ ಮಹಲ್, ಸಾಲ ಮತ್ತಿತರೆ ಸೌಲಭ್ಯವನ್ನು ಕೊಡಿಸಲಿಕ್ಕೆ ಹೋಗುತ್ತೇನೆ. ಅಲ್ಲೆಲ್ಲಾ ಬಹಳ ಜಡತ್ವ ಇದೆ. ಒಂದು ಶಾದಿ ಮಹಲ್ ಮಂಜೂರಾತಿ ಮಾಡಿಸಬೇಕಾದರೆ ಅವರು ಹಾಕುವ ಷರತ್ತುಗಳನ್ನು ಪೂರೈಸಲಿಕ್ಕೆ ಆಗದೆ ಶಾದಿಮಹಲ್ ಮಂಜೂರಾತಿಯನ್ನು ಮಾಡಿಸುವುದೇ ಬೇಡ ಎಂದು ಕೈಬಿಟ್ಟಿದ್ದೇನೆ. ಆ ರೀತಿ ಬಹಳ ಕಠಿಣವಾದಂಥ ಷರತ್ತುಗಳು, ಕಾನೂನು ಕಟ್ಟಳೆಗಳು ಇವೆ. ದಯವಿಟ್ಟು ಅಲ್ಪ ಸಂಖ್ಯಾತರ ಬಗ್ಗೆ ನಿಜವಾಗಿ ಕಾಳಜಿ ಇದ್ದರೆ ಅವರಿಗೆ ನೆರವು ನೀಡಿ. ಹಿಂದೆ ಅವರ ಬಗ್ಗೆ ಸ್ವಲ್ಪ ಕಾಳಜಿ ಕಡಿಮೆ ಇತ್ತು ಬಜೆಟ್‌ನಲ್ಲಿ ಸುಮ್ಮನೆ

ಹೇಳುತ್ತಿದ್ದರು. ಈಗ ನಿಮಗೆ ಅವರ ಬಗ್ಗೆ ಹೆಚ್ಚಿನ ಕಾಳಜಿ ಇದ್ದರೆ ಅವರಿಗೆ ದಯವಿಟ್ಟು ಮೂಲಭೂತ ಸೌಕರ್ಯಗಳನ್ನು, ಎಲ್ಲಾ ರೀತಿಯ ಸಾಲ ಸೌಲಭ್ಯಗಳನ್ನು ಒದಗಿಸಲು ಕಾನೂನಿನ ನಿಟ್ಟಿನಲ್ಲಿ ಷರತ್ತುಗಳನ್ನು ಸ್ವಲ್ಪ ಸಡಿಲಿಸಬೇಕು, ಅವರಿಗೆ ಒಂದು ರಿಯಾಯಿತಿಯನ್ನು ಕೊಡಬೇಕೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಈ ಕೈಗಾರಿಕೆಗಳ ಬೆಳವಣಿಗೆ ಆಗದೆ ಈ ದೇಶ ಬೆಳವಣಿಗೆ ಆಗುವುದಿಲ್ಲ. ನಾವು ಬರೇ ಕೃಷಿಯನ್ನು ನಂಬಿಕೊಂಡಿದ್ದರೆ ಅಭಿವೃದ್ಧಿ ಆಗುವುದಿಲ್ಲ. ಆದುದರಿಂದ ಕೈಗಾರಿಕೆಗಳ ಬೆಳವಣಿಗೆ ಆಗಬೇಕು ಎನ್ನತಕ್ಕಂಥದ್ದು ನಮ್ಮ ಉದ್ದೇಶ. ಅದಕ್ಕೋಸ್ಕರ ಕೈಗಾರಿಕೆಗಳನ್ನು ಈ ರಾಜ್ಯದಲ್ಲಿ ತರಲಿಕ್ಕೆ ಬಹಳ ಪ್ರಾಮಾಣಿಕವಾದ ಪ್ರಯತ್ನ ನಾವು ಸದನಕ್ಕೆ ಬಂದ ಮೇಲೆ ಎರಡು ಸಾರಿ ನಡೆಯಿತು. ಬಜೆಟ್‌ನಲ್ಲಿರುವ ಹಣ ಖಾಲಿಯಾಯಿತು ಎಂದು ಕಾಣುತ್ತದೆ. ಯಾವುದೇ ರೀತಿಯ ಪ್ರಯೋಜನ ಆಗಿರುವಂಥ ವರದಿ ವಿಚಾರ ನಮ್ಮ ಕಿವಿಗಂತೂ ಬಿದ್ದಿಲ್ಲ. ನಾವಂತೂ ಓದಲಿಲ್ಲ, ತಿಳಿಯಲಿಲ್ಲ. ಆದ್ದರಿಂದ ದಯವಿಟ್ಟು ನೀವಾದರೂ ಇವತ್ತು ಈ ಕೈಗಾರಿಕಾ ಬೆಳವಣಿಗೆ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ದಯವಿಟ್ಟು ಆ ಕೈಗಾರಿಕೆಗಳ ಜೊತೆಯಲ್ಲಿ ಪ್ರಸ್ತಾಪ ಮಾಡಿ ಆದರೊಂದಿಗೆ ಯಾವರೀತಿಯ ಕೈಗಾರಿಕೆಗಳು ಆಗಬೇಕೆಂದರೆ ರೈತ ಬೆಳೆಯತಕ್ಕಂಥ ಯಾವುದೇ ಒಂದು ಪದಾರ್ಥಗಳು ಆ ಕೈಗಾರಿಕೆಗಳ ಕಚ್ಚಾ ವಸ್ತುಗಳಾಗಿ ಪರಿವರ್ತನೆ ಆಗಬೇಕು. ಆಗ ಎರಡು ಮುಖಗಳಲ್ಲಿ ಆರ್ಥಿಕ ಬೆಳವಣಿಗೆ ಆಗುತ್ತದೆ. ರೈತರು ಮುಂದೆ ಹೋಗುತ್ತಾರೆ ರೈತರ ಆರ್ಥಿಕ ಸಂಕಷ್ಟ ಸುಧಾರಣೆ ಆಗಿ ಅವರು ಮೇಲೆ ಬರುತ್ತಾರೆ. ಮತ್ತೊಂದು ನಾವು ಯಾವ ನಿರುದ್ಯೋಗಿಪದವೀಧರರನ್ನು ನೋಡುತ್ತೇವೆ ಯಾವ ನಿರುದ್ಯೋಗ ಇವತ್ತು ಈ ದೇಶದ ಆರ್ಥಿಕ ಹಿನ್ನಲೆಯಲ್ಲಿ ಒಂದು ಕಾರಣೀಬೂತವಾಗಿದೆ ಅದರ ನಿವಾರಣೆಯಲ್ಲಿಯೂ ಸಹ ಇವತ್ತಿನದಿವಸ ಸ್ಪಷ್ಟವಾಗಿ ಒಂದು ಹೋರಾಟವನ್ನು ಮಾಡತಕ್ಕಂಥ ನಿಟ್ಟಿನಲ್ಲಿ ಪ್ರಾಮಾಣಿಕವಾದ ಹೋರಾಟ ನಡೆಯುತ್ತಿದೆ ಅದಕ್ಕೋಸ್ಕರವಾಗಿ ಈ ಕೈಗಾರಿಕೆಗಳು ಆಗಬೇಕು ಅದರ ಜೊತೆಯಲ್ಲಿ ಇವತ್ತು ಗ್ರಾಮೀಣ ಪ್ರದೇಶದಲ್ಲಿ ಕೈಗಾರಿಕೆಗಳನ್ನು ತಾಲ್ಲೂಕು ಕೇಂದ್ರಗಳಲ್ಲಿ, ಹೋಬಳಿ ಕೇಂದ್ರದಲ್ಲಿ ಮಾಡುವಂಥ ವ್ಯವಸ್ಥೆ ಮಾಡಬೇಕು.

ಶ್ರೀ ಸಾ.ರಾ.ಮಹೇಶ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಕೆ.ಎಂ.ಶಿವಲಿಂಗೇಗೌಡರು ಕೈಗಾರಿಕೆಗಳ ಬಗ್ಗೆ ಪ್ರಸ್ತಾಪ ಮಾಡುತ್ತಿರುವ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮೈಸೂರು ಜಿಲ್ಲೆಯವರಾಗಿರು–ವುದರಿಂದ ತಾವು ಎರಡು ಮೂರು ವರ್ಷಗಳಿಂದ ನೋಡಿದ್ದೀರಿ, ಶ್ರೀ ರಾಮ ಸಕ್ಕರೆ ಕಾರ್ಖಾನೆ ವಿಚಾರದ ಬಗ್ಗೆ ಹೇಳಬಯಸುತ್ತೇನೆ.

ಛೇರ್ಮನ್ : ಅದು ಬೇರೆ ವಿಷಯ, ಅಪ್ರಸ್ತುತವಾಗುತ್ತದೆ. ಆಮೇಲೆ ಹೇಳಿ.

ಶ್ರೀ ಸಾ.ರಾ.ಮಹೇಶ್ : ನಾವು ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ವಿಚಾರದಲ್ಲಿ ಮಾತನಾಡುತ್ತಿರುವು, ಇದು ಬಹಳ ಮುಖ್ಯವಾದ ವಿಚಾರ. ಈಗಾಗಲೇ ನಮ್ಮ ತಾಲ್ಲೂಕಿನ ಮೂರು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಾನ್ಯ ಮುಖ್ಯಮಂತ್ರಿಇಗಳು ದಯಮಾಡಿ ಈ ಬಗ್ಗೆ ಹಮನಹರಿಸಬೇಕು. ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಕುಮಾರಸ್ವಾಮಿಯವರು ....

ಛೇರ್ಮನ್ : ಇದನ್ನು ಬೇರೆ ರೂಪದಲ್ಲಿ ತನ್ನಿ ಇದರಲ್ಲೇಕೆ? ಗಮನ ಸೆಳೆಯುವ ಸೂಚನೆಯಲ್ಲಿ ಹೇಳಿ. ನೀವು ಬೇಗ ಮುಗಿಸಿ, ಈಗ ಬೇಡ. ಅವರು ಮಾತನಾಡುತ್ತಿದ್ದಾರೆ.

ಶ್ರೀ ಸಾ.ರಾ.ಮಹೇಶ್ : ಅವರು ಈಲ್ಡ್ ಆಗಿದ್ದಾರೆ.

ಛೇರ್ಮನ್ : ಈಲ್ಡ್ ಆಗುವುದು ಅಷ್ಟೇ ಅಲ್ಲ, relevant ಆಗಿರಬೇಕು. ಅಸಂಬದ್ಧವಾಗಬಾರದು.

ಶ್ರೀ ಸಾ.ರಾ.ಮಹೇಶ್ : ಶ್ರೀರಾಮ ಸಕ್ಕರೆ ಕಾರ್ಖಾನೆಯನ್ನು ಮತ್ತೊಮ್ಮೆ ಕೂಡಲೇ ಪ್ರಾರಂಭ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡುತ್ತೇನೆ.

ಛೇರ್ಮನ್ : ಮುಂದುವರೆಸಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಅಧ್ಯಕ್ಷರೆ, ಈಗ ನಮ್ಮ ಗ್ರಾಮಾಂತರ ಪ್ರದೇಶಗಳಿಗೆ ಕೈಗಾರಿಕೆಗಳು ಹೋಗಬೇಕೆಂದು ಹೇಳಿದೆ Garments ಬೆಂಗಳೂರಿಗೆ ಬಂದು ಬೆಂಗಳೂರು ಬಹಳ ಜನ ಸಾಂಧ್ರತೆಯಿಂದ ಅಲ್ಲಿ ಜನ ವಲಸೆ, ಗುಳೆ ಬಂದು ಬೆಂಗಳೂರು ಜನಕ್ಕೆ ಇಕ್ಕಟ್ಟಾಗಿದೆ ನಮ್ಮ ಜನರು ಅವ್ಯವಸ್ಥೆಗೆ ಒಳಗಾಗಿದ್ದಾರೆ. ಇವತ್ತು ಒಂದು ಲೋಡ್ ಬಟ್ಟೆ ಹೊಲಿಯುವುದಕ್ಕೆ

ಸಾವಿರ ಜನ ಅರಸೀಕೆರೆಯಿಂದ ಇಲ್ಲಿಗೆ ಬರಬೇಕು. ಆದರೆ ಅದೇ ಒಂದು ಲೋಡ್ ಬಟ್ಟೆ ಅರಸೀಕೆರೆಗೆ ತಂದರೆ ಅಲ್ಲಿ ಹೊಲಿಯುವುದಕ್ಕೆ ಸಾಧ್ಯವಾಗುವುದಿಲ್ಲವೆ? ಬೆಂಗಳೂರಿನಲ್ಲಿ ಇನ್ನಮುಂದೆ ಗಾರ್ಮೆಂಟ್ಸ್‌ಗೆ ಲೈಸೆನ್ಸ್ ಕೊಡಬೇಡಿ. ಈಗಿರುವ ಗಾರ್ಮೆಂಟ್ಸ್‌ಗಳು ಸಾಕು. ನಮ್ಮ ಕಡೆ ತುಮಕೂರು ಕಡೆಗೆ ಕಳುಹಿಸಿ, ನಮ್ಮ ತಾಲ್ಲೂಕು ಜನಗಳು ಬರಲಿ, ಅದಕ್ಕೆ raw material ಏನು? ಮಾನವ ಸಂಪನ್ಮೂಲ raw material ಎಲ್ಲಿ ಮಾನವ ಸಂಪತ್ತು ಸಿಗುತ್ತದೆ ಅಲ್ಲಿ ಆ ಕೈಗಾರಿಕೆಗಳನ್ನು, ಗಾರ್ಮೆಂಟ್ಸ್ ಅನ್ನು ತೆಗೆಯಬಹುದು. ಅಲ್ಲಿಂದ ಇಲ್ಲಿಗೆ ಒಂದು ಸಾವಿರ ಜನ ಬಂದು ಆ ಕಥೆ ಹೇಳಿದರೆ ಬಹುಶಃ ಎಷ್ಟು ರೋಮಾಂಚಕ ಎನ್ನಿಸುತ್ತದೆ ಎಂದರೆ ಮೂರು ಜನ ಹೆಣ್ಣುಮಕ್ಕಳಿದ್ದರೆ ಇಲ್ಲಿಗೆ ಗಾರ್ಮೆಂಟ್ಸ್‌ಗೆ ಕಳುಹಿಸುತ್ತಾರೆ. ಆ ಬಾಡಿಗೆಗೆ, ಊಟಕ್ಕೆ ಅವರು ಕೊಡುವ ಹಣ ಸಾಲುವುದಿಲ್ಲ. ಅಲ್ಲಿಂದ ಮತ್ತೆ ಖಾಸಗಿ ಬಸ್ ಪ್ರತಿದಿನ ಇಲ್ಲಿಗೆ ಬರುತ್ತದೆ. ಎಲ್ಲಿಗೆ ಗೋಗುತ್ತೀರಿ ಎಂದರೆ ಮಕ್ಕಳು ಕೆಲಸದಲ್ಲಿದ್ದಾರೆ ಅವರಿಗೆ ರಾಗಿ, ಕಾಯಿಗಳನ್ನು ಕೊಟ್ಟು ಬರುತ್ತೇನೆ ಎಂದು ಹೇಳುತ್ತಾರೆ. ಅಲ್ಲಿಂದ ಮತ್ತೆ ರಾಗಿ, ಕಾಯಿ, ಕಾಳುಗಳನ್ನು ಎಲ್ಲವನ್ನು ಹೊತ್ತುಕೊಂಡು ಬಂದು ಇಲ್ಲಿ ಬೇಯಿಸಿಕೊಂಡು ತಿನ್ನುವಂಥದ್ದು. ಅವರಿಗೆ ಕೊಡುವಂಥ ಹತ್ತು, ಹನ್ನೊಂದು ಸಾವಿರ ಇಲ್ಲಿಯೇ ಮುಗಿದು ಹೋಗುತ್ತದೆ. ಆದ್ದರಿಂದ ಅಲ್ಲೇ ಗಾರ್ಮೆಂಟ್ಸ್ ತೆರೆದರೆ ಆಮನೆಯವರೇ ಅಲ್ಲಿಯೇ ಬೆಳಿಗ್ಗೆ ಎದ್ದು ಬಿಸಿಊಟ ಮಾಡಿಕೊಂಡು ಅಲ್ಲಿಗೆ ಹೋದರೆ ಅವರಿಗೇನು ರೂ.5,000, ರೂ.6,000 ಕೊಡುತ್ತಾರೋ ಆ ಹಣ ಉಳಿದರೆ ಅವರ ಕುಟುಂಬದ ಆರ್ಥಿಕ ಉನ್ನತಿಯಾಗಲಿಕ್ಕೆ ಸಾಧ್ಯವಾಗುತ್ತದೆ. ಈ ರೀತಿಯಲ್ಲಿ ಚಿಂತನೆ ಮಾಡಿ. ಈ ಗಾರ್ಮೆಂಟ್ಸ್‌ನಲ್ಲಿ ಉದ್ಯೋಗವನ್ನು ಆಧರಿಸತಕ್ಕಂಥ, ಅತಿ ಹೆಚ್ಚಿನ ಉದ್ಯೋಗಸ್ಥರು ಸುಗುವಂಥ ಹೆಚ್ಚಿನ ರೀತಿಯಲ್ಲಿ ಗುಳೆ ಬರುವಂಥ ಜನರನ್ನು avoid ಮಾಡಿ. ಬೆಂಗಳೂರಿನಲ್ಲಿಯೂ ಈ ತೊಂದರೆಗಳನ್ನು ತಪ್ಪಿಸಿಕೊಂಡು ಕೆಲಸ ಆಗಬೇಕೆಂದರೆ ನಿಜವಾಗಲೂ ಈ ಗಾರ್ಮೆಟ್ಸ್ ಅನ್ನು ಗ್ರಾಮೀಣ ಪ್ರದೇಶದಲ್ಲಿ, ತಾಲ್ಲೂಕು ಕೇಂದ್ರದಲ್ಲಿ ಮಾಡತಕ್ಕಂಥ ಕೆಲಸವನ್ನು ಮಾಡಬೇಕೆಂದು ಸರ್ಕಾರಕ್ಕೆ ನಾನು ಒತ್ತಾಯ ಮಾಡುತ್ತೇನೆ.

ಛೇರ್ಮನ್ : ಶಿವಲಿಂಗೇಗೌಡರೆ, ಅರ್ಧಗಂಟೆಯಾಯಿತು. ಸ್ವಲ್ಪ ಬೇಗ ಮುಗಿಸಿಬಿಡಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ವಸತಿ ಯೋಜನೆ ಬಗ್ಗೆ ಬಂದ ತಕ್ಷಣ 1,20,000 ರೂಪಾಯಿಗಳ ಸಹಾಯಧನ ಕೊಡುತ್ತೇವೆಂದು ಹೇಳಿದರು. ನಿಜ, ಈಗ ಆ ಬಗ್ಗೆ ನನ್ನ ಸ್ವಂತ ಅಭಿಪ್ರಾಯ. ಸರ್ಕಾರದ ಸಾಧಕಬಾಧಕಗಳನ್ನು ಯೋಚನೆ ಮಾಡಿ ಆ 1,20,000 ರೂಪಾಯಿಗಳನ್ನು ಪಟ್ಟಿ ತಯಾರು ಮಾಡಿ ಏನೇ ಮಾಡಿದರೂ ಆ ಬಡವರಿಗೆ ಸಿಗುವುದು ಕಷ್ಟ. ಈ 1,20,000 ರೂಪಾಯಿಗಳಿಗೆ ನಮಗೆ ಓಟು ಹಾಕಿರುವವರೆಲ್ಲಾ ಹಿಂದೆ ಎಳೆಯುತ್ತಿರುತ್ತಾರೆ, ನನಗೆ ಒಂದು ಕೊಡಿ, ನಾನು ಒಂದು ಮನೆ ಕಟ್ಟಿಕೊಳ್ಳುತ್ತೇನೆಂದು. ನಾವು ಏನೂ ಮಾಡಲಿಕ್ಕಾಗುತ್ತಿಲ್ಲ, ಬಹಳ ಕಷ್ಟ ಆದ್ದರಿಂದ ನಾನು ಹೇಳುವುದು ಯಾರು BPL Card-holders ಇರುತ್ತಾರೆ, ಅತಿ ಸಣ್ಣ ರೈತರು, ಯಾರು ವಸತಿರಹಿತರು ಇರುತ್ತಾರೆ, ಅವರು ಯಾವ ವಿನ್ಯಾಸದಲ್ಲಿಯಾದರೂ ಮನೆ ಕಟ್ಟಿಕೊಳ್ಳಲಿ, ಅವರಿಗೆ 1,20,000 ರೂಪಾಯಿಗಳ ಸಹಾಯ ಧನವನ್ನು ಸರ್ಕಾರ ಕೊಟ್ಟುಬಿಟ್ಟರೆ ಭಾರಿ ಒಳ್ಳೆಯದು. ನಿಜವಾಗಲೂ ನಮಗೆ ಈ ಫಲಾನುಭವಿಗಳನ್ನು ಆಯ್ಕೆ ಮಾಡುವಂಥ ಜವಾಬ್ದಾರಿ ತಪ್ಪುತ್ತದೆ. ಆ ಮನೆಯನ್ನು ಅವರು ಚೆನ್ನಾಗಿ ಕಟ್ಟಿಕೊಳ್ಳಲಿ. RCC ಹಾಕಿಕೊಂಡು ಕಟ್ಟಿಕೊಳ್ಳಲಿ, BPL cord-holders ಆದರೆ ನಾವು once and for all ಯಾರು ಮನೆಯನ್ನು ಚೆನ್ನಾಗಿ ಕಟ್ಟಿರುತ್ತಾರೆ ಅವರಿಗೆ 1,20,000 ರೂಪಾಯಿಗಳ ಸಬ್ಸಿಡಿ ಕೊಟ್ಟಿದ್ದೇವೆ, ನೀವು ಕಟ್ಟಿಕೊಳ್ಳಿ ಎಂದು ಹೇಳಿದರೆ ಇನ್ನು ಚೆನ್ನಾಗಿ ಕಟ್ಟಿಕೊಳ್ಳುತ್ತಾನೆ, ಇಲ್ಲವಾದರೆ ಈ ಕಾನೂನು ಚೌಕಟ್ಟು, ಅವನಿಗೆ ಕೊಡು, ಇವನಿಗೆ ಕೊಡು, ಅಲ್ಲಿ ಕೊಡು, ಇಲ್ಲಿ ಕೊಡು ಎಂದರೆ ಬಹಳ ಕಷ್ಟವಾಗುತ್ತದೆ. ಇದರ ಬಗ್ಗೆ ಇನ್ನೇನಾದರೂ ಮರುಚಿಂತನೆ ಮಾಡುವಿರಾ ನೋಡಿ. ಇದು ನನ್ನ ವೈಯಕ್ತಿಕವಾದಂಥ ಸಲಹೆ. ಈ ಸಲಹೆಯಲ್ಲಿ 1,20,000 ರೂಪಾಯಿಗಳು ಬೇಕಾದರೆ ಇನ್ನೂ ಸ್ವಲ್ಪ ಕಡಿಮೆ ಮಾಡಿ ಎಲ್ಲರಿಗೂ ಕೊಡುತ್ತೇವೆಂದರೆ ಬಹಳ ಒಳ್ಳೆಯದು. ಯಾರು ವಸತಿಗಳನ್ನು ಕಟ್ಟುತ್ತಾರೆ ಅವರಿಗೆ ಕೊಟ್ಟರೆ ಬಹುಶಃ ಈ ಆಯ್ಕೆ ಮಾಡುವಂಥ ಸಂದರ್ಭದಲ್ಲಿ ಆಗುವಂಥ ಅನಾಹುತಗಳು ತಪ್ಪಬಹುದು. ಯಾರು ನಿಜವಾದ ಫಲಾನುಭವಿ ಇರುತ್ತಾರೋ ಅವರಿಗೆ ಸಿಗುತ್ತದೆ. ಅಲ್ಲಿ ಗ್ರಾಮೀಣ ಪ್ರದೇಶದಲ್ಲಿ ಜನ ಮಾತನಾಡಿಕೊಳ್ಳುತ್ತಿರುವಂಥ ವಿಚಾರವನ್ನು ನಾನು ತಮ್ಮ ಮುಂದೆ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ.

ಇನ್ನು 30 ಕೆ.ಜಿ. ಅಕ್ಕಿಯನ್ನೇನೋ ಕೊಡುತ್ತಿದ್ದೀರಿ. ಆದರೆ ಇದನ್ನು ಹಂಚುವುದು ಹೇಗೆ? ಸಮಸ್ಯೆ ಬಂದಿರುವುದು ಇಲ್ಲಿ. ನ್ಯಾಯಬೆಲೆ ಅಂಗಡಿಗಳಲ್ಲಿರುವ duplicate card ಗಳನ್ನು ಕಂಡು ಹಿಡಿಯುವುದಕ್ಕೆ ಸಾಧ್ಯವಿಲ್ಲ. ಹೆಬ್ಬೆಟ್ಟನ್ನು ಒತ್ತಿದರೆ ಮಾತ್ರ ಅಕ್ಕಿ ಎಂದು ಹೇಳುತ್ತಾರೆ. ಅವನು ಅಕ್ಕಿಯನ್ನು ತೆಗೆದುಕೊಳ್ಳುವಾಗ ಹೆಬ್ಬೆಟ್ಟನ್ನು ಯಾರು ಹತ್ತಿರ ಒತ್ತಿಸುತ್ತಾನೆ. ಯಾರ ಹೆಸರಿನಲ್ಲಿ duplicate card ಗಳನ್ನು ಇಟ್ಟುಕೊಂಡಿದ್ದಾನೋ ಅವರ ಬಳಿಯೇ ತಂದು ಹೆಬ್ಬೆಟ್ಟನ್ನು ಒತ್ತಿಕೊಳುತ್ತಾನೆ. ಅವನೇ ಅಕ್ಕಿಯನ್ನು ತೆಗೆದುಕೊಳ್ಳುತ್ತಾನೆ. ಫಲಾನುಭವಿಯಲ್ಲದ ಮತ್ತೊಬ್ಬ ಫಲಾನುಭವಿಯ ಬಳಿಯೇ ಅವನು ಇವತ್ತಿನವರೆಗೆ ಫೋಟೋ ತೆಗೆದುಕೊಂಡು duplicate card ಗಳನ್ನು ಉಪಯೋಗಿಸುತ್ತಿದ್ದಾನೆ. ಉದಾಹರಣೆಗೆ ಹೇಳುವುದಾದರೆ ನಮ್ಮ ಮನೆಯಲ್ಲಿ ಒಬ್ಬ ಕೆಲಸದವನಿದ್ದ ಅವನ ಫೋಟೋ ತೆಗೆದುಕೊಂಡು ಇವತ್ತು ಅಕ್ಕಿ ಬರುತ್ತಿದೆ. ಆದರೆ ಆತ ಊರು ಬಿಟ್ಟು ಹೋಗಿ ಎಂಟು ವರ್ಷಗಳಾಯಿತು. ಅವನಿಗೆ ಪೂರ್ತಿ ಗಡ್ಡ ಬೆಳೆಸಿ ಫೋಟೋ ತೆಗೆಸಿದ್ದಾರೆ ಅದನ್ನು ಅಂಟಿಸಿಕೊಂಡು ಈಗಲೂ ಅಕ್ಕಿಯನ್ನು ತೆಗೆದುಕೊಂಡು ತಿನ್ನುತ್ತಿದ್ದಾರೆ. ಇದನ್ನೆಲ್ಲಾ ತಪ್ಪಿಸುವುದು ಹೇಗೆ? ನೀವೇನೇ ಮಾಡಿದರೂ ಕೂಡ duplicate card ಗಳನ್ನು ತೆಗೆಯದಿದ್ದರೆ, ಅದನ್ನು ಕಂಡು ಹಿಡಿಯದೆ ಹೋದರೆ ನಿಜವಾದ ಫಲಾನುಭವಿಗಳಿಗೆ ಅಕ್ಕಿ ಸಿಗುವುದು ಕಷ್ಟವಾಗುತ್ತದೆ. ಆ ನಿಟ್ಟಿನಲ್ಲಿ ಪ್ರಾಮಾಣಿಕವಾದ ಹೋರಾಟ ನಡೆಯಬೇಕು. ಇನ್ನು ನಮ್ಮ ಆರ್.ಡಿ.ಪಿ.ಆರ್. ವಿಚಾರ ಹೇಳುವುದಾದರೆ,.............

ಛೇರ್ಮನ್ : ಸಾಕು ನಿಲ್ಲಿಸಿ, ಬೇರೆ ಸಂದರ್ಭದಲ್ಲಿ ಮಾತನಾಡಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಮಾನ್ಯ ಮಂತ್ರಿಗಳು ಇಲ್ಲೇ ಇದ್ದಾರೆ ನಮ್ಮ ಮನೆ, ನಮ್ಮ ರಸ್ತೆ ಯೋಜನೆಗೆ ಹಿಂದೆ ಇದ್ದಂತಹ ಸರ್ಕಾರ ಒಳ್ಳೆಯ ಕಾರ್ಯಕ್ರಮವನ್ನು ಕೊಟ್ಟಿದ್ದು, 20–30 ಕಿ.ಮೀ ರಸ್ತೆಯನ್ನು ಕೊಟ್ಟು ಮಾನ್ಯ ಶಾಸಕರ ಗೌರವವನ್ನು ಉಳಿಸಿದೆ. ತಾವು ಗ್ರಾಮೀಣ ಪ್ರದೇಶದಿಂದ ಬಂದಿರುವಂತಹ ಮುಖ್ಯಮಂತ್ರಿಗಳು ಅದೇ ರೀತಿ ತಾವು 50 ಕಿ.ಮೀ. ರಸ್ತೆಯನ್ನು ಪ್ರತಿ ಶಾಸಕರ ಕ್ಷೇತ್ರಕ್ಕೆ ಕೊಡಬೇಕೆಂಬುದು ನಮ್ಮ ಒತ್ತಾಯವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಸುವರ್ಣ ಗ್ರಾಮದ ಬಗ್ಗೆ ಅವರು ಹೇಳಿದ್ದಾರೆ. ನಾವೂ ಕೂಡ ಹೇಳಿದ್ದೇವೆ. ಇದು ಹೆಸರಿಗಷ್ಟೆ ಆ ಊರಿನ ಜನಸಂಖ್ಯೆಯಲ್ಲಿ ಒಬ್ಬ ವ್ಯಕ್ತಿಗೆ 2,500 ರೂಪಾಯಿಗಳನ್ನು ಕೊಡುತ್ತಾರೆ. 2,500 ರೂಪಾಯಿಗಳಿಗೆ ಒಂದು ಬೀದಿಗೆ ಕಾಂಕ್ರೀಟ್ ಹಾಕಿಸುವುದಕ್ಕಾಗುವುದಿಲ್ಲ. ಮಧ್ಯ ಒಂದು ಬೀದಿಗೆ ಕಾಂಕ್ರೀಟ್ ಹಾಕಿದರೆ ಆ ಕಡೆಯವರು ನಮಗೆ ಕಾಂಕ್ರೀಟ್ ಹಾಕಲಿಲ್ಲ, ಈ ಕಡೆಯವರು ನಮ್ಮ ರಸ್ತೆಗೆ ಕಾಂಕ್ರೀಟ್ ಹಾಕಲಿಲ್ಲವೆಂದು ಬಹಳ ಒತ್ತಾಯ ಮಾಡುತ್ತಾರೆ. ಆದ್ದರಿಂದ ಇವತ್ತು ಸುವರ್ಣ ಗ್ರಾಮ ಕಾರ್ಯಕ್ರಮವನ್ನು ತೆಗೆದುಕೊಂಡರೆ ಅದನ್ನು ಸಂಪೂರ್ಣವಾಗಿ ಮುಗಿಸುವ ಕೆಲಸ ಆಗಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ.

ಛೇರ್ಮನ್ : ಬೇಗ ಮುಗಿಸಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಕೊನೆಯದಾಗಿ ಒಂದೇ ಒಂದು ವಿಷಯವಿದೆ. ಮೀಸಲಾತಿ ವಿಷಯದಲ್ಲಿ ಪಂಚಾಯಿತಿ ಅಧ್ಯಕ್ಷರನ್ನು ಅನರ್ಹಗೊಳಿಸುತ್ತೇನೆಂದು ಹೇಳಿದ್ದೀರಿ. ನಮ್ಮ ತಾಲ್ಲೂಕು ಪಂಚಾಯಿತಿಯಲ್ಲಿ ಲೆಕ್ಕ ಕೊಡುವುದಕ್ಕೆ ಗೊತ್ತಿಲ್ಲದ ತಾಲ್ಲೂಕು ಪಂಚಾಯಿತಿ ಸದಸ್ಯರುಗಳೆಂಬ ರೀತಿ ಆಗಿದೆ. ಈಗ ಅಧಿಕಾರಿಗಳಾದ PDO ಗಳು ಅವರಿಗೆ ಗೊತ್ತಿಲ್ಲದ ರೀತಿ ಸಹಿ ಹಾಕಿಸಿಕೊಳ್ಳುತ್ತಾರೆ ಮಾನ್ಯ ಅಧ್ಯಕ್ಷರೆ, ಒಂದೈದು ನಿಮಿಷ ಕಾಲಾವಕಾಶ ಕೊಡಿ. ನನಗೆ ಕೊಟ್ಟಿರುವುದು ಕೇವಲ 20 ನಿಮಿಷವಷ್ಟೆ. ಅವರೆಲ್ಲ ಒಂದೊಂದು ಗಂಟೆ ಮಾತನಾಡಿದ್ದಾರೆ.

ಛೇರ್ಮನ್ : 45 ನಿಮಿಷವಾಯಿತು. ಬೇರೆಯವರೂ ಕೂಡ ಅವಕಾಶ ಕೇಳುತ್ತಿದ್ದಾರೆ. ಬೇಗ ಮುಗಿಸಿ ಮತ್ತೆ ಮಾತನಾಡುವುದಕ್ಕೆ ಬೇರೆ ಬೇರೆ ಅವಕಾಶ ಬರುತ್ತದೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ವಿಧಾನ ಸಭೆಯನ್ನು ಇನ್ನೊಂದು ದಿನ ಮುಂದಕ್ಕೆ ಹಾಕಿದರೆ ಆಯಿತು ಬಿಡಿ. ಒಂದೈದು ನಿಮಿಷ ಕಾಲಾವಕಾಶ ಕೊಡಿ.

ಛೇರ್ಮನ್ : ಇಲ್ಲಾ, ದಯವಿಟ್ಟು ಮುಗಿಸಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಈ ಮೀಸಲಾತಿ ಯುಗದಲ್ಲಿ ಅಧ್ಯಕ್ಷರು ದುರ್ವ್ಯವಹಾರ ಮಾಡಿದ್ದಾರೆಂದು ಅವರನ್ನು ಅನರ್ಹಗೊಳಿಸಿದರೆ ಹೇಗೆ? ಅವರಿಗೆ ಗೊತ್ತಿರುವುದಿಲ್ಲ. ಏಕೆಂದರೆ ಈ ಮೀಸಲಾತಿ ಯುಗದಲ್ಲಿ ಎಷ್ಟೋ ಜನ

ಹೆಬ್ಬೆಟ್ಟಿನವರನ್ನು ಕೂರಿಸಿದ್ದೇವೆ. ಎಷ್ಟೋ ಜನರಿಗೆ ಎಲ್ಲಿ ಸಹಿ ಹಾಕಬೇಕೆಂಬುದೇ ಗೊತ್ತಿರುವುದಿಲ್ಲ. ಪಿ.ಡಿ.ಓ ಗಳು ಸಹಿ ಹಾಕಿಸಿಕೊಳ್ಳುತ್ತಾರೆ. ಅಧಿಕಾರಿಗಳು ಸಹಿ ಹಾಕಿಸಿಕೊಂಡು ಆಪಾದನೆ ಅವರ ಮೇಲೆ ಬಂದಾಗ ಅವರನ್ನು ಅನರ್ಹಗೊಳಿಸಿದರೆ ಈ ಮೀಸಲಾತಿ ತಂದಿರುವುದಕ್ಕೆ ಅರ್ಥ ಬರುತ್ತದೆಯೇ? ಇದನ್ನು ತಾವು ಯೋಚನೆ ಮಾಡಿ. ನಾನೇಕೆ ಈ ಮಾತನ್ನು ಹೇಳುತ್ತಿದ್ದೇನೆಂಬುದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ, realistic ಆಗಿ ಹೇಳುತ್ತಿದ್ದೇನೆ. ನಾವೊಬ್ಬ ಅಧ್ಯಕ್ಷರನ್ನು ಆಯ್ಕೆ ಮಾಡಿ ಕೂರಿಸಿದ್ದೆವು. ಅವರ ಹೆಸರು ಈಗ ಬೇಡ. ಗ್ರಾಮ ಪಂಚಾಯಿತಿ Secretary ಮತ್ತು ಇವರಿಗೂ ಒಂದು ಒಪ್ಪಂದವಾಯಿತು. ಅಧ್ಯಕ್ಷರ ಗಂಡ 250 ರೂಪಾಯಿಗಳನ್ನು ತೆಗೆದುಕೊಂಡು ಒಂದು ಚೆಕ್ಕಿಗೆ ಸಹಿ ಮಾಡು ಎಂದು ಹೇಳಿ ಹೋದ. ಈ ಮಹಿಳೆಗೆ ಐದು ತಿಂಗಳಿಂದ ಸಂಬಳ ನಿಂತಿತ್ತು, ಇವರು ಎಲ್ಲೋ ಬೋರೆ ಮೇಲೆ ಆಡು ಕಾಯುತ್ತಿದ್ದರು. 250 ರೂಪಾಯಿಗಳಿಗೆ ಒಪ್ಪಂದವಾಗಿತ್ತು. ಅವರು ಇದು ನಿನ್ನ ಸಂಬಳ, ಸಹಿ ಮಾಡಿಕೊಡು ಸಂಬಳವನ್ನು ಡ್ರಾ ಮಾಡಿ ಕೊಡುತ್ತೇವೆ, ಚೆಕ್ ತೆಗೆದುಕೋ ಎಂದು ಹೇಳಿದರೆ, ಆ ಮಹಿಳೆ ಅದೆಲ್ಲಾ ನನಗೆ ಗೊತ್ತಿಲ್ಲ. ನನ್ನ ಯಜಮಾನರು 250 ರೂಪಾಯಿಗಳನ್ನು ತೆಗೆದುಕೊಂಡು ಚೆಕ್ಕಿಗೆ ಸಹಿ ಹಾಕು ಎಂದು ಹೇಳಿದ್ದಾರೆ, ಸಂಬಳವೋ ಅದೋ ಇದೋ ನನಗೆ ಗೊತ್ತಿಲ್ಲವೆಂದು ಹೇಳಿದರು. ಈಕೆಯ ಯಜಮಾನರು ಬಂದ ನಂತರ ಪಡೆಯೋಣವೆಂದು 1,250 ರೂಪಾಯಿಗಳನ್ನು ಕೊಟ್ಟು ಕಾರ್ಯದರ್ಶಿ ಸಹಿ ಹಾಕಿಸಿಕೊಂಡು ಬಂದಿದ್ದರಂತೆ. ಈ ಮಟ್ಟಕ್ಕೆ ಹೋಗುತ್ತದೆ. ತಾವು ದಯವಿಟ್ಟು ಇದರ ಬಗ್ಗೆ ಕೂಡ ಸ್ವಲ್ಪ ಆಲೋಚನೆ ಮಾಡಿ. ನಾವು ಯಾವುದೋ ಜಾತಿ ವ್ಯವಸ್ಥೆಯೊಳಗಡೆ, ಮೀಸಲಾತಿ ವ್ಯವಸ್ಥೆಯೊಳಗಡೆ ಅವಿದ್ಯಾವಂತರನ್ನು ಈ ಪ್ರಜಾಪ್ರಭುತ್ವದಲ್ಲಿ ಮಾಡಿರುತ್ತೇವೆ. ಅಂತಹ ಸಂದರ್ಭದಲ್ಲಿ ಈ ರೀತಿ ಆಗಬಾರದು. ಆದ್ದರಿಂದ ನೀವು ಯಾರನ್ನು ಜವಾಬ್ದಾರರನ್ನಾಗಿ ಮಾಡಬೇಕು ಆ ರೀತಿ ಮಾಡಿ ಕಾನೂನನ್ನು ಜಾರಿಗೆ ತೆಗೆದುಕೊಂಡು ಬನ್ನಿ ಎಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇನ್ನೂ ಸಾಕಷ್ಟು ವಿಚಾರಗಳಿವೆ. ಮಾನ್ಯ ರಾಜ್ಯಪಾಲರ ....

ಛೇರ್ಮನ್ : ಸಾಕು, ದಯವಿಟ್ಟು ಮುಗಿಸಿ. ಎಷ್ಟು ಬಾರಿ ಹೇಳುವುದು? ತಾವು ಹಿರಿಯ ಸದಸ್ಯರಾಗಿದ್ದೀರಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಈ ಸದನದಲ್ಲಿ ಒಂದು ವಿಚಾರವನ್ನು ಹೇಳುವುದಕ್ಕೆ ಬಯಸುತ್ತೇನೆ. ತಾವು ದಯವಿಟ್ಟು ಮುಖ ನೋಡಿ ಮಣೆ ಹಾಕುವುದು ನಿಲ್ಲಬೇಕು. ಒಬ್ಬೊರಿಗೆ ಒಂದೊಂದು ರೀತಿ ಮಾಡಬಾರದು.

ಛೇರ್ಮನ್ : ಇಲ್ಲಿ ಆ ರೀತಿ ಮಾತನಾಡಬಾರದು. ಆ ರೀತಿ ನಡೆಯುವುದಿಲ್ಲ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಒಂದು ಪಕ್ಷಕ್ಕೆ ಇಷ್ಟು ಜನ ಎಂದು ಹೇಳಿ ಅಷ್ಟೇ ಜನ ಮಾತನಾಡುತ್ತೇವೆ. ಒಬ್ಬರಿಗೆ ಒಂದು ಗಂಟೆ ಕಾಲಾವಕಾಶ ಕೊಡುವುದು, ಮತ್ತೊಬ್ಬರಿಗೆ ಎರಡು ಗಂಟೆ ಕಾಲಾವಕಾಶ ಕೊಡುವುದು. 20 ನಿಮಿಷಕ್ಕೆ ಏನು ಮಾತನಾಡುವುದಕ್ಕೆ ಸಾಧ್ಯ?

ಛೇರ್ಮನ್ : ಆ ರೀತಿ ಹೇಳುಬಾರದು. ನಿಮ್ಮ ಪಕ್ಷಕ್ಕೆ ಸಮಯ ನಿಗದಿಯಾಗಿರುತ್ತದೆ. ದಯವಿಟ್ಟು ತಾಳ್ಮೆ ವಹಿಸಬೇಕು.

ಶ್ರೀ ಕೆ.ಎಂ.ಶಿವಲಿಂಗೇಗೌಡ : ನಾನು ತಾಳ್ಮೆ ವಹಿಸಿದ್ದೇವೆ. ನಾನಿನ್ನೂ ಅರ್ಧ ವಿಚಾರ ಮಾತನಾಡಿಲ್ಲ. ತಾವು ಕುಳಿತುಕೊಳ್ಳಿಯೆಂದರೆ ಹೇಗೆ?

ಛೇರ್ಮನ್ : ಆ ರೀತಿ ಮಾತನಾಡಬಾರದು ಏನು ಮಾತನಾಡಬೇಕು, ಏನು ಹೇಳಬೇಕೆಂದು chair ಗೆ ಪ್ರಾರ್ಥನೆಯನ್ನು ಮಾಡಬೇಕು. ಆ ರೀತಿ ಮಾತನಾಡಬಾರದು. You are a senior leader, don t talk 45 ನಿಮಿಷ ಸಮಯವನ್ನು ಕೊಟ್ಟಿದ್ದೇವೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಸಮಯ ಕೊಟ್ಟಿರುವುದು ಕೇವಲ 25 ನಿಮಿಷ 45 ನಿಮಿಷವಲ್ಲ. Conclude ಮಾಡುವುದಕ್ಕೆ ಸಮಯ ಕೊಡುವುದಿಲ್ಲವೆಂದರೆ ನಾನು ಯಾವ ರೀತಿ conclude ಮಾಡಬೇಕು.

ಛೇರ್ಮನ್ : 45 ನಿಮಿಷ ಸಮಯವನ್ನು ಕೊಟ್ಟಿದೆ. ನಿಮ್ಮ ಲೀಡರ್‌ನ್ನು ಕೇಳಿ, ನೀವೊಬ್ಬರೇ ಅಲ್ಲ. ಎಲ್ಲರೂ ಮಾತನಾಡಬೇಕೆಂದು ಹೇಳುತ್ತಾರೆ, ಬೇರೆಯವರಿಗೆ ಅವಕಾಶ ಕೊಡೋಣ. Conclude ಮಾಡಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಮಾತನಾಡುವುದಕ್ಕೆ ನನಗೆ ಸಮಯ ಕೊಟ್ಟಿದ್ದಕ್ಕೆ ಧನ್ಯವಾದಗಳು.

ಛೇರ್ಮನ್ : ಸಮಯವನ್ನು, ಇಷ್ಟು ಎಳದಿದ್ದಕ್ಕೆ ಮತ್ತು ಮಾತನ್ನು ಮುಗಿಸಿದ್ದಕ್ಕೆ ತಮಗೂ ಧನ್ಯವಾದಗಳು.

ಶ್ರೀ ಆರ್.ಜಗದೀಶ್ ಕುಮಾರ್ (ಹೆಬ್ಬಾಳ) : ಮಾನ್ಯ ಅಧ್ಯಕ್ಷರೆ, ಮೊದಲ ಬಾರಿಗೆ ಹೆಬ್ಬಾಳ ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತನಾಗಿರುವ ನನಗೆ ತಾವು ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡಲು ಅವಕಾಶ ಕೊಟ್ಟಿರುವುದಕ್ಕೆ ನಿಮಗೆ ಋಣಿಯಾಗಿದ್ದೇನೆ. ಮಾನ್ಯ ರಾಜ್ಯಪಾಲರ ಭಾಷಣವನ್ನು ಪರಾಮರ್ಶಿಸಿದಾಗ ನನಗೆ ಅನಿಸುವುದು it conceals more than what it reveals ಎಂದು ಅನಿಸುತ್ತಿದೆ. ಮಾನ್ಯ ಅಧ್ಯಕ್ಷರೆ ಮೊದಲನೇ ಪುಟದ ಪ್ಯಾರ ಎರಡರಲ್ಲಿ ಹೇಳುತ್ತಾರೆ. 'I am happy that during the Legislative Assembly Electrions, 2013, the people of Karnataka have given a clear and unequivocal mandate to the new government. People representing all castes, communities, religions and regions have exercised their franchise to make way for the new Government'. ಅಂತ. ಮೂರನೇ ಪುಟಕೆ ಬಂದ ತಕ್ಷಣ 'In the past few yerars, Karnataka has been held in a very low esteem on account of the large number of scams and corruption cases that have come to light. Public money has been swindled and developmental works have come to a halt. Consequently, people have lost faith in political parties. The growing public cynicism has proved detrimes. The growing public cynicism has proved detrimental to democratic traditions.' ಅಂತ. Both the facts are contrary to themselves. If the people have given a clear mandate, then where is the question of growing public cynicism? ಅದೇ ರೀತಿ ಮುಂದುವರೆದಂತೆ, ನಾಲ್ಕನೇ ಪುಟದಲ್ಲಿ 'We will take affirmative action to fill all backlog vacancies in Government and aided institutions within two years ಎಂದು ಹೇಳಿದ್ದಾರೆ. ಅದಕ್ಕೆ ನಾನು ಸರ್ಕಾರವನ್ನು ಪ್ರಾರ್ಥನೆ ಮಾಡುತ್ತೇನೆ. ಯಾವ್ಯಾವ ಇಲಾಖೆಗಳಲ್ಲಿ ಇನ್ನೂ ಎಷ್ಟೆಷ್ಟು ಬ್ಯಾಕ್‌ಲಾಗ್ ಹುದ್ದೆಗಳು

ಖಾಲಿಯಿದೆ ಎಂಬ ಬಗ್ಗೆ ಒಂದು white paper publish ಮಾಡಿ ಅದನ್ನು ಒಂದು ನಿಗದಿತ ಅವಧಿಯೊಳಗೆ ತುಂಬುವುದಕ್ಕೆ ತಾವು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳತ್ತೇನೆ. ಐದನ್ನೇ ಪುಟದಲ್ಲಿ 'Final orders will be passed on all pending applications of Scheduled Tribes and other forest-dwellers under the Forest Rights Act 2006, within one year'. ಎಂದು ಹೇಳುತ್ತಾರೆ.

ಇದೇ ರೀತಿ ಬೆಂಗಳೂರು ನಗರದಲ್ಲಿ ಗ್ರಾಮೀಣ ಪ್ರದೇಶದಲ್ಲಿ ತಾವು ಯಾವ ರೀತಿ ಕೊಡುತ್ತೀರಿ, ಅದೇ ರೀತಿ please take steps to resolve the problems of all urban dwellers, more particularly in Bangalore. Mahathma Gandhi National Rural Employment Guarantee Scheme ಎಂದು ಏನಿದೆ ಇದನ್ನು ಕೇವಲ ಗ್ರಾಮೀಣ ಪ್ರದೇಶದಲ್ಲಿ ಮಾತ್ರ ಕೊಡುತ್ತಿದ್ದೀರಿ. ದಯಮಾಡಿ ಈ ಸ್ಕೀಮ್‌ನ್ನು ನಗರ ಪ್ರದೇಶಕ್ಕೂ ಸಹ ವಿಸ್ತರಿಸಿ, ಇಲ್ಲಿರುವಂಥ ಎಲ್ಲಾ ನಿರುದ್ಯೋಗಿ ಯುವಕರಿಗೂ ಸಹ ಕೊಡುವಂತಹ ಒಂದು ಕಾರ್ಯಕ್ರಮವನ್ನು ರಾಜ್ಯ ಸರ್ಕಾರ ರೂಪಿಸಬೇಕೆಂದು ಈ ಸದನದ ಮುಖಾಂತರ ಕೇಳಿಕೊಳ್ಳುತ್ತೇನೆ. ಸಾಕಷ್ಟು ಹಿರಿಯ ನಾಯಕರೆಲ್ಲಾ ಮಾತನಾಡುವ ಸಂದರ್ಭದಲ್ಲಿ ಕಾವೇರಿ ಬಗ್ಗೆ ಬಹಳ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ನನಗೆ ತಿಳಿದ ಮಟ್ಟಿಗೆ there is no future in the past. ಹಿಂದೆ ಏನಾಯಿತು ಎನ್ನುವುದನ್ನು ಯೋಚನೆ ಮಾಡುವುದು ಬೇಡ. ಎಲ್ಲೋ ಕೆಲವು ಕಡೆ ಓದಿರುವುದು ನನಗೆ ಜ್ಞಾಪಕವಿದೆ. Hon'ble Supreme Court is final. The counsel has not exercised his jurisdiction to review the judgment of the Supreme Court. ಆದ್ದರಿಂದ ಅದೇನಾದರೂ ಸಾಧ್ಯವಾದರೆ ಅದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. MLA ಅನುದಾನ ಒಂದು ಕೋಟಿ ರೂ.ಗಳನ್ನು ಕೊಡುತ್ತಿದ್ದು, ಅದನ್ನು ದಯಮಾಡಿ ಹೆಚ್ಚಿಸಿ, ಒಂದು ಕೋಟಿ ರುಪಾಯಿಗಳಿಗೆ ಏನೂ ಮಾಡುವುದಕ್ಕೆ ಸಾಧ್ಯವಿಲ್ಲ. ಬೆಂಗಳೂರಿನ ಶಾಸಕರ ಪರಿಸ್ಥಿತಿ ಹೇಗಿದೆ ಎಂದರೆ, ಎಲ್ಲಾ ಕೆಲಸ ಕಾರ್ಯಗಳನ್ನು ಕಾರ್ಪೋರೇಟರ್ಸ್ ಹಾಗೂ ಬಿ.ಬಿ.ಎಂ.ಪಿ. ಯವರು ಮಾಡುತ್ತಾರೆ. ನಾವು ಅವರ ಹತ್ತಿರ ಹೋಗಿ

ಕೇಳಿ ಕೊಳ್ಳುವಂತಹ ಪರಿಸ್ಥಿತಿ ಬೇಡ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು MLA ಅನುದಾನವನ್ನು ಒಂದು ಕೋಟಿ ರೂ.ಗಳಿಂದ ಐದು ಕೋಟಿ ರೂ.ಗಳಿಗೆ ಹೆಚ್ಚಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಮಧ್ಯದ ಬಗ್ಗೆ ಮಾತನಾಡುವುದಾದರೆ ನನಗೆ ತಿಳಿದ ಮಟ್ಟಿಗೆ ಮುಖ್ಯಮಂತ್ರಿಗಳು ಹೇಳಿರುವುದು cheap liquor ಅಲ್ಲ. It is a safe drink at an affordable price. ಅದನ್ನು ಮಾಡಬೇಕೆಂದು ಅವರಿಗೆ ಅನ್ನಿಸಿದ್ದು, ಅವರ ಭಾವನೆ ಆ ರೀತಿಯಿತ್ತು ಎಂದು ನನಗೆ ಅನ್ನಿಸುತ್ತದೆ. ಆದರೆ, ಇದರ ಬಗ್ಗೆ ಮಾತನಾಡುವುದು ಸಂದರ್ಭದಲ್ಲಿ ನಮ್ಮ ದೇಶದವರು India urges the World Health Organization to set target to reduce alcohol consumption. ನಾವು WHO ನಲ್ಲಿ alcohol consumption ಕಡಿಮೆ ಮಾಡಬೇಕು ಮತ್ತು ಅದಕ್ಕೆ ಬೇಕಾದಂಥ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ. ಆದರೆ ನಾವು ಮಾಡಿರುವ ತಪ್ಪೇನೆಂದರೆ ಸಾರಾಯಿಯನ್ನು ನಿಷೇಧ ಮಾಡಿದ್ದೇವೆ. ನಿಷೇಧ ಮಾಡುವ ಮೊದಲು, ಆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಿದೆ. ಇಡೀ ರಾಜುದಲ್ಲಿ 15,000 ಸಾರಾಯಿ ಮಾರಾಟ ಮಾಡುವ ಅಂಗಡಿಗಳಿದ್ದು, ಇದು official ಆಗಿದ್ದು, ಇದು ಬಿಟ್ಟು ಇನ್ನೂ 15,000 ಅಂಗಡಿಗಳಲ್ಲಿ ಹಾಗೆಯೇ ಮಾರಾಟ ಮಾಡುತ್ತಿದ್ದರು. ಒಟ್ಟು 30,000 ಅಂಗಡಿಗಳನ್ನು ಏಕಾಏಕಿ ಬ್ಯಾನ್ ಮಾಡಿ ಬಿಟ್ಟಿವು. ಆದರೆ ಸಾರಾಯಿ ಪಾನಿಕರೇನಿದ್ದಾರೋ ಅವರು Indian made liguor ಗೆ ವಾಪಸ್ಸು ಬಂದರು. ಅದು ನಮ್ಮ ರಾಜಸ್ವದ excise duty collection ನಿಂದ ತಿಳಿಯುತ್ತಿದೆ. ಆದರೆ, ನಮ್ಮಲ್ಲಿ 1991 ರಲ್ಲಿ 3,900 CL-2 ಅಂಗಡಿಗಳು ಏನಿದ್ದವೋ ಅವು ಹಾಗೆಯೇ ಇವೆ. CL-2 ಪ್ರಾವಿಷನ್ ನಲ್ಲಿ ಪ್ರತಿ 10 ವರ್ಷಕ್ಕೆ ಸೆನ್ಸ್‌ಸ್ ಬಂದ ಮೇಲೆ ನಾವು ಎಷ್ಟು ಅಂಗಡಿಗಳು ಬೇಕೆಂಬುದನ್ನು ನಿರ್ಧಾರ ಮಾಡುವಂತಹ ಒಂದು ಕಾನೂನಿದೆ. ಆ ಕಾನೂನನ್ನು ಒಂದು ನಿಮಿಷ ಸದನದಲ್ಲಿ ಓದುತ್ತೇನೆ. Number of licenses to be fixed- Maximum number of licenses to be granted in an area shall be determined from time to time by the Excise Commissioner with previous approval of State Government. ಇದಾದ ನಂತರ ಏನಾಯಿತು ಎಂದರೆ 2001 ರಲ್ಲಿ

ಸೆನ್ಸ್ ತೆಗೆದುಕೊಂಡು ಸ್ವಲ್ಪ- ಅಂಗಡಿಗಳನ್ನು ಜಾಸ್ತಿ ಮಾಡಬೇಕೆನ್ನುವ ಪ್ರಸ್ತಾವನೆ ಇತ್ತು. ಆದರೆ ಅದು ರಾಜಕೀಯ ಕಾರಣಗಳಿಗಾಗಿ ನಿಂತು ಹೋಯಿತು. ಈಗ 2011 ರ ಸೆನ್ಸ್ ಸಹ ಬಂದಿದೆ. ಈ ಅಂಗಡಿಗಳು, The number of retail licenses to be granted in the a taluk for the year shall be determined with reference to the population of the taluk on the probable demand. The number of retail licenses to be granted in a taluk shall be one retail license for every 7,500 urban population and one retail license for every 15,000 rural population ಎಂದು ಇದೆ. ಮಾನ್ಯ ಯಡಿಯೂರಪ್ಪನವರ ಸರ್ಕಾರದಲ್ಲಿ ಇದನ್ನು ಮುಂದಿಟ್ಟುಕೊಂಡು 1,000 ಲೈಸೆನ್ಸ್‌ನ್ನು extra ಕೊಡಬೇಕೆಂದು ಪ್ರಸ್ತಾವನೆ ಇತ್ತು. ಆದರೆ ಅಂದಿನ ವಿರೋಧ ಪಕ್ಷಗಳು 1,000 ಲೇಸೆನ್ಸ್‌ನ್ನು ಏಕೆ ಕೊಡುತ್ತೀರೆಂದು ಹೇಳಿದ್ದಾಕ್ಕಾಗಿ ಪ್ರಸ್ತಾವನೆಯನ್ನು ಹಿಂಪಡೆಯಲಾಯಿತು. ಮಧ್ಯವಿರಲಿ, ಇನ್ಯವುದೇ ವಸ್ತುವಿರಲಿ, ನಾವು ಸರಿಯಾದಂತಹ efficient distribution system ಇಡಲಿಲ್ಲವೆಂದರೆ illicit liguor ಬರುವುದಕ್ಕೆ chances ಇದೆ. ಅದಕ್ಕಾಗಿ ನಾನು ಮುಖ್ಯಮಂತ್ರಿಗಳಲ್ಲಿ ಸದನದ ಮುಖಾಂತರ ಕೇಳಿಕೊಳ್ಳುವುದೇನೆಂದರೆ ನಾವು ಕೊಡುವಂತಹ CL-2, CL-9 ಲೈಸೆನ್ಸ್‌ಗಳು, ಅದು ರಾಜ್ಯ ಸರ್ಕಾರದ ಪ್ರಿವಿಲೇಜ್, ನಾವು ಅದನ್ನು ಕೊಟ್ಟಿದ್ದೇವೆ. ಕಾಳಸಂತೆಯಲ್ಲಿ ಈ ಲೈಸೆನ್ಸ್‌ಗಳು 50 ಲಕ್ಷ ರೂ.ಗಳಿಂದ ಒಂದು ಕೋಟಿ ರೂ.ಗಳಿಗೆ ಮಾರಾಟವಾಗುತ್ತಿವೆ. ಇದು ಮಾನ್ಯ ಮುಖ್ಯಮಂತ್ರಿಗಳ ಗಮನದಲ್ಲೂ ಇದೆ. ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿ ಕೊಳ್ಳುವುದೇನೆಂದರೆ ಬಜೆಟ್‌ಪ್ರಪೋಸಲ್ ಮಾಡುವ ಸಂದರ್ಭದಲ್ಲಿ MSIL ಗಾದರೂ ಕೊಡಿ, ಹೊಸ ಅಂಗಡಿಗಳನ್ನು ತೆರೆಯದಿದ್ರೆ, ರೇಷನ್ ಅಂಗಡಿ, ಬೇರೆ ಬೇರೆ ಅಂಗಡಿಗಳಲ್ಲಿ, ಮನೆಗಳನ್ನು ಮಾರಾಟ ಮಾಡುವುದನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ಒಂದು ವೇಳೆ ನಿಲ್ಲಿಸುವುದಕ್ಕೆ ಹೋದರೆ illegal liquor ಮತ್ತೆ ಮಾರುಕಟ್ಟೆಗೆ ಬರುತ್ತದೆ ಎನ್ನುವ ಮಾತನ್ನು ಸದನದ ಮುಖಾಂತರ ತಮಗೆ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಮಾನ್ಯ ಸದಸ್ಯರಾದ ಬಸವರಾಜ ರಾಯರೆಡ್ಡಿ ಅವರು ಮಾತನಾಡುವಂತಹ

ಸಂದರ್ಭದಲ್ಲಿ ಬಿಡಿಎ ಆ್ಯಕ್ಟ್ ಸೆಕ್ಷನ್ 16(2) ಬಗ್ಗೆ ಹೇಳಿದರು. 16(2) ಮಾಡಬೇಕಾದರೆ ನಾನು ಸಾಕಷ್ಟು ಕಡತಗಳನ್ನು ನೋಡಿದ್ದೇನೆ. ಮಾನ್ಯ ಅಧ್ಯಕ್ಷರೆ, ಅವರು ಇರಲಿ, ಇಲ್ಲದಿರಲಿ, ಇವರೇ ಕಛೇರಿಯಲ್ಲಿ ಕುಳಿತುಕೊಂಡು possession ತೆಗೆದುಕೊಂಡಿದ್ದೇವೆಂದು ಹೇಳಿ ಗೆಜೆಟ್ ಮಾಡಿರುವ ಬಹಳಷ್ಟು ನಿದರ್ಶನಗಳು ಬಿಡಿಎ ಯಲ್ಲಿ ಇವೆ. ಇದರಿಂದ ಬಹಳ ಕಷ್ಟವಾಗುತ್ತಿದೆ. ಈಗಾಗಲೇ ಹಲವು ನ್ಯಾಯಾಲಯಗಳು ಹೇಳಿರುವ ಪ್ರಕಾರ 16(2) ಮಾಡುವ ಮೊದಲು, ಯಾರು ಅದಕ್ಕೆ ಸಹಿ ಹಾಕುತ್ತಾರೋ ಅವರ ಹೆಸರು, ಫೋಟೋ, ವಿಳಾಸವಿರಬೇಕೆಂದು ಹೇಳಲಾಗಿದೆ. ಆದರೆ ಈಗಾಗಲೇ ಆಗಿರುವಂತಹ 16(2) ಗೆ ನೀವು ಏನಾದರೂ ಪ್ರಾವಿಷನ್ ಮಾಡದೇ ಇದ್ದರೆ illegal notification ಆಗಿರುವುದನ್ನು ಡಿ-ನೋಟಿಪಿಕೇಷನ್ ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಕಳೆದ 4-5 ವರ್ಷಗಳಲ್ಲಿ ಡಿ-ನೋಟಿಪಿಕೇಷನ್ ಎಂದರೆ, ಅದು ಒಂದು ದೊಡ್ಡ ಭೂತವೆಂದು ಜನ ಹೇಳುವಂತಹ ಸಂದರ್ಭ ಬಂದಿದೆ. ಅದಕ್ಕೆ ಹೊಸದಾಗಿ ಬಿಡಿಎಯಲ್ಲಿ ಏನು ಮಾಡಿದ್ದಾರೆಂದರೆ, ಹೊಸದಾಗಿ ಪ್ರಪೋಸಲ್ ಬಂದ ಮೇಲೆ ಅದು ಮುಖ್ಯ ಮಂತ್ರಿಗಳ ಅಥವಾ ಬಿ.ಡಿ.ಎ. ಸಚಿವರ ಪರಮಾಧಿಕಾರ. ಅದನ್ನು ನೋಡುವುದಕ್ಕೆ ಡಿ-ನೋಟಿಫಿಕೇಷನ್ ಕಮಿಟಿ ಇರುತ್ತದೆ. ಅಲ್ಲಿರುವಂತಹ ಅಧಿಕಾರಿಗಳು ಡಿ-ನೋಟಿಫಿಕೇಷನ್ ಮಾಡಬಹುದೇ ಅಥವಾ ಇಲ್ಲವೇ ಎಂಬುದನ್ನು ಅವರು ಶಿಫಾರಸ್ಸು ಮಾಡುವುದರ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಒಂದು ಸ್ಪಷ್ಟವಾದ ನಿರ್ಧಾರವನ್ನು ತೆಗೆದುಕೊಳ್ಳಬೇಕು. ಆದರೆ ಆಕ್ಟ್‌ನಲ್ಲಿ ಆ ರೀತಿಯಿಲ್ಲ. ಆ್ಯಕ್ಟ್‌ನಲ್ಲಿರುವುದು ಡಿ-ನೋಟಿಫಿಕೇಷನ್ ಮಾಡುವಂತಹ ಪವರ್ ಸಹ ಮಾನ್ಯ ಮಂತ್ರಿಗಳಿಗೆ ಇರುತ್ತದೆ. ನಾನು ಬಹಳಷ್ಟು ಸಾರಿ ನೋಡಿದ ಹಾಗೆ ಏನಾಗುತ್ತದೆ ಎಂದರೆ, ನಮ್ಮ ರಾಜಕೀಯ ಮುಖಂಡರುಗಳಿಗೆ, ಮಂತ್ರಿಗಳಿಗೆ ಹೇಳುವಂತಹ ಸಂದರ್ಭದಲ್ಲಿ ಅಧಿಕಾರಿಗಳು, ತಾವು ಒಂದೊಂದು ಹಂತದಲ್ಲಿ ಪವರ್‌ಫುಲ್ ಆಗುವುದಕ್ಕೆ ಈ ರೀತಿಯಾದ ಕಮಿಟಿಗಳನ್ನು ರಚಿಸಿ, 300 ಎಕರೆಯಲ್ಲಿ 265 ಎಕರೆ ಭೂಮಿಯನ್ನು ಕೈಬಿಟ್ಟಿರುತ್ತಾರೆ. ಉಳಿದ 35 ಎಕರೆ ಭೂಮಿಯನ್ನು ಕೈಬಿಡಬಹುದೆಂದು ಮಾನ್ಯ ಮುಖ್ಯಮಂತ್ರಿಗಳ ಕಛೇರಿಯಿಂದ ಪ್ರಪೋಸಲ್ ಹೋದರೆ, if this land is de-notified, it will affect the continuity and compactness of the proposed layout

ಎಂದು ಹೇಳುತ್ತಾರೆ. 300 ಎಕರೆಯಲ್ಲಿ 265 ಎಕರೆ ಭೂಮಿಯನ್ನು ಅಧಿಕಾರಿಗಳೇ ಕೈಬಿಟ್ಟಿರುತ್ತಾರೆ, ಉಳಿದ 35 ಎಕರೆ ಭೂಮಿಯನ್ನು ಕೈಬಿಡಬೇಕಾದ ಸಂದರ್ಭದಲ್ಲಿ ಈ ರೀತಿ ನೋಟ್ ಹಾಕಿ ಕಳುಹಿಸುತ್ತಾರೆ. ನಾವು ಆ ಅಧಿಕಾರಿಗಳ ಹತ್ತಿರ ಹೋಗಿ ದಯಮಾಡಿ ನಮಗೆ ಸಹಾಯ ಮಾಡಿ ಎಂದು ಕೇಳಿಕೊಂಡು, ಅಲ್ಲಿ ಎಲ್ಲಾ ರೀತಿಯಲ್ಲಿ ಏನೇನೂ ನಡೆಯಬೇಕೋ ಅದೆಲ್ಲಾ ನಡೆದರೆ, ಆಗ, Yes, this is a fit case for de-notification ಎಂದು ಹೇಳುವಂತಹ ಪದ್ಧತಿ ಬಂದಿದೆ. ಈ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳೇ personal ಆಗಿ ತೆಗೆದುಕೊಂಡು ಗಮನ ಹರಿಸಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಇನ್ನೊಂದು KIADB Act. ಈ ಆ್ಯಕ್ಟ್‌ನಲ್ಲಿ 28(1), 28(4), ಆದಮೇಲೆ, ಅಂದರೆ preliminary notification ಗೂ final notification ಗೂ ಎಷ್ಟು ವರ್ಷಗಳೆಂದು ಇಲ್ಲ. 20 ವರ್ಷಗಳ ನಂತರವೂ final notification ಮಾಡಬಹುದು, ಆದಾದನಂತರ ಅವರಿಗಿಷ್ಟ ಬಂದಾಗ compensation declare ಮಾಡಬಹುದು, ಅವರಿಗಿಷ್ಟ ಬಂದಾಗ ಕೊಡಬಹುದು. Parallely, they can take possession of the land. KIADB Act ನಲ್ಲಿ ಏಕೆ ಈ ರೀತಿಯ ನ್ಯೂನತೆಗಳು ಬಂದಿದೆಯೋ ಗೊತ್ತಿಲ್ಲ. ಇದನ್ನು ಸರಿಪಡಿಸುವಂತಹ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಗಳು– ಮುಂದಿನ ದಿನಗಳಲ್ಲಿ ಮಾನ್ಯ ಕಾನೂನು ಮಂತ್ರಿಗಳ ಅಭಿಪ್ರಾಯವನ್ನು ತೆಗೆದುಕೊಂಡು ಈ ಸದನದ ಮುಂದೆ ತರಬೇಕು.

ಆ ರೀತಿಯಾದಂಥ ಏನೇನು ನ್ಯೂನತೆಗಳಿವೆ. ಆ ಎಲ್ಲಾ ನ್ಯೂನತೆಗಳನ್ನು ಸರಿಪಡಿಸಬೇಕೆಂದು ಕೇಳಿಕೊಂಡು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅಧ್ಯಕ್ಷರೆ, ನಾನು 3–4 ದಿವಸಗಳಿಂದ ನೋಡುತ್ತಿದ್ದೇನೆ. ಯಾರೂ ಯಾವುದನ್ನೂ ಕೇಳಿದರೂ ಅವರು ಮಾಡಿದರು, ಇವರು ಮಾಡಿದರು ಎಂದು ಹೇಳುತ್ತಾರೆ. ಆಂಗ್ಲ ಭಾಷೆಯಲ್ಲಿ ಒಂದು ಮಾತಿದೆ. Yes, we have made lot of mistakes in our life. Because, life doesn't come with user's manual. ತಪ್ಪುಗಳು ಆಗಿರಬಹುದು. ಅವುಗಳನ್ನು ಸರಿಪಡಿಸಿಕೊಂಡು, ತಿದ್ದುಪಡಿ ಮಾಡಿಕೊಂಡು ಮುಂದಕ್ಕೆ

ಹೋಗೋಣವೆಂದು ಹೇಳುತ್ತೇನೆ. ಬೆಂಗಳೂರಿನ ವಿಚಾರಕ್ಕೆ ಬಂದಾಗ ನಾವು ಬೋರ್‌ವೆಲ್ ಕೊರೆಯಬೇಕಾದರೆ, BBMP ಯವರು BWSSB ಮೇಲೆ ಹೇಳುವುದು. BWSSB ಯವರು BBMP ಮೇಲೆ ಹೇಳುವುದು. ಇದಕ್ಕೆಲ್ಲಾ ಒಂದು Coordinated team ಮಾಡಿ ನಮ್ಮ ಶಾಸಕರ ನೇತೃತ್ವದಲ್ಲಿ ಆಯಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬೋರ್‌ವೆಲ್‌ಗಳನ್ನು ಕೊರೆಸಬೇಕು. ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಕೇಳುತ್ತಿರುವುದೇನೆಂದರೆ, BWSSBಯಲ್ಲಿ 75 ಟ್ಯಾಂಕರ್ ಇದೆ. 200 ವಾರ್ಡ್ ಇದೆ. ದಯವಿಟ್ಟು, ತಾವು emergency measure ನಲ್ಲಿ ಹಣವನ್ನು ರಿಲೀಸ್ ಮಾಡಿ, 125 extra tanker ಗಳನ್ನು ತೆಗೆದುಕೊಂಡು 200 ವಾರ್ಡ್‌ಗೆ ಪ್ರತಿ ವಾರ್ಡ್‌ಗೆ ಒಂದು ಟ್ಯಾಂಕರ್ ಇರುವಂತೆ ಮಾಡಬೇಕು. ಮುಂದಿನ ದಿನಗಳಲ್ಲಿ ಮಳೆ ಏನಾದರೂ ಬರದಿದ್ದರೆ ಬೆಂಗಳೂರಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಉಲ್ಬಣವಾಗುತ್ತದೆ. ಇದರ ಜೊತೆಗೆ National Water Policy ಬಗ್ಗೆ ಹೇಳಿದರು. ನಾನು ಕೇಳಿಕೊಳ್ಳುತ್ತೇನೆ. State Water Policy, Bangalore Water Policy ಮಾಡಿ ಎಂದು ನಾನು ಕೇಳಿಕೊಳ್ಳುತ್ತೇನೆ. Equal allocation of available water in Bangalore ಮಾಡಬೇಕು. ಇಲ್ಲವಾದರೆ South ಗೆ ಜಾಸ್ತಿ ಬರುತ್ತದೆ. North ಗೆ ಕಡಿಮೆ ಬರುತ್ತದೆ. ನಾವು ನಮ್ಮ ಕ್ಷೇತ್ರದ ಜನರ ಬಳಿಗೆ ಹೋದಂಥ ಸಂದರ್ಭದಲ್ಲಿ ಹೇಳುವುದಕ್ಕೆ ಬಹಳ ತೊಂದರೆ ಆಗುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಗಳೆ, please take a decision to increase the number of shops which are selling this Indian Made Liquor. Political will ಇರುತ್ತದೆ, ತಾವು ಐದು ವರ್ಷ ಇದ್ದೇ ಇರುತ್ತೀರಿ. Honey-moon period ಎನ್ನುವುದನ್ನೆಲ್ಲ ನಾನು ನಂಬುವುದಿಲ್ಲ. You will be there as a Chief Minister for five years. Because you have been given the mandate. ಅದೇ ರೀತಿ, you will be there as a Chief Minister, Five years Happy married lifeನಲ್ಲಿರುತ್ತೀರಿ. ದಯವಿಟ್ಟು, ರಾಜಕೀಯ ಬದ್ಧತೆ ಇರುವಂಥ ನಿರ್ಧಾರಗಳನ್ನು ತೆಗೆದುಕೊಳ್ಳಿ. ನಾವು ನಿಮ್ಮ ಜೊತೆ ಇರುತ್ತೇವೆ. Number of shops ಅನ್ನು ಜಾಸ್ತಿ ಮಾಡಿ. ಇಲ್ಲವಾದರೆ Excise Department ನಲ್ಲಿ irregularity

ಎನಿದೆ ಅದು ಹಾಗೇ ಇರುತ್ತದೆ. Excise Department ನಲ್ಲಿ ತಾವು ಅಭಿವೃದ್ಧಿ ಕಡೆಗೆ ಜಾಸ್ತಿ ಹಣವನ್ನು ಕೊಡಿ. ಈಗ 0.5% ಕೋಡುತ್ತಿದ್ದೀರಿ. 1.5% ಕೊಡಿ. ಅಬಕಾರಿ ಭವನ ಇಲ್ಲ. 12,400 ಕೋಟಿ ರೂಪಾಯಿ ನಮ್ಮ ರಾಜಸ್ವಕ್ಕೆ ಸಂಗ್ರಹ ಮಾಡಿಕೊಡುವಂಥ ಒಂದು ಸಂಸ್ಥೆಗೆ, ನಮ್ಮ ಇಲಾಖೆಗೆ ಅಬಕಾರಿ ಭವನ ಇಲ್ಲ. ಅದಕ್ಕಾಗಿ ಸ್ವಲ್ಪ ಮಾಡಿ ಕೊಡಿ. ಮಾನ್ಯ ಚೆನ್ನಬಸಪ್ಪ ಎಂಬ ಒಬ್ಬರು Joint Commissioner ಇದ್ದರು. ಅವರು 'How to operate the systems in the Department' ಎಂದು ಒಂದು ಮ್ಯಾನುಯಲ್ ಮಾಡಿದ್ದಾರೆ. ಅದನ್ನು proper ಆಗಿ implement ಮಾಡುವುದಕ್ಕೆ ತಾವು ಅಗತ್ಯ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಂಡು ನನಗೆ ಈ ಸಭೆಗೆ ಬರುವುದಕ್ಕೆ ಹಾಗೂ ಮಾತನಾಡುವುದಕ್ಕೆ ಕಾರಣ ನಮ್ಮ ಹೆಬ್ಬಾಳ ಕ್ಷೇತ್ರದ ಮತದಾರ ಪ್ರಭುಗಳು ಹಾಗೂ ನನ್ನ ರಾಜಕೀಯ ಗುರುಗಳಾದಂಥ ಮಾನ್ಯ ಕಟಾ ಸುಬ್ರಮಣ್ಯ ನಾಯ್ಡುರವರು. ಅವರಿಗೆ ಈ ಸಭೆಯ ಮೂಲಕ ನಾನು ವಂದನೆಗಳನ್ನು ತಿಳಿಸುತ್ತಾ, ತಾವು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೂ ಕೂಡ ವಂದನೆಗಳನ್ನು ತಿಳಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಛೇರ್ಮನ್ : ಮಾನ್ಯ ಎಮ್.ಕೆ.ಸೋಮಶೇಖರ್ ರವರೇ, 15 ನಿಮಿಷ ಮಾತನಾಡಿ.

ಶ್ರೀ ಎಮ್.ಕೆ.ಸೋಮಶೇಖರ್ (ಕೃಷ್ಣರಾಜ) : ಅಧ್ಯಕ್ಷರೆ, ಈ ಸರ್ಕಾರ ಸಾಕಷ್ಟು ಒಳ್ಳೆಯ ಯೋಜನೆಗಳನ್ನು ಜಾರಿಗೆ ತಂದಿದೆ. ಈ ಸರ್ಕಾರ ಮಾಡಿದಂಥ ಯೋಜನೆಗಳು ಇತ್ತೀಚಿನ ವರ್ಷಗಳಲ್ಲಿ ಒಂದು ದೊಡ್ಡ ಕ್ರಾಂತಿ ಎಂದರೆ ತಪ್ಪಾಗಲಾರದು. ಒಂದು ದೊಡ್ಡ ಕ್ರಾಂತಿಯನ್ನೇ ಮಾಡಿ ಹೊಸ ರೀತಿಯ, ಹೊಸ ಸರ್ಕಾರವನ್ನು ಕೊಡಬೇಕೆಂದು ಹೇಳಿ ಹೊಸ ಯೋಜನೆಗಳನ್ನು ಹಮ್ಮಿಕೊಂಡಿದೆ. ನಾನು ಕಳೆದ ವಾರ ದೆಹಲಿಯಲ್ಲಿ ಇದ್ದಂಥ ಸಂದರ್ಭದಲ್ಲಿ ಅಲ್ಲಿನ ಒಂದು ಪತ್ರಿಕೆಯಲ್ಲಿ ಮಾನ್ಯ ಸಿದ್ದರಾಮಯ್ಯನವರನ್ನು 'ಕಾಂಗ್ರೆಸ್ಸಿನ ಮೋದಿ' ಎಂದು ವರ್ಣಿಸಿದರು. ನಿನ್ನೆ Indian Express ನಲ್ಲಿ ಕೂಡ ಮಾನ್ಯ ಸಿದ್ದರಾಮಯ್ಯನವರನ್ನು 'ಕರ್ನಾಟಕದ ಕಾಂಗ್ರೆಸ್ಸಿನ ಮೋದಿ' ಎಂದು ಬರೆದಿದ್ದಾರೆ. ಅದಕ್ಕೆ ನನ್ನ ವಿರೋಧವಿದೆ. ಏಕೆಂದರೆ ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ. ಆದರೆ ನಮ್ಮ

ನಾಯಕರು, ಮಾನವೀಯತೆಯ ದೃಷ್ಟಿಯಿಂದ ಎಲ್ಲರಿಗೂ ಸಮಾನವಾಗಿ, ಅದರಲ್ಲಿಯೂ ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಎಲ್ಲರಿಗೂ ಸಮಾನತೆಯನ್ನು ಕೊಡಬೇಕೆಂದು ಹೇಳಿ ಹೊರಟಿರತಕ್ಕಂಥವರು. ಇಂಥ ಒಂದು ಸರ್ಕಾರ ಸಾಕಷ್ಟು ಒಳ್ಳೆಯ ಯೋಜನೆಗಳನ್ನು ಜನರಿಗೆ ಕೊಡಬೇಕೆಂದು ಹೇಳಿ, ಒಂದು ರೂಪಾಯಿಗೆ ಒಂದು ಕೆ.ಜಿ.ಯಂತೆ 30 ಕೆ.ಜಿ. ಅಕ್ಕಿ ಕೊಡುವಂಥದ್ದು ಸಾಮಾನ್ಯ ವಿಚಾರವಲ್ಲ. ಅದನ್ನು ಜಾರಿಗೆ ತರಬೇಕಾದರೆ ಸಾಕಷ್ಟು ಶ್ರಮ ಇದೆ. ಅದರ ಹಿನ್ನೆಲೆಯಲ್ಲಿ ಸಾಕಷ್ಟು exercise ಗಳನ್ನು ಮಾಡಬೇಕಾಗಿದೆ. ನಮಗೆ confidence ಇದೆ. ಮಾನ್ಯ ಮುಖ್ಯಮಂತ್ರಿಗಳಿಗೆ ಏಳು ಬಜೆಟ್ ಮಂಡಿಸಿ ಅವರಿಗೆ ಅನುಭವ ಇದೆ. ಹಣ ಹೇಗೆ ತರಬೇಕು? ಯಾವ ರೀತಿಯಲ್ಲಿ ಇದನ್ನು ಪೂರೈಸಬೇಕು? ಎಂಬುದು ಅವರಿಗೆ ತಿಳಿದಿದೆ. ಹಾಲು ಉತ್ಪಾದಕರಿಗೆ ರೂ.2/ ಇದ್ದಂಥ ಸಬ್ಸಿಡಿಯನ್ನು ರೂ.4/- ರೂಪಾಯಿಗೆ ಮಾಡಿದ್ದಾರೆ. SC/ST ಹಾಗೂ ಹಿಂದುಳಿದವರಿಗೆ, ಅಲ್ಪಸಂಖ್ಯಾತರಿಗೆ ಸಾಲ ಮನ್ನಾ ಮಾಡಿರುವುದು ಇತ್ತೀಚಿನ ವರ್ಷಗಳಲ್ಲಿ ದೊಡ್ಡ ಬದಲಾವಣೆ. ಆರೋಗ್ಯ ವಿಚಾರವನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಆರೋಗ್ಯ ಇಲಾಖೆಯಲ್ಲಿ ಸಮಗ್ರವಾಗಿ ಬದಲಾವಣೆಗಳು ಆಗಬೇಕಾಗಿದೆ. ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ BPL/APL ಎಂದು ಹೇಳಿ ಕೆಲವರಿಗೆ ಚಾರ್ಜ್ ಮಾಡುವಂಥದ್ದು, ಇಂತಿಷ್ಟು ಹಣ ಕೊಡಬೇಕೆಂದು ಹೇಳುವಂಥದ್ದು, X-ray, scanning ಇವುಗಳನ್ನು ಮಾಡಿಸಲು ಜನರು ಪಡುತ್ತಿರುವಂಥ ತೊಂದರೆಗಳು, kidney failure ಆದರೆ ಅವರಿಗೆ ಡಯಾಲಿಸಿಸ್ ಮಾಡಿಸಲಿಕ್ಕೆ ಪಡುತ್ತಿರುವ ತೊಂದರೆಗಳು ಹೀಗೆ ನಾನಾ ರೀತಿಯ ತೊಂದರೆಗಳಿವೆ. ಆರೋಗ್ಯ ಇಲಾಖೆಗೆ ಕೊಡತಕ್ಕಂಥ ಹಣವನ್ನು ಸಮಗ್ರವಾಗಿ ಬದಲಾವಣೆಯನ್ನು ಮಾಡಿ ಅದು ನಿಜವಾಗಿ ಬಡವರಿಗೆ ತರತಕ್ಕಂಥ ಮತ್ತು medicine ಕೊಡತಕ್ಕಂಥ ವಿಚಾರದಲ್ಲಿ ಪ್ರತಿಯೊಂದು ಆಸ್ಪತ್ರೆಯಲ್ಲಿ treatment ಉಚಿತವಾಗಿ ಸಿಕ್ಕಿದ್ದರೂ ಕೂಡ ಮಾತ್ರೆಗಳಿಗೆ, ಸ್ಕ್ಯಾನಿಂಗ್‌ಗೆ, ಎಕ್ಸ್‌ರೇಗಳಿಗೆ ಅವರು ಹಣ ತರುವುದಕ್ಕೆ ಆಗುತ್ತಿಲ್ಲ. ಅಂಥ ಒಂದು ಕಷ್ಟದ ಪರಿಸ್ಥಿತಿಯಲ್ಲಿ ಬಡ ಜನರು ಇದ್ದಾರೆ. ಕೆಲವೊಂದು ಸಮಗ್ರವಾದ ಬದಲಾವಣೆಗಳನ್ನು ತರಬೇಕಾಗಿದೆ. Medicine ಅನ್ನು ಉಚಿತವಾಗಿ ಕೊಡುವ ರೀತಿಯಲ್ಲಿ ಪಡಿತರ system ರೀತಿಯಲ್ಲಿ ಅಥವಾ ಬೇರೆ ಯಾವುದೇ

ರೀತಿಯಲ್ಲಿ ಅವರಿಗೆ ನೇರವಾಗಿ Medicine ಸಿಗುವಂಥ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಹಾಗೆ ಮಾಡಿದಾಗ ಬಡವರಿಗೆ ಹೆಚ್ಚು ಅನುಕೂಲಗಳು ಆಗುತ್ತವೆ. ಈ ಜಿಲ್ಲಾ ಕೇಂದ್ರಗಳಲ್ಲಿ heart ಗೆ ಸಂಬಂಧಪಟ್ಟಂಥ ಆಸ್ಪತ್ರೆಗಳು ಅಥವಾ ಇರುವಂಥ ಆಸ್ಪತ್ರೆಗಳಲ್ಲಿ ಹೃದಯ ಖಾಯಿಲೆಗೆ ಸಂಬಂಧಪಟ್ಟ ವಿಭಾಗಗಳನ್ನು ತೆರೆದು, ಅಲ್ಲಿ ಅವರಿಗೆ treatment ಗಳನ್ನು ಕೊಡತಕ್ಕಂಥದ್ದು, ಉಚಿತವಾಗಿ operation ಗಳನ್ನು ಮಾಡತಕ್ಕ ವ್ಯವಸ್ಥೆಗಳು ಆಗಬೇಕಾಗಿದೆ. ಈ ರೀತಿ ಮಾಡುವ ಮುಖಾಂತರ ಬಡ ಜನರಿಗೆ ಅನುಕೂಲತೆಗಳನ್ನು ಮಾಡಿಕೊಡಬೇಕಾಗಿದೆ. ಜೊತೆಗೆ ಮಹಿಳೆಯರ ಮೇಲಿನ ದೌರ್ಜನ್ಯ, ಅಸಹಾಯಕ ಒಂಟಿ ಮಹಿಳೆಯ ಮೇಲೆ ಆಗತಕ್ಕಂಥ ದೌರ್ಜನ್ಯಗಳನ್ನು ತಡೆಗಟ್ಟಲು ಒಳ್ಳೆಯ ಕಾರ್ಯಕ್ರಮಗಳನ್ನು ಕೊಡುವುದರಲ್ಲಿದೆ. ಎಲ್ಲಾ ನಗರ, ಪಟ್ಟಣಗಳಲ್ಲಿ ಮಹಿಳೆಯರಿಗೆ ವಿಶ್ರಾಂತಿ ಗೃಹಗಳನ್ನು ಪ್ರಾರಂಭ ಮಾಡಿ ಯಾರದೋ ಆಮಿಷಕ್ಕೊ, ಯಾವುದೋ ಕಾರಣಗಳಿಗೋ ಮನೆ ಬಿಟ್ಟು ಬಂದಂಥ ಮಹಿಳೆಯರನ್ನು ರಕ್ಷಿಸುವ ಕೆಲಸ ಆಗಬೇಕು. ಮೈಸೂರಿನಲ್ಲಿ ಶಕ್ತಿಧಾಮವೆಂದು ಇದೆ. ಅಲ್ಲಿ ಯಾರು ಈ ರೀತಿ ಮನೆ ಬಿಟ್ಟು ಬಂದಂಥ ಮಹಿಳೆಯರನ್ನು ವಾರಗಳ ಕಾಲ, ತಿಂಗಳುಗಳ ಕಾಲ ರಕ್ಷಣೆ ಮಾಡಿ ಅವರನ್ನು ಮನೆಗಳಿಗೆ ಕಳುಹಿಸತಕ್ಕಂಥ ಕೆಲಸಗಳು ಆಗುತ್ತಿದೆ. ಯಾವುದೋ ಒಂದು ಕಾರಣದಿಂದ ಮನೆ ಬಿಟ್ಟು ಬಂದಂಥ ಮಹಿಳೆಯರನ್ನು ಮತ್ತೆ ಅಲ್ಲಿಗೆ ಸೇರಿಸತಕ್ಕಂಥದ್ದು. ರಾತ್ರಿ ವೇಳೆ ಬಸ್ ತಪ್ಪಿ ಬಂದಂಥ, ಹಾದಿ ತಪ್ಪಿ ಬಂದಂಥವರಿಗೆ, ಈ ವಿಶ್ರಾಂತಿ ಗೃಹಗಳಲ್ಲಿ ಮಹಿಳೆಯರಿಗೆ ರಕ್ಷಣೆಯನ್ನು ಕೊಟ್ಟಾಗ ಅವರಿಗೆ ಅವತ್ತಿನ ದಿನ ಆಗುತ್ತಿದ್ದ ಅನಾಹುತಗಳಿಂದ ತಪ್ಪಿಸಿಕೊಂಡರೆ ಮತ್ತೆ ಅವರು ಸರಿದಾರಿಯಲ್ಲಿ ಹೋಗತಕ್ಕಂಥ ವ್ಯವಸ್ಥೆಗಳು ಆಗುತ್ತದೆ. ಪೊಲೀಸ್ ಇಲಾಖೆಯಲ್ಲಿ ಇರತಕ್ಕಂಥ ಮಹಿಳಾ ಪೊಲೀಸರುಗಳನ್ನು ಬಳಸಿಕೊಂಡು ಆದಷ್ಟು ಕಣ್ಣಲ್ಲಿ ಕಣ್ಣಿಟ್ಟು ಬಸ್ ಸ್ಟಾಂಡ್‌ಗಳಲ್ಲಿ, ರೈಲ್ವೆ ನಿಲ್ದಾಣಗಳಲ್ಲಿ ಮಹಿಳೆಯರನ್ನು watch ಮಾಡತಕ್ಕಂಥದ್ದು, ತೊಂದರೆಗೆ ಒಳಗಾದವರನ್ನು ರಕ್ಷಣೆ ಮಾಡತಕ್ಕಂಥದ್ದನ್ನು ಎಲ್ಲಾ ನಗರ ಪ್ರದೇಶಗಳಲ್ಲಿ, ಪಟ್ಟಣ ಕೇಂದ್ರಗಳಲ್ಲಿ ಮಾಡಿದಾಗ ಮಹಿಳೆಯರಿಗೆ ರಕ್ಷಣೆ ಸಿಗುವಂಥ ಕೆಲಸ ಆಗುತ್ತದೆ. ನಗರ ಪ್ರದೇಶಗಳಲ್ಲಿ ವಸತಿ ಸಮಸ್ಯೆ ಬಹಳ ಇದೆ. ಕಳೆದ ಹತ್ತು ವರ್ಷಗಳಿಂದ ಯಾವುದೇ ಒಂದು ಮನೆಯನ್ನು ನಗರ ಪ್ರದೇಶಗಳಿಗಾಗಲಿ,

ಬಡವರಿಗಾಗಲಿ ಕಟ್ಟಿ ಕೊಡಲಿಲ್ಲ. ಕೇಂದ್ರ ಸರ್ಕಾರದ ರಾಜೀವ್ ಗಾಂಧಿ ಆವಾಸ್ ಯೋಜನೆಯಲ್ಲಿ ಬರತಕ್ಕಂಥ ಸ್ಲಮ್ ಮನೆಗಳನ್ನು ಬಿಟ್ಟರೆ ಬೇರೆ ಯಾವುದೇ ಮನೆಗಳು ನಿರ್ಮಾಣ ಆಗಿಲ್ಲ. ನಗರ ಪ್ರದೇಶಗಳಲ್ಲಿ ಒತ್ತಡ ಹೆಚ್ಚಾಗಿ ಸಣ್ಣ ಸಣ್ಣ ಮನೆಗಳಿಗೆ ರೂ.1,000/– ರೂ.2,000/–, ರೂ.3,000/– ಬಾಡಿಗೆ ಕೊಡತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಬಡವ ತಾನು ದುಡಿಯುವ ಹಣದಲ್ಲಿ ರೂ.1,000/–, ರೂ. 2,000/–, ರೂ.3,000/– ಕೊಟ್ಟು ಬಾಡಿಗೆ ಕೊಡಲಾರದ ಪರಿಸ್ಥಿತಿ ನಿರ್ಮಾಣವಾಗಿದೆ. ಕೇಂದ್ರ ಸರ್ಕಾರದಲ್ಲಿ ರಾಜೀವ್ ಗಾಂಧಿ ಆವಾಸ್ ಯೋಜನೆಯಲ್ಲಿ ಎಷ್ಟು ಬೇಕಾದರೂ ಹಣ ಕೊಡುತ್ತಿದ್ದಾರೆ. ಆ ಹಣವನ್ನು ಬಳಸಿಕೊಂಡು ಮನೆಗಳನ್ನು ಕಟ್ಟಿಸಿಕೊಡತಕ್ಕಂಥದ್ದು, ರೂ. 3ರಿಂದ 4 ಲಕ್ಷ ರೂಪಾಯಿಗಳವರೆಗೆ ಹಣ ಒಂದು ಕುಟುಂಬಕ್ಕೆ ಸಿಗುವಂಥ ವ್ಯವಸ್ಥೆ ಇದೆ.

ಸರ್ಕಾರಿ ಭೂಮಿಗಳೆಲ್ಲಿದೆ ಅಲ್ಲಿ ಉಚಿತವಾಗಿ ಸರ್ಕಾರಿ ಭೂಮಿಗಳನ್ನು ಕೊಟ್ಟು Ground+2, Ground+3 ಮನೆಗಳನ್ನು ನಗರ ಪ್ರದೇಶಗಳಲ್ಲಿ ಕಟ್ಟಿಕೊಟ್ಟಾಗ ಹೆಚ್ಚು ಜನ ಬಡವರಿಗೆ ಈ ರಾಜೀವ್ ಗಾಂಧಿ ಆವಾಸ್ ಯೋಜನೆಯಲ್ಲಿ ಮನೆಗಳನ್ನು ಕಟ್ಟಿ ಕೊಡಬಹುದು. ಎಲ್ಲಾ ಜಾತಿ, ಜನಾಂಗಕ್ಕೂ ಕೂಡ ಮಾಡಿಕೊಡಬಹುದಾಗಿದೆ. ನಗರ ಪ್ರದೇಶಗಳಲ್ಲಿ ಎಲ್ಲೆಲ್ಲಿ ಹಳೆ ಮನೆಗಳು ಶಿಥಿಲವಾಗಿದೆ ಅಂತಹ ಮನೆಗಳನ್ನು ಸಹ ಕಟ್ಟುವುದಕ್ಕೆ ಈ ಯೋಜನೆಯಲ್ಲಿ ಅವಕಾಶವಿದೆ. ಹೆಚ್ಚೆಚ್ಚು ಮನೆಗಳನ್ನು ಕಟ್ಟುವುದರಿಂದ ವಸತಿ ಸಮಸ್ಯೆಯನ್ನು ಪರಿಹಾರ ಮಾಡಬಹುದು. ಮತ್ತೆ, ಕೃಷಿ ಇಲಾಖೆಯಲ್ಲೂ ಕೂಡ ಆಮೂಲಾಗ್ರ ಬದಲಾವಣೆ ಆಗಬೇಕಾಗಿದೆ. ಕೃಷಿ ಆಯೋಗವನ್ನು ಮಾಡುತ್ತೇವೆಂದು ಹೇಳಿದ್ದಾರೆ. ಅದರ ಮುಖಾಂತರ ರೈತರಿಗೆ, ಅವರು ಬೆಳೆದಂಥ ಬೆಳೆಗಳಿಗೆ ಉತ್ತಮ ಬೆಲೆ ಸಿಗುವಂತೆ ಮಾಡುವುದು ಕೃಷಿ ಇಲಾಖೆಯ ಬಹಳ ಮುಖ್ಯವಾದ ಕೆಲಸವಾಗಿದೆ. ಅದು ಬಹಳ ಎಚ್ಚರಿಕೆಯಿಂದ ಕೆಲಸ ಮಾಡಿದರೆ ಖಂಡಿತ ಇದನ್ನು ತಪ್ಪಿಸಬಹುದು. ಒಂದೇ ತರಹದ ಬೆಳೆಯನ್ನು ಎಲ್ಲಾ ಕಡೆಯೂ ಬೆಳೆಯುವುದು, ಆ ಬೆಳೆ ಜಾತಿ ಬಂದಾಗ ಅದಕ್ಕೆ ಸರಿಯಾದ ಬೆಲೆ ಸಿಗದೇ ರಸ್ತೆಯಲ್ಲಿ ಚೆಲ್ಲುವುದನ್ನು ನಾವು ನೋಡುತ್ತಿದ್ದೇವೆ. ಕೃಷಿ ಇಲಾಖೆ ಈಗ ಬದಲಾವಣೆಗೊಂಡಿದ್ದು computerization ಆಗಿದೆ. ಪ್ರತಿಯೊಬ್ಬ ರೈತನ ಹತ್ತಿರ mobile phoneಗಳಿವೆ. ಆ ಮೊಬೈಲ್ ಫೋನ್‌ಗೆ voice

message ಕಳುಹಿಸುವುದರ ಮುಖಾಂತರ ಇಂತಿಥ ಕಡೆ ಇಂತಿಂಥ ಬೆಳೆಗಳನ್ನು ಬೆಳೆಯಿರಿ. ಇಂತಿಷ್ಟೇ ಜನ ಇಂತಿಷ್ಟೇ ಬೆಳೆಗಳನ್ನು ಬೆಳೆಯಿರಿ ಎಂದು ಮೊಬೈಲ್ ಸಂದೇಶ ಕಳುಹಿಸುವಂಥ ವ್ಯವಸ್ಥೆಯನ್ನು ಬಹಳ ಕಟ್ಟುನಿಟ್ಟಾಗಿ ಜಾರಿಗೆ ತಂದರೆ ಒಂದೇ ಬಾರಿಗೆ ಒಂದೇ ರೀತಿಯ ಹೆಚ್ಚು ಬೆಳೆ ಬಂದು ಅದರಿಂದ ಆಗತಕ್ಕ ಅನಾಹುತಗಳನ್ನು ತಪ್ಪಿಸಬಹುದು. ನಮ್ಮ ಇಡೀ ರಾಜ್ಯದ ಜನತೆ ಈ ಸರ್ಕಾರದಿಂದ ಸಾಕಷ್ಟು ಬದಲಾವಣೆಯನ್ನು ಬಯಸುತ್ತಿರುವುದರಿಂದ ಮುಖ್ಯಮಂತ್ರಿಗಳ ಮೇಲೆ ಬಹಳಷ್ಟು ಒತ್ತಡವಿದೆ. ಇಡೀ ಎಲ್ಲಾ ಶಾಸಕರೂ ಸಹ ಅವರಿಂದ ಬದಲಾವಣೆಯನ್ನು ಬಯಸುತ್ತಿದ್ದಾರೆ. ಇಡೀ ರಾಜ್ಯದ ಜನತೆ ಬಯಸುತ್ತಿದ್ದಾರೆ. ಜೊತೆಗೆ ಮಂತ್ರಿಮಂಡಲದಲ್ಲಿರುವಂಥ ಎಲ್ಲರೂ ಸಹ ಸಮಾನವಾಗಿ ಸಹಕರಿಸಿದರೆ ಖಂಡಿತವಾಗಿ ಬದಲಾವಣೆ ಮಾಡಬಹುದು. ಕೃಷಿ ಸಚಿವರಾದಂತ ಕೃಷ್ಣ ಭೈರೇಗೌಡರು ಯುವಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದಂಥ ನಮ್ಮ ಯು.ಟಿ.ಖಾದರ್‌ರವರು ಯುವಕರು, ಇವರುಗಳೆಲ್ಲಾ ಹೆಚ್ಚು ಹೆಚ್ಚು ಶ್ರಮ ವಹಿಸಿ ಕೆಲಸಗಳನ್ನು ಮಾಡಿದರೆ ಖಂಡಿತ ಬದಲಾವಣೆಗಳನ್ನು ಮಾಡಬಹುದು. ಆ ಮುಖಾಂತರ ಏನು ಜನ expect ಮಾಡಿದ್ದಾರೆ ಅದನ್ನು ನೀಡಬಹುದು. ಶ್ರೀ ಶಿವಲಿಂಗೇಗೌಡರು ಮಾತನಾಡುತ್ತಾ ತಿಂಗಳಿಗೆ ಕುಡಿತದಿಂದ ಒಬ್ಬ ಬಡ ಕುಟುಂಬದ ಇಂತಿಷ್ಟು ಆದಾಯ ಸೋರಿಕೆಯಾಗುತ್ತಿದೆ, ಸಾವಿರಾರು ರೂಪಾಯಿ ಖರ್ಚಾಗುತ್ತಿದೆ ಎಂದು ಹೇಳಿದರು. ನಮ್ಮ ನಾಯಕರು ಆರಂಭದಲ್ಲೇ ಒಂದು ಮಾತನ್ನು ಹೇಳಿದರು, ಹೊಸ ವಿಚಾರಗಳನ್ನು ಕೊಟ್ಟಾಗ, ಒಬ್ಬ ಬಡವ ತಾನು ಎಷ್ಟೇ ಸಂಪಾದನೆ ಮಾಡಿದರೂ ರಾತ್ರಿ ಕುಡಿಯುವುದಕ್ಕೆ ಹೋದಾಗ ಒಂದು quarter ಕುಡಿದರೆ 50 ರೂಪಾಯಿ ಆಗುತ್ತದೆ, 2quarter ಕುಡಿದರೆ 100 ರೂಪಾಯಿ ಕಳೆದುಕೊಳ್ಳುತ್ತಾನೆ. ಅವನ ಸಂಪಾದನೆಯ ಅರ್ಧ ಭಾಗ ಅಥವಾ ಪೂರ್ಣ ಭಾಗವನ್ನು ಅಲ್ಲೇ ಕಳೆದುಕೊಳ್ಳುತ್ತಾನೆ. ಆ ಕಾರಣಕ್ಕಾಗಿ ಏನಾದರೂ ಕಡಿಮೆ ದರದ ಮದ್ಯವನ್ನು ಕೊಡುವುದಕ್ಕೆ ಸಾಧ್ಯವಿದೆಯೇ ಯೋಚನೆ ಮಾಡಿ ಎಂದು ಹೇಳಿದಾಕ್ಷಣಕ್ಕೆ ಅದರಲ್ಲೂ ರಾಜಕಾರಣ ಮಾಡಿ, ಯಾರೋ liquor lobby ಯವರು ಮುಖ್ಯಮಂತ್ರಿಗಳ ಹಿಂದೆ ಇದ್ದಾರೆ ಎನ್ನುವ ಮಾತುಗಳನ್ನು ಹೇಳಿದರು. ಪ್ರತಿಯೊಂದು ವಿಷಯವನ್ನೂ ಕೂಡ ಸರಿಯಾಗಿ ಯೋಚನೆ ಮಾಡಿದಾಗ, ಅದರ ಹಿಂದೆ ಏನಿದೆ ಎಂದು ಅರ್ಥ ಮಾಡಿಕೊಂಡಾಗ ಅದನ್ನು

ಬದಲಾವಣೆ ಮಾಡುವುದಕ್ಕೆ ಸಾಧ್ಯತೆಯಿದೆ. ಇದು ಕೂಡ ಬಹಳ ಮುಖ್ಯವಾದಂಥ ವಿಚಾರ. ಒಂದು ಕುಟುಂಬದಲ್ಲಿ ಒಬ್ಬ ಒಂದು ದಿನಕ್ಕೆ ಕುಡಿಯುವುದಕ್ಕೆ ಒಂದು quarterನಲ್ಲಿ ನಿಶೆ ಏರುವುದಿಲ್ಲವೆಂದು 100, 150 ಕಳೆದುಕೊಂಡರೆ, ಆ ಕುಟುಂಬ ನಾಶವಾಗುವ ದಿಕ್ಕಿನಲ್ಲಿ ಹೋಗುತ್ತಿರುತ್ತದೆ. ಅದಕ್ಕೆ ಆ ದಿಕ್ಕಿನಲ್ಲಿ, ಏನಾದರೂ ಅವನಿಗೆ ಕಡಿಮೆ ದರದಲ್ಲಿ ಮದ್ಯ ಕೊಡುವುದಕ್ಕೆ ಸಾಧ್ಯತೆಯಿದೆಯೇ ಎಂದು ಯೋಚನೆ ಮಾಡುವುದು, ಮಾಧ್ಯಮಗಳು, ಪ್ರತಿಯೊಬ್ಬರೂ ಆ ದಿಕ್ಕಿನಲ್ಲಿ ಯೋಚನೆಗಳನ್ನು, ಚರ್ಚೆಗಳನ್ನು ಮಾಡಿದರೆ ಆ ಕುಟುಂಬಗಳಿಗೆ ಕಡಿಮೆ ದರದಲ್ಲಿ ಮದ್ಯವನ್ನೇನಾದರೂ ಕೊಟ್ಟರೆ ಆ ಹಣ ಉಳಿತಾಯವಾಗುತ್ತದೆ ಎನ್ನುವ ದೃಷ್ಟಿಯಿಂದ ಒಂದು ಸರಿಯಾದ ತೀರ್ಮಾನವನ್ನು ಮುಖ್ಯಮಂತ್ರಿಗಳು ತೆಗೆದುಕೊಳ್ಳಬೇಕಾಗಿದೆ. ಮತ್ತೆ, ಸೋಲಾರ್ system ಅನ್ನು ಎಲ್ಲಾ ಕಡೆ ತರುವುದರಿಂದ, ವಿದ್ಯುತ್ ಅಭಾವವನ್ನು ತಪ್ಪಿಸಬಹುದು. Solar system ಅನ್ನು ಪಂಪುಸೆಟ್ಟುಗಳಿಗೂ ಸಹ ಹಾಕಬಹುದಾಗಿದೆ. ಸಾಕಷ್ಟು ಪಂಪುಸೆಟ್ಟುಗಳು solar system ನಲ್ಲಿ ಓಡುತ್ತಿವೆ. ಅದೇ ರೀತಿ ಗ್ರಾಮೀಣ ಪ್ರದೇಶಗಳಲ್ಲೂ ಸಹ solar system ಜಾರಿಗೆ ತಂದರೆ ಅದು ಹೆಚ್ಚು ಹೆಚ್ಚು ಅನುಕೂಲವಾಗುತ್ತದೆ. ಆ ದಿಕ್ಕಿನಲ್ಲಿ ಸರ್ಕಾರ ಚಿಂತನೆ ಮಾಡಿ solar systemಗೆ ಹೆಚ್ಚು ಹೆಚ್ಚು ಅವಕಾಶಗಳನ್ನು ಕಲ್ಪಿಸಬೇಕು. ಈ ರೀತಿ ನಾನಾ ವಿಚಾರಗಳನ್ನು ನಮ್ಮ ರಾಜ್ಯಪಾಲರ ಭಾಷಣದ ಪುಸ್ತಕದಲ್ಲಿ ಹೇಳಿದ್ದಾರೆ. ಅದನ್ನು ಮತ್ತೆ ಮತ್ತೆ ಹೇಳುವುದಕ್ಕೆ ಹೋಗುವುದಿಲ್ಲ. ಇಷ್ಟು ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

ಛೇರ್ಮನ್ : ಈಗ ಈ ಚರ್ಚೆಯನ್ನು ಇವತ್ತಿಗೆ ಸೀಮಿತ ಮಾಡೋಣ. ಈಗ ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆಯಿದೆ. ಮಾನ್ಯ ರಮೇಶ್‌ಕುಮಾರ್‌ರವರು.

ಶ್ರೀ ಕೆ.ಆರ್.ರಮೇಶ್‌ಕುಮಾರ್ : ಶ್ರೀ ಶಿವಶಂಕರ್‌ರೆಡ್ಡಿಯವರು ಪ್ರಾರಂಭ ಮಾಡುತ್ತಾರೆ. ನಂತರ ನಾನು ಮಾತನಾಡುತ್ತೇನೆ.

ಛೇರ್ಮನ್ : ಆಯಿತು.